
ಕೊಡಗು ಸಂಗಾತಿ

ಜನವರಿ 1 ರಿಂದ 31, 2003 ಪಾಕ್ಷಿಕ ಪತ್ರಿಕೆ (ಪೆರಾರ್ಡೆ 17-30 ಪೊನ್ನಿ 1-17)

1055c, ದೊಡ್ಡಣ್ಣ ಬಿಲ್ಡಿಂಗ್ಸ್, ಹುಣಸೂರು ರಸ್ತೆ, ಹಿನ್‌ಕಲ್ಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R. No. KA/SK/MYS-88/2003 ಸಂಪುಟ : 6 ಸಂಚಿಕೆ : 19-20 ಪುಟಗಳು : 24 ಬೆಲೆ ರೂ. : 12-00



ಲೇಖನ : ಒಳಪುಟದಲ್ಲಿ.

ಅರೆಗನ್ನಡ, ನಡುಗನ್ನಡ, ಮಧ್ಯಗನ್ನಡದ ಮಹಾಕವಿ ಮುದ್ದಣ್ಣ

ಹಿತೈಷಿಗಳಿಗೂ, ಸಂಗಾತಿ ಚಂದದಾರರಿಗೂ 2003 ರ ಕ್ರೈಸ್ತ ವರ್ಷದ ಶುಭಾಶಯಗಳು

ವಿನಂತಿ

ಕೆನರಾ ಬಂಡಾಯದ ಸೇನಾಧಿಪತಿ ದಿ|| ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮರಣಾರ್ಥ ಪುಸ್ತಕ ರಚನೆ

1837 ರ ಅಕ್ಟೋಬರ್ 31 ರಲ್ಲಿ ದಿ|| ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಮಡಿಕೇರಿಯ ಕೋಟೆಯೊಳಗಿನ ಬಾವಿಕಟ್ಟೆಯಲ್ಲಿ ಬ್ರಿಟಿಷರು ಸರ್ವನಾಡ ಪಠೇಲರನ್ನು, ಸ್ಥಳೀಯರನ್ನು ಬರಮಾಡಿಸಿ ನೇಣುಗಂಬಕ್ಕೆ ಏರಿಸಿರುವುದು ಇಂದು ಇತಿಹಾಸವಾಗಿದೆ. ದೇಶದ ಇತಿಹಾಸದ ಪುಟಗಳನ್ನು ತಿರುವಿದಾಗ 1827 ರ ಕಿತ್ತೂರು ಬಂಡಾಯ ಮೊದಲನೆಯದಾದರೆ, 1837 ರ ಕೆನರಾ ಬಂಡಾಯ ಭಾರತದ ಎರಡನೆಯ ಸ್ವಾತಂತ್ರ್ಯ ದಂಗೆಯೆಂದು, ಮೂರನೆಯದಾಗಿ 1857 ಸಿಪಾಯಿ ದಂಗೆಯೆಂದು ಕರೆಯಲ್ಪಟ್ಟಿದೆ. ಅಂತಹ ವೀರ ಪರಂಪರೆಯಲ್ಲಿ ಬರುವ "ಕೆನರಾ ಬಂಡಾಯ"ದ ಮುಖ್ಯ ಸೇನಾಧಿಪತಿಯಾಗಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿ ವೀರಗಂಬ ಏರಿ ಹುತಾತ್ಮರಾದ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯ ಮತ್ತು ಇತರ 12 ಮಂದಿ ಹುತಾತ್ಮ ವೀರ ಪುರುಷರ ಸ್ಮರಣೆಯನ್ನು ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಈ ಮೇಲಿನ ದಿಸೆಯಲ್ಲಿ ಪುಸ್ತಕ ರಚಿಸಲು ಈಗಾಗಲೇ ಶುರು ಮಾಡಿದ್ದೇವೆ. 1-11-02 ರಂದು ಅಪ್ಪಯ್ಯ ಗೌಡರು ಹುಟ್ಟಿ ಬೆಳೆದ ಬಲಮುರಿಯ ಐನ್ ಮನೆಯಲ್ಲಿ ಕಾರೋಣರಿಗೆ ಇಟ್ಟು ಮಾಹಿತಿ ಸಂಗ್ರಹಕ್ಕೆ ಪ್ರಾರಂಭಿಸಿದ್ದೇವೆ. ಜನಾಂಗದ ಅಭಿಮಾನಿಗಳಾದ ತಾವುಗಳು ತಮ್ಮ ಅರಿವಿಗೆ ಬಂದದ್ದನ್ನು ಸಂಗಾತಿಗೆ ಕಳುಹಿಸುವಂತೆ ವಿನಂತಿ. ಉಳಿದಂತೆ ಪ್ರಯತ್ನ ನಮ್ಮದು. ಅಷ್ಟೇ ಅಲ್ಲ ಹಿತೈಷಿಗಳು ತಮ್ಮ ತನು, ಮನ, ಧನ, ನೀಡಿ ಸಹಕರಿಸುವುದನ್ನು ಮಾತ್ರ ಮರೆಯಬಾರದು. ಸಂಘ ಸಂಸ್ಥೆಗಳು ಈ ಬಗ್ಗೆ ಕಾಳಜಿ ವಹಿಸುವುದು ಸೂಕ್ತ.

ತಮ್ಮಲ್ಲಿರುವ ಮಾಹಿತಿಗಳು ತಾಳೆಗರಿ, ಓಲೆಗರಿ, ಬರವಣಿಗೆ ಆಗಿನ ಕಾಲದ ಕತ್ತಿ, ಕೋವಿ, ಇತ್ಯಾದಿ ಆಯುಧಗಳು, ನಾಡು ನುಡಿಯಲ್ಲಿ ಬಾಯಿಂದ ಬಾಯಿಗೆ ಬಂದ ಮಾಹಿತಿ ಆಧಾರಗಳು ಹಾಗೂ ಇನ್ನು ಇತರೆ ಮಾಹಿತಿಗಳನ್ನು ಸಂಗಾತಿಗೆ ನೀಡಿದಲ್ಲೂ ಸ್ವೀಕರಿಸುತ್ತೇವೆ. ಕೆಲವೊಮ್ಮೆ ಖುದ್ದು ಪರಿಶೀಲಿಸಬೇಕೆಂದರೆ ನಾವುಗಳು ಖಂಡಿತ ಹಾಜರಾಗುತ್ತೇವೆ. ತಿಳಿದಿರಲಿ 31-10-2003 ರಂದು ಪುಸ್ತಕ ಬಿಡುಗಡೆಯಾಗಲು ಪ್ರಯತ್ನಿಸುತ್ತಿದ್ದೇವೆ. ಮಾಹಿತಿಗಳು ಮಾರ್ಚ್ 2003ರ ಒಳಗಡೆ ನಮಗೆ ಖಂಡಿತ ತಲಪಬೇಕು. ಪುಸ್ತಕವನ್ನು ಬರೆಯಲಿದ್ದಾರೆ ಮಂಡ್ಯದ ಖ್ಯಾತ ಸಾಹಿತಿ, ಕವಿ, ಬರಹಗಾರ ಲೇಖಕರು ಆದ ಶಿವಳ್ಳಿ ಕೆಂಪೇಗೌಡರು. ಇವರ ಪರಿಚಯವನ್ನು ನವಂಬರ್ ತಿಂಗಳಿನ ಸಂಚಿಕೆಯಲ್ಲಿ ನೀಡಲಾಗಿದೆ. ಶ್ರೀಯುತರಿಗೆ ಸರ್ವ ವಿಧದಲ್ಲೂ ಸಹಕರಿಸುವಂತೆ ನನ್ನ ವಿನಮ್ರ ವಿನಂತಿ.

-ಪಟ್ಟಡ ಪ್ರಭಾಕರ, ಗೌರವ ಸಂಪಾದಕ, ಕೊಡಗು ಸಂಗಾತಿ.

ಗ್ರಾಮ ದರ್ಶನ

ಶ್ರೀ ಶಿವಳ್ಳಿ ಕೆಂಪೇಗೌಡ



ಕೊಡಗು ಸಂಗಾತಿ ಪತ್ರಿಕೆಯಲ್ಲಿ ಇನ್ನುಂದೆ ಕೊಡಗಿನ ಆಯ್ದ ಗ್ರಾಮಗಳ ವಿಶೇಷ ಲೇಖನವನ್ನು "ಗ್ರಾಮದರ್ಶನ" ಎಂಬ ಶೀರ್ಷಿಕೆಯಡಿ ಪರಿಚಯಿಸಲಿದ್ದಾರೆ ಮಂಡ್ಯದ ಹೆಸರಾಂತ ಲೇಖಕ, ಬರಹಗಾರ, ಸಾಹಿತಿ, ಕವಿ, ಶ್ರೀ ಶಿವಳ್ಳಿ ಕೆಂಪೇಗೌಡರು. ಸಾಹಿತಿಯ ಪರಿಚಯವನ್ನು ಕಳೆದ ನವಂಬರ್ ತಿಂಗಳ ಸಂಗಾತಿ ಸಂಚಿಕೆಯಲ್ಲಿ ನೀಡಿದ್ದೇವೆ. ಗ್ರಾಮದರ್ಶನ ಮಾಡಿಸಿಕೊಳ್ಳುವ ಆಸಕ್ತರು ಇಚ್ಛಿಸಿದಲ್ಲೂ ನೇರವಾಗಿ ಶಿವಳ್ಳಿ ಕೆಂಪೇಗೌಡರನ್ನು ಯಾ ಸಂಗಾತಿಯನ್ನೂ ಸಂಪರ್ಕಿಸಬಹುದು. ಸಂಬಂಧಿಸಿದ ಖರ್ಚು ವೆಚ್ಚ ವನ್ನು ತಾನೇ ಬರಿಸಿಕೊಳ್ಳುವುದು.

ಸಂಪರ್ಕಿಸಿ :

ಶ್ರೀ ಶಿವಳ್ಳಿ ಕೆಂಪೇಗೌಡ
ಶಿವಳ್ಳಿ, ಗ್ರಾಮ+ಅಂಚೆ, ಮಂಡ್ಯ ತಾಲ್ಲೂಕು

ಅಥವಾ

ಕೊಡಗು ಸಂಗಾತಿ
12058, ವಿಜಯನಗರ ನಾಲ್ಕನೇ ಹಂತ, 2 ನೇ ಘಟಕ
ಹಿನಕಲ್ ಅಂಚೆ, ಮೈಸೂರು - 570 017
Ph : 0821-404290

ನಿಧನ

ನರಿಯಂದಡ ಗ್ರಾಮದ ಮಂಙ್ಞಪುರ ಲೇಟ್ ಮಾದಪ್ಪನವರ ಧರ್ಮಪತ್ನಿ ಗಂಗಮ್ಮನವರು ದಿನಾಂಕ 1-1-2003ರಂದು ಮೈಸೂರಿನಲ್ಲಿ ನಿಧನರಾದರು. ಇವರಿಗೆ 74ವರ್ಷ ಪ್ರಾಯವಾಗಿತ್ತು. ಮೂವರು ಪುತ್ರರು ಒಬ್ಬಳು ಪುತ್ರಿ ಹಾಗೂ ಅಪಾರ ಬಂಧು ಬಳಗದವರನ್ನು ಆಗಲಿದ್ದಾರೆ.

-ನೀಶಾ ಪಟ್ಟಡ

2003, ಜನವರಿ 1 ರಿಂದ 31ರ ತನಕ

ಒಳನೋಟ

ಕನ್ನಡ ವಿಭಾಗ	ಲೇಖಕರು	ಪುಟಗಳು
ಗೌಡ ಸಮಾಜಕ್ಕೊಂದು ನ್ಯಾಯ ಪೀಠದ ಅವಶ್ಯಕತೆ :	- ಸಂಪಾದಕೀಯ	02
ಅರೆಗನ್ನಡ, ನಡುಗನ್ನಡ, ಮಧ್ಯಗನ್ನಡದ ಮಹಾಕವಿ ಮುದ್ದಣ್ಣ :	- ಬಿ. ಎನ್. ಕೇಶವರಾವ್	03
ಮುಂಬರುವ ಕೊಡಗು ಮಂಗಳೂರು ಲೋಕಸಭಾ ಸ್ಥಾನಕ್ಕೆ ವಿರೋಧ ಪಕ್ಷದ ಉಪನಾಯಕ ಸದಾನಂದರು ಎಷ್ಟು ಸಮಂಜಸ :	- ಸಂಗಾತಿ	05
ಗ್ರಾಮದರ್ಶನ -1 ಅವಂದೂರು :	- ಶಿವಳ್ಳಿ ಕೆಂಪೇಗೌಡ	06
ನಾಮಧಾರಿ ಒಕ್ಕಲಿಗರು :	- ಬೈತಡ್ಕ ಎ. ಬೆಳ್ಯಪ್ಪ	08
ಮೈಸೂರಿನಲ್ಲಿ ಗೌಡ ಸಂಸ್ಕೃತಿ :	- ಸಂಗಾತಿ	10
ಕೊಡಗು ಕಾಶ್ಮೀರವಾಗುತ್ತಿದೆ ! :	- ಪಟ್ಟಡ ಶಿವಕುಮಾರ್	12
ಕೊಡಗು ಜಿಲ್ಲಾ ಸಾಂಸ್ಕೃತಿಕ ಉತ್ಸವ :	- ಸಂಗಾತಿ	13
ಕೊಡಗು ಗೌಡ ಸಮಾಜ ವತಿಯಿಂದ ಹುತ್ತರಿ ಹಬ್ಬದ ಆಚರಣೆ :	- ಬಿಟ್ಟೀರ ಚೊಂದಮ್ಮ, ಶಂಭು	14
ಪತ್ರ ವಿಭಾಗ - 1 :	- ಆಜಡ್ಕ ರಾಣಿ ಬಾಲಕೃಷ್ಣ	15
ಸತ್ಯದೆಡೆದೆ ಜೀವನ :	- ಚೇಂದ್ರಿಮಾಡ ಜಿ. ಮುತ್ತಪ್ಪ	16
ಗೌಡ ಜನಾಂಗವನ್ನು ನಿರ್ಲಕ್ಷಿಸಿದರೆ ಜಂಟಿಯಾಗಿ ಪ್ರತಿಭಟನೆ :	- ಸಂಗಾತಿ	17
ಕೊಡಗು ಗೌಡ ಸಮಾಜದ ವತಿಯಿಂದ ಅಭಿನಂದನಾ ಕಾರ್ಯಕ್ರಮ :	- ಸಂಗಾತಿ	18
ಪೂಮಾಲೆ ಕುಡಿಯ ಜನಾಂಗದ ಕ್ರೀಡೋತ್ಸವ :	- ಸಂಗಾತಿ	19
ಅರೆ ಗನ್ನಡ ಭಾಷಿಕ ವಿಭಾಗ :		
ಬಾಲಸಂಗಾತಿ ವಿಭಾಗ : ಸಸ್ಯಶಾಸ್ತ್ರ	- ಬಿಟ್ಟೀರ ಚೊಂದಮ್ಮ	07
ಬಾಲಸಂಗಾತಿ ವಿಭಾಗ : ಒಬ್ಬನ ಭಾಗ್ಯ ಮತ್ತೊಬ್ಬರಿಗೆ ಮೃತ್ಯು	- ಬಿಟ್ಟೀರ ಚೊಂದಮ್ಮ	15
ಲೋಟವಾಗಬೇಡ - ಕೆರೆಯಾಗು	- ಎಡಿಕೇರಿ ಸುದರ್ಶನ್	20
ಕವನ		
ಹೆಣ್ಣು	- ಕಾಳೇಯಂಡ ಮಜುನ್	09
ತಿಂಗಳ ಸಂಗಾತಿ ನೋಡ್‌ರಾ	- ಅಮ್ಮಾಜೀರ ನೀಲಾ	13
ಪರಿಸರ	- ಕೊಡಿಯಡ್ಕ ರಮೇಶ್ ಕೃಷ್ಣಪ್ಪ	14

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	ಕೊಡಗು ಸಂಗಾತಿ, 1055c, ದೊಡ್ಡಣ್ಣ ಬಿಲ್ಡಿಂಗ್, ಹುಣಸೂರು ರಸ್ತೆ, ಅಂಚೆ ಕಛೇರಿ ಎದುರು, ಹಿನಕಲ್ ಅಂಚೆ, ಮೈಸೂರು - 17.ಫೋನ್:**0821/404290**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಕೀ ಚೈನ್ ಲಭ್ಯ	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/228047**
	ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/673370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 12ರೂ.

ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ :

ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಸಮಾಜಕ್ಕೊಂದು ಗೌಡ ನ್ಯಾಯ ಪೀಠದ ಅವಶ್ಯಕತೆ

ಭರತ ಖಂಡದ ಬಹುಮುಖ್ಯ ಜನಾಂಗಗಳಲ್ಲಿ ಅತೀ ಪ್ರಾಚೀನ (ಅರ್ವಚೀನಾ) ಇತಿಹಾಸಯುಳ್ಳ ಬುವಿಯಲ್ಲಿ ಪ್ರಥಮ ರಾಗಿ ಹುಟ್ಟಿದ ಜನಾಂಗವೇ ಗೌಡ ಜನಾಂಗ. ಗೌಡ ಜನಾಂಗ ಈ ಹಿಂದೆ ಬಂಗಾಳ ದೇಶದಲ್ಲಿಯೂ ನಂತರ ಒರಿಸ್ಸಾ, ವಿಜಯ ನಗರ ಇತ್ಯಾದಿ ಸ್ಥಳಗಳಲ್ಲಿ ಆಳಿದ ನಿದರ್ಶನಗಳಿವೆ. 1565ರಲ್ಲಿ ಹಿಂದೂ ರಾಜ್ಯದ ವಿಜಯನಗರ ಸಾಮ್ರಾಜ್ಯಕ್ಕೂ ಮತ್ತು ಬಹುಮನಿ ಸುಲ್ತಾನರಿಗೂ ಯುದ್ಧ ನಡೆದು, ಅಂತಿಮ ಯುದ್ಧದಲ್ಲಿ ಸಂಪೂರ್ಣ ನಾಶವಾದ ವಿಜಯನಗರದ ಪ್ರಜೆಗಳಾದ ಗೌಡರು ಮುಸ್ಲಿಂರ ದಾಳಿಗೂ ಮತ್ತು ಲಿಂಗಾಯಿತರ ಪ್ರಭಾವಕ್ಕೂ ಅಂಜಿ ದಕ್ಷಿಣ ಪಥವಾಗಿ ಬಂದು ಶೃಂಗೇರಿಯನ್ನು ಆಶ್ರಯಿಸುತ್ತಾರೆ.

ಶೃಂಗೇರಿಯನ್ನು ಆಶ್ರಯಿಸಿದ ತರುವಾಯ ವಿಜಯ ನಗರದ ಸಾಮಂತ ರಾಜರಾದ ಇಕ್ಕೇರಿ ನಾಯಕರನ್ನು ಆಶ್ರಯಿಸಿದ ತರುವಾಯ, ಇಕ್ಕೇರಿ ರಾಜನು ತನ್ನ ರಾಜ್ಯದ ಐಗೂರು ಸೀಮೆಗೆ ಕಳುಹಿಸುತ್ತಾನೆ. ಐಗೂರಿಗೆ ಬಂದ ನಂತರ ಪುಷ್ಪಗಿರಿ ಬೆಟ್ಟದ ಮೇಲ್ಭಾಗಕ್ಕಾಗಿ ಹೋದವರು ಕನ್ನಡ ಜಿಲ್ಲೆಯಲ್ಲಿಯು, ಕೆಳಭಾಗ ಕ್ಕಾಗಿ ಬಂದವರು ಕೊಡಗಿನಲ್ಲಿಯೂ ನೆಲೆ ನಿಂತದಲ್ಲದೆ, ತದನಂತರ 1790ರ ಸುಮಾರಿಗೆ ಕನ್ನಡ ಜಿಲ್ಲೆಯಿಂದ ಪೂರ್ವದ ಸುಳ್ಯ ಪೆರಾಜೆ ಮಾರ್ಗವಾಗಿ ಭಾಗಮಂಡಲ, ಮಡಿಕೇರಿ, ನಾಪೋಕ್ಲು, ಹೊರಮಲೆನಾಡು, ಕಡಿಯತ್ತ್‌ನಾಡ್, ಕುಯ್ಯಂ ಗೇರಿನಾಡ್ ಮೂರ್ನಾಡ್ ಹೀಗೆ ಹಲವಾರು ನಾಡ್‌ಗಳಲ್ಲಿ ನೆಲೆಸಿದರೆಂದು ಚರಿತ್ರೆಯಿಂದ ತಿಳಿದುಬರುತ್ತಿದೆ.

ಗೌಡರಲ್ಲಿ 10 ಕುಟುಂಬಗಳು ಮತ್ತು 18 ಗೋತ್ರಗಳು ಇರುತ್ತವೆ. ಮದುವೆ ಇತ್ಯಾದಿ ಶುಭ ಮತ್ತು ಅಶುಭ ಕಾರ್ಯಗಳಲ್ಲಿ ನಡೆಯುವಂತಹ ಕಾರ್ಯಗಳು ಕಟ್ಟುನಿಟ್ಟಾಗಿ ಚಾಚು ತಪ್ಪದೆ ಕಟ್ಟೆ ಮನೆಸ್ಥಾನದವರ ಮುಖಾಂತರವಾಗಿ ನಡೆದು ಬರುತ್ತಿತ್ತು ಅನ್ನುವ ವಿಷಯವು ಸುಮಾರು 60 ವರ್ಷದ ಹಿಂದಿನ ಪ್ರತಿಯೊಬ್ಬ ಗೌಡರಿಗೆ ತಿಳಿದಿರುವುದು ಸರಿಯಷ್ಟೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ವಿಶಾಲವಾಹಿನಿಯೊಂದಿಗೆ ಬೆರೆಯುವಂತಹ ಸಂದರ್ಭದಲ್ಲಿ ಈ ಎಲ್ಲಾ ಪದ್ಧತಿಗಳು ನಿಧಾನವಾಗಿ ಗಾಳಿಗೆ ತೂರಲಾರಂಭಿಸಿದವು.

ಹಿಂದು ಗೌಡ ಜನಾಂಗದವರಲ್ಲಿ ಪರಸ್ಪರ ವೈಮನಸ್ಸು ಉಂಟಾದಾಗ ಅದನ್ನು ಕಟ್ಟೆ ಮನೆಸ್ಥಾನದ "ಗೌಡ ನ್ಯಾಯಪೀಠ" ಕ್ಕೆ ಒಯ್ದು ಇತ್ಯರ್ತಪಡಿಸಿದ ಹಲವಾರು ನಿದರ್ಶನವನ್ನು ಹಿರಿಯರು ಕಂಡಿರಬಹುದು. ಹಿಂದೆ ಪ್ರತಿ ಊರಿನಲ್ಲಿ ಊರು ಗೌಡ, ಗ್ರಾಮಗೌಡ, ನಾಡುಗೌಡ, ಮಾಗಣೆಗೌಡ ಎಂಬುದಾಗಿ ಇದ್ದು ಅವರೆಲ್ಲರೂ ತಮ್ಮ ವ್ಯಾಪ್ತಿಯಲ್ಲಿ ಬರುವ ಪದ್ಧತಿ ಕಂದಾಚಾರಗಳನ್ನೆಲ್ಲಾ ನಡೆಸಿ ಕೊಡುತ್ತಿದ್ದರು. ಆ ಸಮಯದಲ್ಲಿ "ಕಟ್ಟೆಯ ಮೇಲೆ ಕಟ್ಟೆ"ಯು ಕಟ್ಟುನಿಟ್ಟಾಗಿ ನಡೆಯುತ್ತಿತ್ತು. ಕೋರ್ಟಿಗೆ ಹೋಗಿ ಹತ್ತಾರು ವರ್ಷಗಳು ಅಲ್ಲಿ ಕೊಳೆಯುವುದ ಕ್ಕಿಂತಲೂ, ಲಕ್ಷಾಂತರ ರೂಪಾಯಿಗಳು ವೆಚ್ಚವಾಗುವುದನ್ನು ಇತ್ತ ತಡೆಗಟ್ಟಬಹುದಲ್ಲವೆ ? ಹಾಗೂ ಶೀಘ್ರ ನ್ಯಾಯ ದೊರಕಿಸಿ ಕೊಡುವ ಕ್ರಮಗಳಾಗಿವೆ ಎಂದೂ ಸಹ, ಸರ್ಕಾರದ ನ್ಯಾಯಪೀಠಕ್ಕೆ ಹೋಗದೆ ಚಿಗುರಿನಲ್ಲೆ ಮೊಟಕಿ ಹಾಕುವ ಕ್ರಮಗಳಾಗಿದ್ದವು.

10 ಕುಟುಂಬ ಹದಿನೆಂಟು ಗೋತ್ರದ ಗೌಡ ಜನಾಂಗವು (ವಕ್ಕಲಿಗರು, ಒಕ್ಕಲಿಗ ಗೌಡರನ್ನು ಹೊರತುಪಡಿಸಿ) ಉತ್ತರದ ಬೆಳ್ತಂಗಡಿಯಿಂದ ದಕ್ಷಿಣದ ಬೆಂಗಳೂರು ತನಕ ಸುಮಾರು 5 ಲಕ್ಷಕ್ಕೂ ಮಿಕ್ಕಿ ಜನ ಇರುವರೆನ್ನುವುದು ಒಂದು ಅಂದಾಜು. ಈ ಗೌಡ ಜನಾಂಗದ ಪರಿಮಿತಿಯಲ್ಲಿಯೇ ಈ ತೆರನಾದ ನ್ಯಾಯಪೀಠದ ಅವಶ್ಯಕತೆ ಬಹಳಷ್ಟು ಇಂದು ಕಂಡುಬರುತ್ತಿದೆ. ಕಾರಣ ಮನುಷ್ಯ ಮುಂದುವರಿಯುತ್ತಾ ಬಂದ ಹಾಗೆ, ಗೌಡ ಕೂಸು ಹುಟ್ಟುವಾಗಲೇ ಹಲವು ಸಮಸ್ಯೆಗಳನ್ನು ತನ್ನ ಬಗಲಲ್ಲೆ ಏರಿಸಿಕೊಂಡು ಹುಟ್ಟುತ್ತಿರುವಂತಹ ಈ ಸಂದರ್ಭದಲ್ಲಿ "ಗೌಡ ನ್ಯಾಯಪೀಠ"ದ ಅವಶ್ಯಕತೆ ಬಹಳಷ್ಟಿದೆ.

ಹಲವು ಸಮಸ್ಯೆಗಳಾದ ಮದುವೆ/ವಿಚ್ಛೇದನ/ವ್ಯಾಜ್ಯ ಜಾಗದ್ದೆ ಇರಲಿ ಮಾನನಷ್ಟ, ಮೊಕದ್ದಮೆಯೆ ಇರಲಿ ಇಂದು ದಿನೆದಿನೇ ಹೆಚ್ಚುತ್ತಿದೆ. ಮನೆಮನೆಯಲ್ಲಿ ಜಗಳ, ವ್ಯಾಜ್ಯಗಳು, ಊರಿನಲ್ಲೂ ವ್ಯಾಜ್ಯ, ಒಡಹುಟ್ಟಿದ ಅಣ್ಣ ತಮ್ಮ ಅಕ್ಕ ತಂಗಿಯರಲ್ಲಿ ವ್ಯಾಜ್ಯಗಳು ಹಾಗೂ ಇನ್ನಿತರ ಹಲವಾರು ಸಮಸ್ಯೆಗಳಿಗೆ ಈ ತೆರನಾದ "ಗೌಡ ನ್ಯಾಯಪೀಠ"ವು ಖಂಡಿತವಾಗಿಯೂ ಪರಿಣಾಮಕಾರಿಯಾಗಬಲ್ಲುದು.

ಗೌಡ ಜನಾಂಗದಲ್ಲಿ ಇಂದು ಹಲವು ನ್ಯಾಯಾಧೀಶ ರಿದ್ದಾರೆ. ಹಿರಿಯ ವಕೀಲರು ಇದ್ದಾರೆ. ನಿವೃತ್ತದಾರರು ಇದ್ದಾರೆ, ಹಿತಚಿಂತಕರು ಇದ್ದಾರೆ. ಇವರಲ್ಲಿ ಕನಿಷ್ಠ 25 ಜನರ ಒಂದು ತಂಡವೊಂದನ್ನು ರಚಿಸಿ ಈ ಮೂಲಕ "ಗೌಡ ನ್ಯಾಯಪೀಠ" ಸ್ಥಾಪಿಸಬಹುದು. ಇಂತಹ ಪೀಠದಲ್ಲಿ ತೀರ್ಮಾನವು ಇತ್ಯರ್ಥ ವಾಗದೆ ಮುಂದೆ ಕೋರ್ಟಿಗೆ ಹೋದಲ್ಲು ಸಹ ಕೋರ್ಟು ಈ ತೀರ್ಮಾನವನ್ನೇ ಎತ್ತಿ ಹಿಡಿಯುವ ಸಂದರ್ಭಗಳೇ ಹೆಚ್ಚು. ಅಂತಹ ನಿದರ್ಶನಗಳು ಸಾಕಷ್ಟು ಇವೆ. ಹೆಚ್ಚು ಖರ್ಚು ವೆಚ್ಚಗಳಿಲ್ಲದೆ ಅಷ್ಟೆ ಸುಲಭ ರೀತಿಯಲ್ಲಿ ಇತ್ಯರ್ಥವಾಗುವಂತಹ ಇಂತಹ "ಗೌಡ ನ್ಯಾಯ ಪೀಠ"ವು ಶೀಘ್ರವಾಗಿ ಗೌಡ ಜನತೆಗೆ ಲಭಿಸಲಿ ಎಂದು ಸಂಗಾತಿ ಅಭಿಪ್ರಾಯಿಸುತ್ತದೆ.

ಅರೆಗನ್ನಡ, ನಡುಗನ್ನಡ, ಮಧ್ಯಗನ್ನಡದ ಮಹಾಕವಿ ಮುದ್ದಣ್ಣ

ಅರೆಗನ್ನಡದ(ನಡುಗನ್ನಡ) ನವೋದಯ ಪೂರ್ವ ಮಹಾನ್ ಪ್ರತಿಭಾವಂತ ಮುದ್ದಣ್ಣನಿಗೆ ಆತನ ಮರಣಾನಂತರ ಸಿಕ್ಕ ಮನ್ನಣೆ ಬದುಕಿರುವಾಗ ಸಿಗದಿದ್ದುದು ವಿಪರ್ಯಾಸ.

ತಂದೆ ನಂದಳಿಕೆ ಗ್ರಾಮದಲ್ಲಿದ್ದ ಪಾಟಾಳಿ ತಮ್ಮಯ್ಯ. ತಾಯಿ ಮಹಾಲಕ್ಷ್ಮಮ್ಮ. ಈ ದಂಪತಿಗಳ ಹಿರಿಯ ಮಗನಾಗಿ 1870ನೆಯ ಇಸವಿ ಜನವರಿ ತಿಂಗಳ 24ನೆಯ ತಾರೀಖು ಕಾರ್ಕಳ ಸಮೀಪದ ನಂದಳಿಕೆಯಲ್ಲಿ ಹುಟ್ಟಿದವನು ಮುದ್ದಣ್ಣ. 'ಮುದ್ದಣ್ಣ' ಕಾವ್ಯನಾಮ. ನಿಜನಾಮ-ನಂದಳಿಕೆ ಲಕ್ಷ್ಮೀನಾರಾಣಪ್ಪ. ಮರೆನಾಮಗಳು ಎರಡು. ಒಂದು 'ಮಹಾಲಕ್ಷ್ಮಿ'-ಇನ್ನೊಂದು 'ವೆಂಕಟಸುಬ್ಬಮ್ಮ'. ಇವನ ತಂದೆ ತಾಯಿ ತೀರ ಬಡವರಾಗಿದ್ದು ನಂದಳಿಕೆಯ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ದಿನಂಪ್ರತಿ ದೇವರಿಗೆ ಹೂಮಾಲೆ ಕಟ್ಟಿಕೊಡುವ 'ಮಾಲೆಯರು' ಎಂಬ ವರ್ಗಕ್ಕೆ ಸೇರಿದ ಬ್ರಾಹ್ಮಣರು. ಈ ವಿಚಾರವನ್ನು ನಾರಣಪ್ಪನವರು (ಮುದ್ದಣ್ಣ) ಕೆಲಸ ಮಾಡುತ್ತಿದ್ದ ಶಾಲೆಯೊಂದರ ದಾಖಲಾತಿ ಪುಸ್ತಕದಲ್ಲಿ ಅವರೇ ಬರೆದಿರುವುದರಿಂದ ಈ ಬಗ್ಗೆ ಮತ್ತಾರ ವ್ಯಾಖ್ಯಾನವೂ ಬೇಕಿಲ್ಲ.

> ಮರೆಯಲಾಗದವರು ಶೀರ್ಷಿಕೆಯಡಿಯಲ್ಲಿ ನಾಡಿನ ಜನಪ್ರಿಯ ದೈನಿಕಗಳಲ್ಲಿ ಬರೆಯುತ್ತಿರುವ ಬಿ.ಎಸ್. ಕೇಶವ ರಾವ್ ನಡುಗನ್ನಡ (ಅರೆಗನ್ನಡ)ದ ನವೋದಯ ಪೂರ್ವದ ಅರೆಗನ್ನಡ ಭಾಷೆಯನ್ನು ಪ್ರಚುರಪಡಿಸಲು ಮಾಮರದ ತಳಿರಿನ ಹಿನ್ನಲೆ ಕೋಗಿಲೆಯಂತೆ ಕನ್ನಡ ಇಂಪನ್ನು ಉಣಬಡಿಸಿದವರು ಮತ್ತು ನುಡಿಯನ್ನು ಪ್ರಚುರಪಡಿಸಿದವರು. ತನ್ಮೂಲಕ ಕನ್ನಡಿಗರ ಕಣ್ತೆರಿಸಿದವರು ಮಹಾಕವಿಗಳ ಮುಂಗಾಣಿಕೆಗೆ ತುತ್ತೂರಿ ಊದಿ ಸ್ಫೂರ್ತಿ ನೀಡಿದವರು ಮುದ್ದಣ್ಣ ಮಹಾಕವಿ. ನವೋದಯ ನಾಂದಿಗೆ ಕಹಳೆಯೂದಿದವರು. ಇವರನ್ನು ಪರಿಚಯಿಸಿದವರು ಶ್ರೀ ಬಿ.ಎನ್. ಕೇಶವರಾವ್ ಇವರು.
>
> \- ಸಂಪಾದಕಿ

ಲಕ್ಷ್ಮೀನಾರಣಪ್ಪನ ಪ್ರಾಥಮಿಕ ವಿದ್ಯಾಭ್ಯಾಸ ನಡೆದದ್ದು ನಂದಳಿಕೆಯ ಒಂದು ಕೂಲೀಮಠದಲ್ಲಿ. ಅಲ್ಲಿದ್ದ ಸಾಮಾನ್ಯ ಬುದ್ಧಿಯ ವಿದ್ಯಾವಂತರ ಪೈಕಿ ಈತನೂ ಒಬ್ಬ ಎಂಬಂತಿದ್ದ. ಅಲ್ಲದೆ ತಮ್ಮಯ್ಯನವರಿಗೆ ಕಿತ್ತು ತಿನ್ನುವ ಬಡತನ ಕಾಡುತ್ತಿದ್ದುದ್ದರಿಂದ ಅವರು ತಮ್ಮ ಮುದ್ದಿನ ಮಗ ಮುದ್ದಣ್ಣನಿಗೆ ಹೆಚ್ಚೇನನ್ನೂ ಓದಿಸಲಾಗಲೇ ಇಲ್ಲ. ಹೀಗಾಗಿ ಮುದ್ದಣ್ಣನ ವಿದ್ಯಾಭ್ಯಾಸ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸಕ್ಕೆ ಮುಗಿದುಹೋಯಿತು. ನಂತರ ಇವರು ವಿಶೇಷವೆನಿಸುವ ಪಾಂಡಿತ್ಯ ಹಾಗೂ ಜ್ಞಾನಾರ್ಜನೆಯನ್ನು ಗಳಿಸಿದ್ದು ತಮ್ಮ ಸ್ವಶ್ರಮ ಹಾಗೂ ಸ್ವಯಂ ಪ್ರತಿಭೆಯಿಂದಲೇ ಎಂಬುದು ಗಮನಾರ್ಹ. ಈ ವಿಚಾರಗಳಲ್ಲಿ ಇವರಂತೆಯೇ ಸಂಸರೂ ಕೂಡ - ಡಿಟೋ. ವ್ಯತ್ಯಾಸವಿಷ್ಟೇ. ನಾರಣಪ್ಪನವರು ಮಿಡಲ್ ಸ್ಕೂಲ್ ಗ್ರಾಜುಯೇಟ್. ಸಂಸರು ಹೈಸ್ಕೂಲ್ ಗ್ರಾಜುಯೇಟ್. ಆದರೆ ಈ ಇಬ್ಬರೂ ಹಳಗನ್ನಡವನ್ನು ದುಡಿಸಿಕೊಂಡಂತೆ ನಮ್ಮಲ್ಲಿ ಪೋಸ್ಟ್ ಗ್ರಾಜುಯೇಟ್ ಕವಿಗಳೂ ದುಡಿಸಿಕೊಳ್ಳಲಿಲ್ಲ ಎಂಬುದು ಎಂತಹ ಬರಹಗಾರರನ್ನೂ ಬೆರಗುಗೊಳಿಸುವ ಸಂಗತಿ.

ಲಕ್ಷ್ಮೀನಾರಣಪ್ಪ ಬದುಕು ದೂಡಲು ಸೇರಿದ್ದು ಉಡುಪಿ ಬೋರ್ಡ್ ಮಿಡಲ್ ಸ್ಕೂಲನ್ನು, ಡ್ರಿಲ್‌ಟೀಚರಾಗಿ, 1889ನೇ ಇಸವಿ ಮೇ ತಿಂಗಳ 16ನೇ ದಿನಾಂಕದಂದು. ವ್ಯಾಯಾಮ ಹೇಳಿಕೊಡುವ ಶಿಕ್ಷಣವನ್ನು ನಾರಣಪ್ಪ ಅಭ್ಯಸಿಸಿದ್ದು, ಮದರಾಸಿನ ಶಿಕ್ಷಣ ಸಂಸ್ಥೆಯೊಂದರಲ್ಲಿ. ಆಗ ಉಡುಪಿಯ ಬೋರ್ಡ್ ಮಿಡಲ್ ಸ್ಕೂಲಿನಲ್ಲಿ ನಾರಣಪ್ಪನಿಗೆ ತಿಂಗಳಿಗೆ ಸಿಗುತ್ತಿದ್ದ ಸಂಬಳ ಹತ್ತು ರೂಪಾಯಿ.

ಆ ಹತ್ತೊಂಬತ್ತರ ಪ್ರಾಯದಲ್ಲಿ ನಾರಣಪ್ಪ ಹೇಗಿದ್ದರು ಎಂಬುದರ ಬಗ್ಗೆ ನಿರ್ದಿಷ್ಟವಾದ ವಿವರಗಳು ಲಭ್ಯ. ಅದು ಹೀಗೆ - ಗೋವಿಂದ ಪೈಗಳ ಮಾತಿನ ಲ್ಲಿ. "ನಾರಣಪ್ಪನವರ ಎತ್ತರ 5 ಅಡಿ 4 ಇಂಚು. ಗಂಭೀರ ಮುಖ ಮುದ್ರೆಯಿಂದಲೇ ಸದಾ ಕಾಲ ವಿರುತ್ತಿದ್ದ ನಾರಣಪ್ಪ ಸುಂದರಾಂಗ. ಯಾವಾಗಲೂ ಏನನ್ನೋ ಹುಡುಕುವುದರಲ್ಲಿ ಹಾತೊರೆಯುವಂತಿದ್ದರೆ ಚುರುಕು ದೃಷ್ಟಿಯ ಕಣ್ಣುಗಳು. ಎದ್ದು ಕಾಣುವಂತಿದ್ದ ಉದ್ದನೆಯ ನಾಸಿಕ, ದಿಟ್ಟ ನಿಲುವು, ನಡಿಗೆ, ಹರಿತವೆನಿಸುವ ಚುರುಕು ಬುದ್ಧಿ. ಆದರೆ ಮಿತಭಾಷಿ. ಆತ ಬಹು ಸೂಕ್ಷ್ಮಗ್ರಾಹಿ, ಏಕಪಾಠಿ.

ಇನ್ನು ಅವರಿಗಿದ್ದ ಭಾಷಾ ಪಾಂಡಿತ್ಯದ ಬಗ್ಗೆ ಹೇಳಬೇಕಾದರೆ ನಾರಣಪ್ಪನವರು ಬಹುಭಾಷಾ ಪ್ರಿಯರು. ಕನ್ನಡ, ಸಂಸ್ಕೃತ, ಮಲೆಯಾಳ ಹಾಗೂ ಮರಾಠಿ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಈ ಭಾಷೆಗಳಲ್ಲಿದ್ದ ವಿಶಿಷ್ಟ ಗ್ರಂಥಗಳನ್ನು ಅವುಗಳ ಮೂಲ ಭಾಷೆಯಲ್ಲೇ ಓದಿ ಅರ್ಥಮಾಡಿಕೊಳ್ಳುವ ಶಕ್ತಿ ಗಳಿಸಿದ್ದವರು ಅವರು. ಅಲ್ಲದೆ ಸಂಗೀತವನ್ನೂ ಕ್ರಮಬದ್ಧವಾಗಿ ಕಲಿತಿದ್ದ ನಾರಣಪ್ಪನವರ ಅಂಗಸೌಷ್ಠವವೂ ಅದ್ಭುತ.

ಸ್ವಭಾವತಃ ಮಹಾ ಸರಸಿಯಾಗಿದ್ದ ನಾರಣಪ್ಪನವರು ಬಿಡುವಿದ್ದಾಗಲೆಲ್ಲಾ ಬರೆಯುವುದು, ಓದುವುದು ಇವುಗಳಲ್ಲೇ ಮಗ್ನ. ಪ್ರಾಚೀನ ಕಾಲದ ಗ್ರಂಥಗಳನ್ನೂ ತಾಡೋಲೆಗಳನ್ನೂ, ಸಂಗ್ರಹಿಸಿ ಅಧ್ಯಯನ ಮಾಡುವುದು ಅಭ್ಯಾಸ. ಅಲ್ಲದೆ ಆ ಕಾಲಕ್ಕೆ ಅಮೋಘವೂ, ಅಧಿಕೃತವೂ ಎನಿಸಿದ್ದ ಕಿಟ್ಟೆಲ್ ಡಿಕ್ಷನರಿಯನ್ನು (ಕನ್ನಡ-ಇಂಗ್ಲಿಷ್ ನಿಘಂಟು) ಆಮೂಲಾಗ್ರವಾಗಿ ಓದುವುದರ ಜೊತೆಗೆ ಅದರಲ್ಲಿರುವ ಪದಗಳನ್ನೂ, ಪದ ಅರ್ಥಗಳನ್ನೂ ಉರು ಹಚ್ಚುವುದು ನಾರಣಪ್ಪನವರ ಮತ್ತೊಂದು ಹವ್ಯಾಸ. ಅದರಲ್ಲಿಯ ಎಷ್ಟೋ ಪದಗಳನ್ನು ಇವರು ಕಂಠಪಾಠ ಮಾಡಿದ್ದರು.

ನಾರಣಪ್ಪನವರಿಗೆ ಅರೆಗನ್ನಡ ಸಾಹಿತ್ಯದಲ್ಲಿ ಆಸಕ್ತಿ ಮೂಡುವಂತೆ ಪ್ರಚೋದಿಸಿದವರು ಇವರ ಸಹೋದ್ಯೋಗಿಯೂ ಆಗಿದ್ದ ಮುಳಲಿ ಸುಬ್ಬರಾಯರು. ಉಡುಪಿ ಬೋರ್ಡ್ ಶಾಲೆಯಲ್ಲಿದ್ದಾಗಲೆ 'ರತ್ನಾವತಿ ಕಲ್ಯಾಣ' ಹಾಗೂ 'ಕುಮಾರ

ವಿಜಯ' ಎಂಬ ಎರಡು ಯಕ್ಷಗಾನ ಪ್ರಸಂಗಗಳನ್ನು ಬರೆದವರು ನಾರಾಣಪ್ಪ. ಬಹು ಜನಪ್ರಿಯತೆ ಗಳಿಸಿದ್ದ ಈ ಪ್ರಸಂಗಗಳು ಉಡುಪಿಯ ಹಿಂದೂ ಮುದ್ರಣಾಲಯದಲ್ಲಿ ಮುದ್ರಣ ಗೊಂಡುವು. ಆದರೆ, ಬಿಡುಗಡೆಗೊಂಡ ಈ ಕೃತಿಗಳನ್ನು ಒಳಗಡೆ ಇಡುವಂತಾಯಿತು. ಖರ್ಚಾಗಲಿಲ್ಲ. ಇವುಗಳ ಪ್ರಕಟಣೆಯ ವೆಚ್ಚವನ್ನು ಸ್ವಯಂ ಭರಿಸಿದ ನಾರಣಪ್ಪನವರು ಕೈ ಸುಟ್ಟು ಕೊಂಡರು. ನಂತರ ನಾರಾಣಪ್ಪನವರು ತಮ್ಮ ಯಾವ ಕೃತಿಯನ್ನೂ ಸ್ವಯಂ ಪ್ರಕಟಿಸುವ ಸಾಹಸ ಮಾಡಲಿಲ್ಲ. ಈ ಸಮಯದಲ್ಲಿ ಇಪ್ಪತ್ಮೂರರ ತುಂಬು ತಾರುಣ್ಯದಲ್ಲಿದ್ದ ನಾರಣಪ್ಪನವರಿಗೆ ಕಂಕಣಬಲವೂ ಕೂಡಿಬಂತು. ಶಿವಮೊಗ್ಗ ಬಳಿಯ ಕಾಗೆಕೋಡಮಗ್ಗಿ ಗ್ರಾಮದ ಕಮಲಾಬಾಯಿ ಎಂಬಾಕೆ ಈ 'ಮುದ್ದಣ್ಣ' ಕಾವ್ಯನಾಮದ ನಾರಣಪ್ಪನವರ ಮುದ್ದು 'ಮನೋರಮೆ'ಯಾಗಿ ಇವರ ಪುಟ್ಟ ಮನೆಯನ್ನು ತುಂಬಿಕೊಂಡಳು.

ಬಾಲ್ಯದಲ್ಲಿ ನಾರಣಪ್ಪ ನೋಡಲು ಬಲು ಮುದ್ದು ಮುದ್ದಾಗಿದ್ದುದರಿಂದ ಇವರನ್ನು ಎಲ್ಲರೂ 'ಮುದ್ದಣ್ಣ' ಎಂದು ಕರೆದರು. ಮುಂದಿವರು ಮದುವೆಯಾದ ಕಮಲಾಬಾಯಿ ಅತಿ ಕಪ್ಪಾಗಿದ್ದುದರಿಂದ ವಿನೋದ ಪ್ರಿಯವಾಗಿದ್ದ ಮುದ್ದಣ್ಣ ತನ್ನ ಕಪ್ಪು ಮಡದಿಯನ್ನು ಪ್ರೀತಿಯಿಂದ ಕರೆಯಲಾರಂಭಿಸಿದ್ದು 'ಮನೋರಮೆ' ಎಂದು. ಸಾರಸ್ವತ ವಲಯದಲ್ಲಿ ಈ ಅನ್ಯೋನ್ಯ ದಂಪತಿಗಳು 'ಮುದ್ದಣ್ಣ-ಮನೋರಮೆ'ಯರಾಗಿಯೇ ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗುತ್ತಾರೆಂದು ಯಾರೊಬ್ಬರೂ ಭಾವಿಸಿರಲಿಲ್ಲ. ಇದಾಯಿತು. ನಾರಾಣಪ್ಪನವರು ಉಡುಪಿಯಲ್ಲಿ ಸಂಸಾರ ಹೂಡಿದ ಕೆಲವೇ ತಿಂಗಳುಗಳಿಗೆ ವರ್ಗಗೊಂಡು ಕುಂದಾಪುರದ ಶಾಲೆಯೊಂದರಲ್ಲಿ ವ್ಯಾಯಾಮ ಶಿಕ್ಷಕರಾಗಿಯೇ ಸೇರಿದರು. ಅಲ್ಲೇಕೋ ಸ್ಥಿತಿಗತಿಗಳು ಸರಿಹೋಗಲಿಲ್ಲ. ಮತ್ತೆ ಉಡುಪಿಗೆ ಹಿಂದಿರುಗಿದ ಇವರು ಇಲ್ಲಿಯ ಕ್ರಿಶ್ಚಿಯನ್ ಹೈಸ್ಕೂಲಿಗೆ ಡ್ರಿಲ್ ಟೀಚರಾಗಿ ಸೇರಿದರು. ಐದು ವರ್ಷ ಸೇವೆ ಸಲ್ಲಿಸಿದ ನಂತರ ಅದೇ ಶಾಲೆಯಲ್ಲಿ ಕನ್ನಡ ಪಂಡಿತರಾದರು. ಆಗ ಅವರಿಗೆ ಬರುತ್ತಿದ್ದ ಸಂಬಳ ತಿಂಗಳಿಗೆ ಕೇವಲ ಇಪ್ಪತ್ತು ಮತ್ತು ಗುಮಾಸ್ತನ ಕೆಲಸಗಳನ್ನು ಮಾಡುತ್ತಿದ್ದುದರಿಂದ ಈ ಪ್ರತ್ಯೇಕ ಕೆಲಸಕ್ಕೆ ಐದು ರೂಪಾಯಿಗಳು. ಒಟ್ಟು ಇವರಿಗೆ ಸಿಗುತ್ತಿದ್ದ ಸಂಬಳ ಇಪ್ಪತ್ತೈದು. ಕಾಲ ಸುಭಿಕ್ಷವಾಗಿದ್ದರೂ ಈ ಇಪ್ಪತ್ತೈದು ಸಂಸಾರ ಸಾಗಿಸುವುದಕ್ಕೂ ಸಾಲುತ್ತಿರಲಿಲ್ಲ. ಹಣ ಸಾಲದೆ ಹಪಹಪಿಸುತ್ತಿದ್ದ ನಾರಣಪ್ಪನವರು ನೆಚ್ಚಿಕೊಂಡಿದ್ದುದು 'ಭವತಿ ಭಿಕ್ಷಾಂ ದೇಹಿ' ಎಂಬ ಸಪ್ತಾಕ್ಷರಿ ಮಂತ್ರವನ್ನೇ. ಈ ಮಹಾಕವಿಯ ಆರ್ಥಿಕ ಪರಿಸ್ಥಿತಿ ಅದೆಷ್ಟು ಶೋಚನೀಯ ವಾಗಿತ್ತೆಂದರೆ ವಿದ್ಯಾರ್ಥಿಗಳು ಶಾಲಾ ಪರೀಕ್ಷೆಯಲ್ಲಿ ಉತ್ತರ ಬರೆದಿತ್ತ ಹಾಳೆಗಳ ಹಿಂಬದಿಯಲ್ಲಿ ಮಿಕ್ಕಿರುತ್ತಿದ್ದ ಖಾಲಿ ಜಾಗಗಳಲ್ಲಿ ಇವರು ತಮ್ಮ ಅದ್ವಿತೀಯ ಕೃತಿಗಳನ್ನು ಬರೆಯುತ್ತಿದ್ದರಂತೆ.

ಹೀಗೆ ಆರ್ಥಿಕ ಸ್ಥಿತಿ ಅಧ್ವಾನವಾಗಿದ್ದರೂ ಅದನ್ನು ಲೆಕ್ಕಿಸದೆ ಕಾವ್ಯಸೃಷ್ಟಿಯಲ್ಲಿ ತಲ್ಲೀನರಾಗಿದ್ದ ನಾರಣಪ್ಪ, ಸಾರಸ್ವತರೆಲ್ಲಾ ಅಚ್ಚರಿಗೊಳ್ಳುವಂತೆ ರಚಿಸಿದ್ದು ಮೂರು ಮಹಾಕಾವ್ಯಗಳನ್ನು. 1894ರಲ್ಲಿ 'ಅದ್ಭುತ ರಾಮಾಯಣ' 1895ರಲ್ಲಿ 'ಶ್ರೀರಾಮ ಪಟ್ಟಾಭಿಷೇಕ' 1896ರಲ್ಲಿ 'ಶ್ರೀರಾಮಾಶ್ವಮೇಧ'. ಇವುಗಳಿಗೂ ಹಿಂದೆ, ಅಂದರೆ 1889-92ರ ಅವಧಿಯಲ್ಲಿ ಇವರು ರಚಿಸಿದ್ದು ಮೇಲೆ ಹೇಳಿರುವ ಎರಡು ಯಕ್ಷಗಾನ ಪ್ರಸಂಗಗಳನ್ನು. ಒಟ್ಟಾರೆಯಲ್ಲಿ ಈ ಮಹಾಕವಿಯು ರಚಿಸಿರುವ ಐದು ಕೃತಿಗಳಷ್ಟೇ ನಮಗೆ ಲಭ್ಯ. ರಾಮಾಶ್ವಮೇಧದ ನಂತರ ನಾರಣಪ್ಪ ಒಂದು ಮಹಾವ್ಯಾಕರಣ ಗ್ರಂಥವನ್ನು ಭಟ್ಟಾಕಳಂಕನ ಶಬ್ದಾನುಶಾಸನ ಗ್ರಂಥದಂತೆಯೇ ಕನ್ನಡದಲ್ಲಿ ಸಣ್ಣಪುಟ್ಟ ಸೂತ್ರಗಳನ್ನು ಬರೆದು, ಅವುಗಳಿಗೆ ವಿಸ್ತಾರವಾದ ವಿವರಣೆಯನ್ನೂ ಕೊಟ್ಟು, ಅಕ್ಷರ ಖಂಡದವರೆಗೆ ಮುಗಿಸಿದ್ದರಂತೆ. ಮತ್ತೆ ತತ್ಸಮ ತದ್ಭವಗಳ ದೊಡ್ಡದೊಂದು ಪಟ್ಟಿಯನ್ನು ತಯಾರಿಸಿ ತಮ್ಮ ಈ ವ್ಯಾಕರಣ ಗ್ರಂಥದಲ್ಲಿ ಸೇರಿಸುವ ತಯಾರಿ ನಡೆಸಿದ್ದರಂತೆ. ಈ ವ್ಯಾಕರಣ ಗ್ರಂಥವನ್ನು ಇಂಗ್ಲಿಷಿನಲ್ಲಿರುವ 'ಎನ್‌ಸೈಕ್ಲೋಪೀಡಿಯಾ'ದ ಮಾದರಿಯಲ್ಲೇ ರಚಿಸಬೇಕೆಂದಿದ್ದರಂತೆ. ಈ ಬಗ್ಗೆ ನಾರಣಪ್ಪನವರು ಸಾಕಷ್ಟು ಕೆಲಸವನ್ನೂ ಮಾಡಿದ್ದರಂತೆ. ಆದರೆ ಈ ಬೃಹತ್ ಗ್ರಂಥವನ್ನು ಮುಗಿಸುವಷ್ಟರಲ್ಲೇ ಅತೀವ ದುಡಿತದಿಂದಾಗಿ ಕ್ಷಯರೋಗಕ್ಕೆ ತುತ್ತಾದ ನಾರಣಪ್ಪನವರು ತಮ್ಮ ಮಡದಿಯನ್ನೂ ಹಾಗೂ ತಮ್ಮ ಕೊನೆಗಾಲಕ್ಕೆ ಹುಟ್ಟಿದ ರಾಧಾಕೃಷ್ಣಯ್ಯ ಎಂಬ ಕೈಗೂಸನ್ನೂ ಅನಾಥರನ್ನಾಗಿ ಮಾಡಿ ಹೊರಟೇಹೋದರು. ಇವರ ಮರಣಾನಂತರ, ಇವರು ರಚಿಸಿದ್ದ ಹಲವಾರು ಅಪ್ರಕಟಿತ ಬರಹಗಳನ್ನು, ಇವುಗಳ ಬೆಲೆ ಏನೆಂಬುದನ್ನೇ ತಿಳಿಯದಿದ್ದ ಇವರ ತಂದೆ ತಿಮ್ಮಪ್ಪಯ್ಯ ಹಾಗೂ ಸಹೋದರ ಶಿವರಾಮಯ್ಯ ಹಳೇ ಪೇಪರ್, ಖಾಲಿ ಶೀಶೆ ಕೊಳ್ಳುವವರಿಗೆ ತೂಕದ ಲೆಕ್ಕದಲ್ಲಿ ಪುಡಿಗಾಸಿಗೆ ಮಾರಿಬಿಟ್ಟರಂತೆ. ಇನ್ನಷ್ಟು ಉಳಿದಿದ್ದನ್ನು ಶಿವರಾಮಯ್ಯ ಹರಿವ ನೀರಿಗೆ ಎಸೆದುಬಿಟ್ಟರಂತೆ. ಹೀಗೆ ಹಾಳಾದ ಹಸ್ತಪ್ರತಿಗಳ ಪೈಕಿ ಕೆಲವು ಅಮೂಲ್ಯವಾದ ರಚನೆಗಳು ಈಗಲೂ ಕೆಲವು ಮಹನೀಯರ ಬಳಿ ಇವೆಯಂತೆ. ಆದರೆ ಈ ಮಹನೀಯರು ಯಾವ ಯೋಚನೆಯಿಂದ ಅವುಗಳನ್ನು ಕಟ್ಟಿಟ್ಟು ಬಚ್ಚಿಟ್ಟು ಕೊಂಡಿರುವರೋ-ಆ ಪರಮೇಶ್ವರನಿಗೇ ಗೊತ್ತು ಎಂದು ನೊಂದು ನುಡಿದಿದ್ದಾರೆ ದಿವಂಗತ ಐರೋಡಿ ಶಿವರಾಮಯ್ಯನವರು.

ನಾರಣಪ್ಪನವರು, ಎಷ್ಟೆಲ್ಲಾ ಪ್ರತಿಭಾವಂತರಾಗಿದ್ದರೂ ಸಂಕೋಚ ಸ್ವಭಾವದ, ಆತ್ಮಸ್ಥೈರ್ಯ ಸಾಲದ ಅಂಜುಬುರುಕರು ಎಂದರೂ ನಡೆದೀತು. ಉದ್ದಕ್ಕೂ ಅವರು ನಡೆದುಕೊಂಡ ಬಗೆಯೇ ಈ ಮಾತಿಗೆ ನಿದರ್ಶನ. ಅವರ ಕಾವ್ಯಶಕ್ತಿಯಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ತನ್ನ ಕೃತಿಗಳನ್ನು ಮೈಸೂರು ವಿದ್ವಾಂಸರು ಒಪ್ಪುತ್ತಾರೋ ಇಲ್ಲವೋ ಎಂಬ ಅನುಮಾನದಿಂದ ತಾವು ರಚಿಸಿದ್ದ 'ಅದ್ಭುತ ರಾಮಾಯಣ' ಕೃತಿಯನ್ನು 'ಕನ್ನಡದ ಕಬ್ಬಿಗ'ನೊಬ್ಬ ಬರೆದಿರುವುದಾಗಿಯೂ, ಮತ್ತೆ ಈ ಗ್ರಂಥ ತಮಗೆ ತಾಳೇಗರಿಗಳಲ್ಲೂ ಸಿಕ್ಕಿರುವುದಾಗಿಯೂ ಮತ್ತೆ ತಾವದರ ಪ್ರತಿಯನ್ನು ರಚಿಸಿ ಮೂಲ ಹಸ್ತಪ್ರತಿಯನ್ನು ಕೊಟ್ಟವರಿಗೇ ಹಿಂತಿರುಗಿಸಿರುವುದಾಗಿಯೂ - ಹೀಗೆ, ಎಲ್ಲವೂ ಸುಳ್ಳು. ಕೃತಿ ಹಳಗನ್ನಡದಲ್ಲಿದ್ದು, ಅಮೋಘವಾಗಿದ್ದುದರಿಂದ ಈ

ಕೃತಿಯನ್ನು ಮೈಸೂರಿನಲ್ಲಿದ್ದ ಎಂ.ಎ. ರಾಮಾನುಜ ಅಯ್ಯಂಗಾರ್ ಅವರು ತಾವು ಪ್ರಕಟಿಸುತ್ತಿದ್ದ 'ಕಾವ್ಯ ಮಂಜರಿ' ಎಂಬ ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಿದರು. ವಿದ್ವಾಂಸರಿಂದಲೂ ವಿಮರ್ಶಕರಿಂದಲೂ, ಅಪಾರ ಮನ್ನಣೆ ಗಳಿಸಿದ ಈ ಕೃತಿ ನಾರಣಪ್ಪನವರಿಗೂ ಸಂತಸವನ್ನಿತ್ತಿತು. ಆದರೆ ಆಗಲೂ ತಾನೇ ಇದರ ಕರ್ತೃ ಎಂದು ಹೇಳಿಕೊಳ್ಳುವ ಎದೆಗಾರಿಕೆಯನ್ನಿವರು ತೋರಲಿಲ್ಲ. ನಂತರ 'ಶ್ರೀರಾಮ ಪಟ್ಟಾಭಿಷೇಕ'ವನ್ನು ರಚಿಸಿ ಹಿಂದೆ ತಿಳಿಸಿದಂತೆಯೇ, ಈ ಕೃತಿಯೂ ತನಗೆ ಆಕಸ್ಮಿಕವೆಂಬಂತೆ ದೊರಕಿತೆಂದೂ, ಮತ್ತಿದರ ಲೇಖಕಿ 'ಮಹಾಲಕ್ಷ್ಮೀ' ಎಂದೂ ಸುಳ್ಳು ಬರೆದು ಕಳುಹಿಸಿದರು. ಇದೂ 'ಕಾವ್ಯ ಮಂಜರಿ'ಯಲ್ಲಿ ಪ್ರಕಟವಾಯಿತು. ಅನಂತರ ಇವರು ರಚಿಸಿದ 'ಶ್ರೀ ರಾಮಾಶ್ವಮೇಧ'ದ ಕಥೆಯೂ ಹೀಗೆಯೇ. ಇದನ್ನು ಬರೆದವನು 'ಮುದ್ದಣ'ನೆಂಬ ಕವಿಯೆಂದೂ, ಈತ ಒಬ್ಬ ರಾಜನ ಆಸ್ಥಾನದ ಕವಿ ಎಂದೂ ಹೇಳಿ ಕಳುಹಿಸಿದರು. ಹೀಗೆ ಈ ಮೂರು ಮಹದ್‌ಕೃತಿಗಳು ನಾರಣಪ್ಪನವರಿಂದಲೇ ರಚಿತವಾಗಿದ್ದಾಗ್ಯೂ ಬೇರೆ ಬೇರೆ ಹುಸಿ ಹೆಸರುಗಳಿಂದ ಪ್ರಕಟಗೊಂಡವು. ಮತ್ತೆ ಈ ಗ್ರಂಥಗಳು (ಅದ್ಭುತ ರಾಮಾಯಣ ಹಾಗೂ ಶ್ರೀರಾಮ ಪಟ್ಟಾಭಿಷೇಕ) ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪರೀಕ್ಷೆಗಳಿಗೆ ಪಠ್ಯಪುಸ್ತಕವಾದವು. ಆಗಲಾದರೂ ಈ ಕೃತಿಗಳನ್ನು ರಚಿಸಿದ್ದು ನಾನೇ ಎಂದು ಘೋಷಿಸಿ ಸಾಬೀತುಗೊಳಿಸಿದ್ದರೆ ತಕ್ಕಮಟ್ಟಿನ ಗೌರವಧನ ಪಡೆದು ಕಾಡುತ್ತಿದ್ದ ಕಷ್ಟಕಾರ್ಪಣ್ಯಗಳಿಂದ ತಾತ್ಕಾಲಿಕವಾಗಿಯಾದರೂ ಇವರು ಪಾರಾಗಬಹುದಿತ್ತು. ಆದರೆ ನಾರಣಪ್ಪನವರು ಅಂತಹುದೇನನ್ನೂ ಮಾಡಲೇ ಇಲ್ಲ. ಕೃತಿಯೊಂದು ಪ್ರಕಟಗೊಂಡು ಜನರ ಸ್ಮೃತಿಯಲ್ಲಿ ಉಳಿದರೆ ಸಾಕು ಎಂಬ ನಿರ್ಲಿಪ್ತ ವ್ಯಕ್ತಿ ನಾರಣಪ್ಪ ಕೊನೆಗೂ ತನ್ನ ನಾಮಾಂಕಿತವನ್ನು ನಿಗೂಢವಾಗಿಯೇ ಇರಿಸಿಕೊಂಡು ನಾರಾಯಣನ ಸನ್ನಿಧಿಗೆ ನಡೆದುಬಿಟ್ಟರು. ಆದರೆ ಈ ವಿಚಾರವಾಗಿ ಎದ್ದ ಎಲ್ಲ ವಾದವಿವಾದಗಳನ್ನು ತಳ್ಳಿಹಾಕಿ, ಸೂಕ್ತ ಸಾಕ್ಷ್ಯಾಧಾರಗಳೊಡನೆ ಈ ಎಲ್ಲ ಕೃತಿಗಳನ್ನೂ ರಚಿಸಿದ ಮಹಾಕವಿ ನಂದಳಿಕೆಯ ನಾರಣಪ್ಪನೇ ಎಂಬುದನ್ನೂ, ಅವನೇ ಮುದ್ದಣ, ಅವನೇ ಮಹಾಲಕ್ಷ್ಮೀ, ಅವನೇ ಕನ್ನಡದ ಕಬ್ಬಿಗ, ಅವನೇ ವೆಂಕಟಸುಬ್ಬಮ್ಮ, ಎಲ್ಲವೂ ಅವನೇ ಎಂದು ಎಲ್ಲರೂ ಒಪ್ಪುವಂತೆ ಸಾಬೀತುಪಡಿಸಿ ದೃಢಪಡಿಸಿದವರು ಖ್ಯಾತ ಸಂಶೋಧಕರಾದ ದಿವಂಗತ ಗೋವಿಂದ ಪೈ ಅವರು. ಹೀಗಿವರು ಮಾಡಿದ್ದು ನಾರಣಪ್ಪ ನಿಧನರಾದ ನಾಲ್ಕು ದಶಕಗಳ ನಂತರ.

ಕೊನೆಯದಾಗಿ, ಕ್ಷಯರೋಗಕ್ಕೆ ತುತ್ತಾಗಿ, ಚಿಕಿತ್ಸೆ ಪಡೆಯಲೂ ಹಣವಿಲ್ಲದೆ, ಕಷ್ಟವೆನಿಸಿದ್ದ ಬದುಕಿನ ಬಂಧನ 'ದಿಂದ ಬಿಡಿಸಿಕೊಂಡು ಕೊನೆಗೊಮ್ಮೆ ಮುಕ್ತರಾದ ಈ ಮಹಾಕವಿಯನ್ನು ಕುರಿತು ಕಾರ್ಯಹಳ್ಳಿ ರಾಮಕೃಷ್ಣಶೆಟ್ಟಿ ಎಂಬುವರು ರಚಿಸಿರುವ ಚರಮಶ್ಲೋಕವಿದು-

'ನಾಡಾಡಿಯಾಗಿ ಊರೂರೊಳಗೆ ಬೇಡಿದರು
ಕವಿಯಾಗಿ ಜನಿಸಬೇಡ, ಕನ್ನಡದಿ
ಕವಿಯಾಗಿ ಜನಿಸಬೇಡ'.

-ಬಿ. ಎನ್. ಕೇಶವರಾವ್,

ಮುಂಬರುವ ಕೊಡಗು ಮಂಗಳೂರು (ಪರುಶುರಾಮ್ ಕ್ಷೇತ್ರ) ಲೋಕಸಭಾ ಸ್ಥಾನಕ್ಕೆ ರಾಜ್ಯದ ವಿರೋಧ ಪಕ್ಷದ ಉಪನಾಯಕ ದೇವರಗುಂಡ ಸದಾನಂದರು ಎಷ್ಟು ಸಮಂಜಸ ?

ದಿನ ಬೆಳಗಾದರೆ ಉಪದ್ವ್ಯಾಪಗಳಲ್ಲಿ ಸಿಕ್ಕಿಕೊಳ್ಳುತ್ತಾ ವಾಜಪೇಯಿ ಸಂಪುಟದಿಂದ ಹೊರಬಿದ್ದ ಸಂಸದ ಧನಂಜಯಕುಮಾರ್ ಈಗ ಕಾಂಗ್ರೆಸ್ ಕ್ಯಾಂಪಿನಲ್ಲಿ ಮುಖ ತೋರಿಸತೊಡಗಿದ್ದಾರೆ. ಅಡ್ವಾಣಿ ಇವರ ಸಂಬಂಧಿಯೊಬ್ಬರನ್ನು ಅಟಕಾಯಿಸಿ ಕೊಂಡು ಪ್ರಸಾದ ಕೇಳಿದ ತಪ್ಪಿಗಾಗಿ ಸಮೃದ್ಧ ಹಣಕಾಸು ಖಾತೆಯಿಂದ ದುರ್ಬಲ ಜವಳಿ ಖಾತೆಗೆ ಎತ್ತಂಗಡಿ ಆಗಿ, ಕೊನೆಗೊಮ್ಮೆ ಅಲ್ಲಿಂದಲೂ ಜಾಗ ಖಾಲಿ ಮಾಡಿದ ಧನಂಜಯಕುಮಾರ್‌ಗೆ ಮುಂಬರುವ ಚುನಾವಣೆಯಲ್ಲಿ ಟಿಕೆಟ್ ಸಿಗುವುದೇ ಖಾತರಿ ಆಗುತ್ತಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ದೆಹಲಿಯ ವರಿಷ್ಠರನ್ನೇ ಧನಂಜಯ ಎದುರು ಹಾಕಿಕೊಂಡಿರುವುದರಿಂದ, ಮಂಗಳೂರು ಲೋಕಸಭಾ ಕ್ಷೇತ್ರದಿಂದ ಸದಾನಂದ ಗೌಡರನ್ನು ಕಣಕ್ಕಿಳಿಸುವುದು ರಾಜ್ಯ ಬಿಜೆಪಿ ನಾಯಕರ ಲೆಕ್ಕಾಚಾರ. ಪುತ್ತೂರು, ಸುಳ್ಯ, ಕೊಡಗು ಸೇರಿದಂತೆ ಮಂಗಳೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗೌಡರ ಪ್ರಭಾವ ಹೆಚ್ಚಾಗಿರುವುದರಿಂದ ಸದಾನಂದ ಗೌಡರನ್ನು ಕಣಕ್ಕಿಳಿಸಬೇಕು ಎಂಬುದು ಈ ಲೆಕ್ಕಾಚಾರದ ಹಿಂದಿನ ಪ್ರೇರಣೆ.



ಈ ಮಧ್ಯೆ ಶಾಸನ ಸಭೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿರುವ ಸದಾನಂದಗೌಡ 'ಹಿಂದೂ' ಮತಗಳಿಗಾಗಿ ಕಟ್ಟಾ ಆರೆಸ್ಸೆಸ್ ಮಾದರಿಯಲ್ಲಿ ಬಡಿದಾಡುವುದರಿಂದ ಅವರಿಗೆ ಸಂಘ ಪರಿವಾರದ 'ಗ್ಲುಕೋಸು' ದಕ್ಕಬಹುದು. ಹಾಗಾಗಿಯೇ ಮಂಗಳೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಕಷ್ಟು ಪ್ರವಾಸ ಮಾಡುತ್ತಿರು ವ ಸದಾನಂದ ಗೌಡ, ಈ ಕ್ಷೇತ್ರದ ವ್ಯಾಪ್ತಿಯ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳತೊಡಗಿದ್ದಾರೆ.

ಒಂದು ಅಂದಾಜಿನ ಪ್ರಕಾರ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಗಳಿಸಿದ ನಂತರ ಮುಂದಿನ ಏಪ್ರಿಲ್ ಅಥವಾ ಮೇ ತಿಂಗಳ ವೇಳೆಗೆ ಬಿಜೆಪಿ ಸಂಸತ್ತನ್ನು ವಿಸರ್ಜಿಸಿ ಚುನಾವಣೆಗೆ ಹೋಗಬಹುದು. ಹಾಗೇನಾದರೂ ಆದರೆ ಪೂರ್ವಭಾವಿ ತಯಾರಿ ಬೇಕಲ್ಲ ? ಹಾಗಂತಲೇ ರಾಜ್ಯ ಘಟಕದ ನಾಯಕರು ಸದಾನಂದ ಗೌಡರಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಮತ್ತದನ್ನು ಸದಾನಂದ ಗೌಡ ಕೂಡ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದ್ದಾರೆ.

ವಿಷಯ ಈ ಮಟ್ಟಕ್ಕೆ ಹೋದ ಮೇಲೆ ಧನಂಜಯ ಕುಮಾರ್ ಏನು ಮಾಡಬೇಕು ? ಏಕಕಾಲಕ್ಕೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಆಸ್ಕರ್ ಫರ್ನಾಂಡಿಸ್ ಹಾಗೂ ರಾಜ್ಯಸಭಾ ಸದಸ್ಯ ಜನಾರ್ಧನ ಪೂಜಾರಿ ಅವರ ಟೆಂಟುಗಳಲ್ಲಿ ಕಾಣಿಸತೊಡಗಿದ್ದಾರೆ. ಟಿಕೆಟ್ಟಿಗಾಗಿ ಅರ್ಜಿ ಗುಜರಾಯಿಸಿದ್ದಾರೆ.

- ಸಂಗಾತಿ

ಗ್ರಾಮ ದರ್ಶನ - 1

ಅವಂದೂರು :-

-ಲೇಖಕ : ಶಿವಳ್ಳಿ ಕೆಂಪೇಗೌಡ



ಮಡಿಕೇರಿ ತಾಲ್ಲೂಕಿನ ಅವಂದೂರು ಗಗನಚುಂಬಿ ಬೆಟ್ಟ ಗುಡ್ಡಗಳಿಂದ ಆವೃತವಾದ ರಮ್ಯ ಪರಿಸರದಲ್ಲಿದೆ. ಈ ಗ್ರಾಮದಲ್ಲಿ ನೂರ ಮುವತ್ತ ಕ್ಕಿಂತಲೂ ಹೆಚ್ಚು ಕುಟುಂಬಗಳಿವೆ. ಇಲ್ಲಿ ನೂರಕ್ಕೆ 99ರಷ್ಟು ಗೌಡ ಜನಾಂಗದವರು ನೆಲೆಸಿ ರುವುದು ವಿಶೇಷವಾಗಿದೆ.

1785ರಲ್ಲಿ ಟಿಪ್ಪು ಸುಲ್ತಾನನ ದುರಾಕ್ರಮಣದಿಂದ ಈ ಗ್ರಾಮ ಸಂಪೂರ್ಣವಾಗಿ ಹಾನಿಗೊಳಗಾಯಿತು. ಆ ಕಾಲದಲ್ಲಿ ಇಲ್ಲಿ ಹೆಚ್ಚಾಗಿ ಅಮ್ಮಕೊಡವರು ನೆಲೆಸಿದ್ದರೆಂದು ಹಿರಿಯರು ಹೇಳುತ್ತಾರೆ. ಅವಂದೂರು ಗ್ರಾಮದ ಪೂರ್ವಿಕರು ಅಮರ ಸುಳ್ಯದ ಕಡೆಯಿಂದ ಹಾಗೂ ಪಟ್ಟಡ (ಬಲ್ಯಾಯಿರ) ಮತ್ತು ದೇವಾಯಿರ ಮನೆತನದವರು ಐಗೂರು ಸೀಮೆಯಿಂದ ಇಲ್ಲಿಗೆ ಬಂದು ನೆಲೆಸಿದರೆಂದು ತಿಳಿದುಬರುತ್ತದೆ.

ಈ ಸುತ್ತಮುತ್ತಲ ಗ್ರಾಮಗಳಿಗೆ ಹೆಸರು ಕಟ್ಟುವ ಕಾಲಕ್ಕೆ ನಾಡಿನ ತಕ್ಕ ಮುಖ್ಯಸ್ಥರೆಲ್ಲಾ ಒಂದು ಕಡೆ ಸಭೆ ಸೇರಿದರಂತೆ. ಎಲ್ಲ ಊರುಗಳಿಗೂ ನಾಮಕರಣ ಮಾಡಿದರು. ಆದರೆ ಈ ಊರಿಗೆ ಹೆಸರಿಡುವುದು ಮರೆತು ಹೋಯಿತು. ಆ ಸಂದರ್ಭದಲ್ಲಿ ಮುಖ್ಯಸ್ಥರಲ್ಲೊಬ್ಬ 'ಆ ಒಂದೂರಿಗೆ ಹೆಸರು ಕಟ್ಟುವುದನ್ನೇ ಮರೆತುಬಿಟ್ಟೆವಲ್ಲಾ !' ಎಂದ. ಹಾಗಾಗಿ ಈ ಊರಿಗೆ "ಆ ಒಂದು ಊರು" ಕ್ರಮೇಣ ಅವಂದೂರು ಎಂಬ ಹೆಸರೇ ಶಾಶ್ವತವಾಗಿ ಉಳಿಯಿತು.

ಅವಂದೂರಿನಲ್ಲಿ ಗ್ರಾಮದ ಅಧಿದೇವತೆ ಗೋಪಾಲ ಕೃಷ್ಣ. ಶಾಸ್ತಾವು ಹಾಗೂ ಚಾಮುಂಡೇಶ್ವರಿ ದೇವಾಲಯಗಳು ಅಕ್ಕಪಕ್ಕದಲ್ಲಿದ್ದು ತ್ರಿಕೋನಾಕಾರದಲ್ಲಿವೆ. ಈಶ್ವರ ಅಂಶದ ಶಾಸ್ತಾವು ದೇವಾಲಯದೊಳಗೆ ಚಾಮುಂಡೇಶ್ವರಿ ಹಾಗೂ ಬೇಟೆ ಅಯ್ಯಪ್ಪದೇವರ ಉತ್ಸವ ಮೂರ್ತಿಗಳಿವೆ. ಈ ದೇವಾಲಯಗಳ ಸಮೀಪದಲ್ಲಿಯೇ ಆನೆಪಾರೆ ಇದೆ. ಆನೆಯಾಕಾರದ ಈ ಬಂಡೆ ಕಣ್ಮನ ಸೆಳೆಯುತ್ತದೆ.

ಅವಂದೂರು ಗ್ರಾಮದಲ್ಲಿ ಶಾಸ್ತಾವು ದೇವರು ನೆಲೆ ಗೊಂಡ ಕಥೆ ಸ್ವಾರಸ್ಯಕರವಾಗಿದೆ. ಶಾಸ್ತಾವು ದೇವರ ಒಲುಮೆ ಬಂದವರು ಕೇರಳ ರಾಜ್ಯದ ಮಾಡಾಯಿಯಿಂದ ಹೊರಟು ದಕ್ಷಿಣ ಕನ್ನಡ ಜಿಲ್ಲೆಯ ಬೆಟ್ಟಗುಡ್ಡ ಹತ್ತಿ ಇಲ್ಲಿಗೆ ಸಮೀಪದ ಬೆಟ್ಟತ್ತೂರು ಮಲೆಯಲ್ಲಿ ನಿಂತು ದೃಷ್ಟಿ ಹಾಯಿಸಿದರು. ಆ ಸ್ಥಳ ಸೂಕ್ತವಲ್ಲವೆಂದು ಭಾವಿಸಿ ಅವರು ಮುಂದೆ ಹೆಜ್ಜೆ ಹಾಕಿದಾಗ ಅವಂದೂರು ಗ್ರಾಮ ಸಿಕ್ಕಿತು. ಒಲುಮೆ ಬಂದವರು ತಮ್ಮ ದೇವರಿಗೆ ಈ ಊರಿನ ಬಲ್ಯಾಯಿರಿ ಪಟ್ಟಿಯೇ (ಪಟ್ಟಡ ಪಟ್ಟಿ) ಸೂಕ್ತ ಸ್ಥಳವೆಂದು ಮನಗಂಡು ಇಲ್ಲಿಯೇ ನೆಲೆ ನಿಲ್ಲಲು ತೀರ್ಮಾನಿಸಿದರು. ಮನೆಯವರಿಗೆ ಈ ದೇವತೆಗಳ ಹಿನ್ನೆಲೆ, ಮಹಿಮೆ ಅರಿವಾಗದೆ, ಪಕ್ಕದ ದೇವಾಯಿರ ಕುಟುಂಬದ ಹಿರಿಯರನ್ನು ಸಂಪರ್ಕಿಸಿದರು. ಈ ದೇವತೆಗಳ ಹಿನ್ನೆಲೆ ಅವರಿಗೂ ಸಹ ತಿಳಿಯಲಿಲ್ಲ. ನಂತರ ಅವರೆಲ್ಲರೂ ಒಟ್ಟುಗೂಡಿ ಐಯ್ಯಂಡ್ರಯಾನೆ ಬೆಳ್ಯನ ಕುಟುಂಬದ ಹಿರಿಯರಲ್ಲಿಗೆ ಹೋದರು. ಅವರಿಗೂ ಸಹ ಈ ದೇವರ ಹಿನ್ನೆಲೆ ಅರಿವಾಗಲಿಲ್ಲ. ಕೊನೆಗೆ ಈ ಎಲ್ಲಾ ಕುಟುಂಬಸ್ಥರೂ ಸಹ ಜೊತೆಗೂಡಿ ಕೂಪೇರ ಯಾನೆ ಕಡ್ಯದ ಕುಟುಂಬದ ಹಿರಿಯರೊಡನೆ ಈ ಸಂಬಂಧವಾಗಿ ಚರ್ಚಿಸಿ ಕೊನೆಗೊಂದು ತೀರ್ಮಾನಕ್ಕೆ ಬಂದರು. ನಂತರ ಈ ಕುಟುಂಬದವರೆಲ್ಲಾ ಸೇರಿ ಒಲುಮೆ ಬಂದ ಶಾಸ್ತಾವು, ಚಾಮುಂಡೇಶ್ವರಿ ಹಾಗೂ ಬೇಟೆ ಅಯ್ಯಪ್ಪರನ್ನು ಹಾಲು ಹಣ್ಣು ಹಂಪಲು ನೀಡಿ ಸತ್ಕರಿಸಿದರು. ಇವರ ಉಪಚಾರದಿಂದ ಸಂತುಷ್ಟರಾದ ಈ ದೇವರುಗಳು ಇಲ್ಲೇ ಪಟ್ಟಿಯಲ್ಲಿ ನೆಲೆಗೊಂಡು ಗ್ರಾಮಸ್ಥರಿಗೆ ಅಭಯಪ್ರದಾನ ಮಾಡಿದರೆಂದು ಹಿರಿಯರು ಹೇಳುತ್ತಾರೆ. ಇದಕ್ಕೆ ಸಾಕ್ಷಿ ಎಂಬಂತೆ ಭಂಡಾರ, ಉತ್ಸವಮೂರ್ತಿ ಹಾಗೂ ಪೂಜಾ ಪರಿಕರಗಳನ್ನುಕೂಪೇರ ಯಾನೆ ಕಡ್ಯದ ಐನ್‌ಮನೆಯಲ್ಲಿ ಇಡುತ್ತಾರೆ.

ಪ್ರತಿ ವರ್ಷ ಮಾರ್ಚಿ ಮೊದಲ ವಾರದಲ್ಲಿ ಈ ದೇವತೆಗಳ ಹೆಸರಿನಲ್ಲಿ ಊರ ಹಬ್ಬವು ವಿಜೃಂಭಣೆಯಿಂದ ನಡೆಯುತ್ತದೆ. ಊರ ಹಬ್ಬದ ಹತ್ತು ದಿನಗಳ ಹಿಂದೆ ಊರಿಗೆ ಕಟ್ಟು ಬೀಳುತ್ತದೆ. ತಕ್ಕ ಮುಖ್ಯಸ್ಥರು ಕೂಡಿ ಕಟ್ಟು ವಿಧಿಸಿದ ದಿನದಿಂದಲೇ ಊರಿನಲ್ಲಿ ಯಾರೂ ಗುಂಡು ಹೊಡೆಯುವಂತಿಲ್ಲ. ಪ್ರಾಣಿಹತ್ಯೆ ಮಾಡುವಂತಿಲ್ಲ. ಮದ್ಯ ಮಾಂಸ ಸೇವಿಸುವಂತಿಲ್ಲ. ಈ ಕಟ್ಟುಪಾಡನ್ನು ಗ್ರಾಮಸ್ಥರು ಉತ್ಸವ ಮುಗಿಯುವವರೆಗೂ ಶಿರಸಾವಹಿಸಿ ಪಾಲಿಸುತ್ತಾರೆ. ಕಟ್ಟು ಬಿದ್ದ ದಿನದಿಂದಲೇ ಗ್ರಾಮಸ್ಥರು ದೇವಾಲಯದ ಸ್ವಚ್ಛತೆ ಮತ್ತಿತರ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

ಊರ ಹಬ್ಬದ ಮೊದಲನೆಯ ದಿನ ತಕ್ಕ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಸೇರಿ ಶುದ್ಧ 'ಮುದ್ರಿಕೆ'ಯಿಂದ ಆದಿಶಕ್ತಿಯನ್ನು ಪ್ರಾರ್ಥಿಸುತ್ತಾರೆ. ನಂತರ ಆರು ಮಂದಿ ತಕ್ಕರು ಭತ್ತ ತುಂಬಿದ ಗಡಿಗೆಗಳನ್ನು ಹಿಡಿದು ಹಿಂದೆ ಈ ದೇವತೆಗಳು ನಿಂತು ದೃಷ್ಟಿ ಹಾಯಿಸಿದ್ದ ಬೆಟ್ಟತ್ತೂರು ಗ್ರಾಮದ ಬೆಟ್ಟತ್ತು ಮಲೆಗೆ ಕಲಾಯಿ ಹೋಗುತ್ತಾರೆ. ಬೆಟ್ಟತ್ತು ಮಲೆ ಮಡಿಲಿನಲ್ಲಿ ಈ ಗಡಿಗೆಗಳನ್ನು ಕುಡಿಯ ಜನಾಂಗದವರ ಸುಪರ್ದಿಗೆ ವಹಿಸುತ್ತಾರೆ.

ಕುಡಿಯರು ಬೆಟ್ಟತ್ತು ಮಲೆಯಿಂದ ಚಾಮುಂಡೇಶ್ವರಿ ದೇವಿಗೆ ಕೋಲ ಕಟ್ಟುವುದಕ್ಕಾಗಿ ನೆಟ್ಟಿಪಾಯಿ ಚಿರಿಯನ್ನು ತಂದುಕೊಡುವರು. ಕಲಾಯಿ ಹೋದ ತಕ್ಕ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಬೆಟ್ಟತ್ತು ಮಲೆಯಿಂದ ವಾಪಸ್ಸು ಬರುವಾಗ ತಾವು ಜೊತೆಯಲ್ಲಿ ಕೊಂಡೊಯ್ದಿದ್ದ ಮಣ್ಣಿನ ಗಡಿಗೆಗಳ ತುಂಬ ಬೈನೇ ಮರದ ಸೇಂದಿಯನ್ನು ತಂದು ಚಾಮುಂಡಿ ಬನದಲ್ಲಿ ಇಡುತ್ತಾರೆ.

ಹಬ್ಬದ ದಿನ ಬೆಳಗಿನ ಜಾವ ತಕ್ಕ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಸೇರಿ ದೇವರನ್ನು ಪ್ರಾರ್ಥಿಸಿದ ನಂತರ ಪೊಡ, ದುಡಿ, ಬಾಳೋಪಾಟ್ ಒಡ್ಡೋಲಗದ ಜೊತೆಯಲ್ಲಿ ಸಾಗುತ್ತಾರೆ. ಊರಿನ ಕಾವುಕಾರ ತಕ್ಕರು ಭಂಡಾರವನ್ನು ತಲೆಯ ಮೇಲೆ ಹೊತ್ತು ತಂದು ಅದನ್ನು ಪಟ್ಟಡ ಪಟ್ಟಿಯಲ್ಲಿರುವ ದೇವಾಲ ಯದ ನೆಲೆಯ "ಭಂಡಾರದ ಮನೆ"ಯಲ್ಲಿ ಇಡುತ್ತಾರೆ.

ಅದೇ ದಿನ ಹತ್ತು ಗಂಟೆಯ ವೇಳೆಗೆ ಶಾಸ್ತಾವು ದೇವತೆಯು ಸಹದೇವತೆಗಳಾದ ಚಾಮುಂಡೇಶ್ವರಿ ಹಾಗೂ ಬೇಟೆ

ಅಯ್ಯಪ್ಪ ಉತ್ಸವ ಮೂರ್ತಿಗಳೊಡನೆ ಮೆರವಣಿಗೆಯಲ್ಲಿ ಸಾಗಿ ಒಂದು ಮೈಲು ದೂರದ ಅವಂದೂರು ಹೊಳೆಯಲ್ಲಿ ಮೀಯುತ್ತಾರೆ. ವಾಪಸ್ಸು ಬರುವಾಗ ಊರಿನ ಶಾಂತಿ ದೇವತೆ ಶ್ರೀ ಗೋಪಾಲಕೃಷ್ಣನ ಸನ್ನಿದಿಗಾಗಿ ಬರುವಾಗ ಅಂಬಲ ಮಾನಿಯಲ್ಲಿ ಬ್ರಾಹ್ಮಣೋತ್ತಮರಿಂದ ಗಂಧ ಪುಷ್ಪಗಳಿಂದ ಪೂಜಿಸಲ್ಪಟ್ಟು ವಿರಮಿಸಿ ನಂತರ ಎತ್ತೇರು, ಎತ್ತರಾಟದ ಸಂಭ್ರಮದೊಡನೆ ಶಾಸ್ತಾವು ನೆಲೆಗೆ ಬಂದು ಪಟ್ಟಡ ಪಟ್ಟಿಗೆ ಆಗಮಿಸಿ ಭಂಡಾರವನ್ನು ಅಲ್ಲಿಡುತ್ತಾರೆ. ಈ ಸಂದರ್ಭದಲ್ಲಿ ಎತ್ತರಾಟದವರು ದೇವಾಲಯವನ್ನು ಏಳುಸುತ್ತು ಪ್ರದಕ್ಷಿಣೆ ಮಾಡಿ ಅಕ್ಕಿಯನ್ನು ಒಪ್ಪಿಸುತ್ತಾರೆ. ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ಮಲೆಯರು, ಪಣಿಕ್ಕರು ಆ ದೇವತೆಗಳ ಕೋಲ ಕಟ್ಟುತ್ತಾರೆ. ದೇವಾಲಯದಲ್ಲಿ ಶಾಸ್ತಾವು, ಅಯ್ಯಪ್ಪದೇವರ ಕೋಲ ಕಟ್ಟಿದವರು ತೋತದಲ್ಲಿ ನಿರತವಾಗುವರು. ತೆರೆಕಟ್ಟಿ ಆಟ್‌ಪಾಟ್‌ಗಳಲ್ಲಿ ನಿರತರಾಗಿರುವಾಗ "ತಿರೋಳ" (ಆವೇಶ) ಬಂದವರು ಸಹ ಜೊತೆಗೂಡಿ ಕಳೆ ತರುವುದರೊಂದಿಗೆ ಹಬ್ಬಕ್ಕೆ ರಂಗೇರುವುದು. ಚಂಡೆಯ ಬಡಿತ ಬೆಟ್ಟಗುಡ್ಡಗಳಲ್ಲಿ ಅನುರಣಿಸುತ್ತದೆ. ಇದೇ ವೇಳೆಯಲ್ಲಿ ಪಕ್ಕದ ಚಾಮುಂಡಿ ದೇವತೆಯ ಒಲುಮೆ ಬಂದವನು ಕೋಲ ಸಮೇತ ಇವರ ಜೊತೆಗೂಡುವನು. ಸಂಜೆಯ ಸೂರ್ಯ ಕೆಂಪಗೆ ರಪರಪನೆ ಹೊಳೆಯುತ್ತಾ ಬೆಟ್ಟದ ಹಿಂದೆ ಮರೆಯಾಗುವಾಗ ಈ ದೇವತೆಗಳು ಒಕ್ಕಣೆ ಹೇಳಿ ಗ್ರಾಮಸ್ಥರನ್ನು ಆಶೀರ್ವದಿಸಿದ ನಂತರ ಮೂವರು ದೇವತೆಗಳು ಚಾಮುಂಡಿ ಸ್ಥಾನಕ್ಕಾಗಿ ಬಂದು ನಂತರ ಅರ್ಧ ಕಿಲೊ ಮೀಟರ್ ದೂರದ ಚಾಮುಂಡಿ ಬನದಲ್ಲಿ ಪುನಃಹ ಒಕ್ಕಣೆ ಹೇಳಿ, ಆಶೀರ್ವದಿಸಿ ಕೋಲ ಬಿಚ್ಚುತ್ತಾರೆ. ಇದನ್ನು ಮುಳುವೆನ್ನುತ್ತಾರೆ.

ಮಾರನೆಯ ದಿನ ಗ್ರಾಮಸ್ಥರು ಚಾಮುಂಡಿ ಸ್ಥಾನದಲ್ಲಿ ಸೇರಿ ಕಟ್ಟು ಮುರಿಯುತ್ತಾರೆ. ಜೊತೆಯಲ್ಲಿ ತಂದ ಭಂಡಾರವನ್ನು ದೇವಾಲಯದಿಂದ ಪುನಃ ಬಂಡಾರ ಮನೆಯ ದೇವತಕ್ಕರ ಸುಪರ್ದಿಗೆ ವಹಿಸುತ್ತಾರೆ.

ಪ್ರತಿ ವರ್ಷ ಮಕರ ಸಂಕ್ರಾಂತಿಯಂದು ರಾತ್ರಿ ವೇಳೆಯಲ್ಲಿ ಬೇಟೆಚವ್ವ ಮತ್ತು ಕಾಡಯ್ಯನೆಂಬ ದೇವತೆಗಳು ಬೇಟೆಯಾಡುವ ಪದ್ಧತಿ ರೂಢಿಯಲ್ಲಿದೆ. ಬೇಟೆಚವ್ವ ತಕ್ಕರಾದ ಕರಿಂಜನ ಯಾನೆ ಪೊನ್ನಚ್ಚನ ಕುಟುಂಬದವರು ಹಾಗೂ ಕಾಡಯ್ಯನ ತಕ್ಕರಾದ ಬಲ್ಯಾಯಿಯಾನೆ ಪಟ್ಟಡ ಕುಟುಂಬದವರ ಮತ್ತು ತಕ್ಕ ಮುಖ್ಯಸ್ಥರ ಉಸ್ತುವಾರಿಯಲ್ಲಿ ಈ ಬೇಟೆಯಾಡುವ ಚೇತೋಹಾರಿ ಉತ್ಸವ ನಡೆಯುತ್ತದೆ. ಈ ಉತ್ಸವದಲ್ಲಿ ಮಲೆಯ ಮತ್ತು ಪಣಿಕ್ಕ ಜನಾಂಗದವರು ಕೋಲ ಕಟ್ಟುತ್ತಾರೆ. ಇಬ್ಬರು ತೆರೆ ಕಟ್ಟುವರು ಆ ದೇವತೆ ಹಿನ್ನೆಲೆಯನ್ನು ಸಾರುವ ಚರಿತ್ರೆಯನ್ನು ತೋತ ಎಂಬ ಒಕ್ಕಣೆಯನ್ನು ಮಲೆಯಾಳಿ ಭಾಷೆಯಲ್ಲಿ ಹೇಳುತ್ತಾರೆ. ಕತ್ತಲ ನೀರವತೆಯನ್ನು ಕಲಕುವ ಚಂಡೆ ಬಡಿತ ತಾರಕಕ್ಕೇರುತ್ತಿವುದು. ಆಗ ಕೆಲವರಿಗೆ ಆವೇಶ ಬರುವುದು. ಈ ರೀತಿ ಕೋಲ ಕಟ್ಟುವವರು ಕೇರಳದಿಂದ ಬಂದ ಮಲೆಯ ಮತ್ತು ಪಣಿಕ್ಕ ಜನಾಂಗದವರು ಎಂಬುದು ಗಮನಾರ್ಹ. ಕೊಡಗಿನಲ್ಲಿ ಒಂದೆರಡು ಕಡೆಗಳಲ್ಲಿ ಮಾತ್ರ ಈ ಉತ್ಸವ ನಡೆಯುತ್ತದೆ.

ಅವಂದೂರಿನ ಗ್ರಾಮದ ಅಧಿದೇವತೆಯಾಗಿ ಶ್ರೀ ಗೋಪಾಲ ಕೃಷ್ಣನು ಪೂಜಿಸಲ್ಪಡುತ್ತಾನೆ. ಇದು ಉತ್ಸವ ಮೂರ್ತಿಯೆಂದು ಪ್ರತೀತಿ. ವರ್ಷಂಪ್ರತಿ ಬಿಸು ಸಂಕ್ರಮಣದಂದು ಇಲ್ಲಿ ಪೂಜೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಊರಿನವರು ಬೆಳಿಗ್ಗೆಯಿಂದಲೆ ಪಟ್ಟಿಯಲ್ಲಿದ್ದು ಅಂದು ಅವಲಕ್ಕಿ ಮಾತ್ರ ಇವರ ಸೇವನೆಯಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಶ್ರೀಕೃಷ್ಣ ಜನ್ಮಾಷ್ಟ ಮಿಯಂದು ವಿಶೇಷ ಪೂಜೆ ಇರುವುದು. ಕೃಷ್ಣನನ್ನು ನೆನೆದು ಪೂಜಿಸಿದರೆ ಮಕ್ಕಳ ಫಲ ಲಭಿಸುವುದೆಂದು ಹಿರಿಯರು ಹೇಳುತ್ತಾರೆ. ತಮ್ಮ ಕಷ್ಟ ಸುಖಗಳಿಗೆ ಸ್ಪಂದಿಸಲು ದನಕರುಗಳನ್ನು ಹರಕೆ ಬಿಡುವ ಕ್ರಮವು ಇರುವುದು.

ಇಲ್ಲಿ "ಜೋಗಿ ಅಯ್ಯಪ್ಪ" ಮತ್ತು ಕೇರಿ ಅಯ್ಯಪ್ಪವೆಂಬ ಎರಡು ಕೋಲವನ್ನು ಹುತ್ರಿ ಸಂದರ್ಭದಲ್ಲಿ ಕಟ್ಟುತ್ತಿದ್ದರು. ಇವು ಜೋಗಿಯ ವೇಷ ಭೂಷಣಗಳೊಡನೆ ಒಂದು ವಾರದ ಕಾಲವು ಊರ ಮಂದ್‌ನಲ್ಲಿ "ಈಡು ತೆಗೆಯೋದು" ಕಾರ್ಯಕ್ರಮ ವಿರುತ್ತಿತ್ತು. ಹುತ್ರಿ ಹಬ್ಬದ ಈ ಒಂದು ವಾರದಲ್ಲಿ ಮನೆ ಮನೆಗೂ ತೆರಳಿ ಅಲ್ಲಿಯ ಮನೆ ಚರಿತ್ರೆಯನ್ನು ಬಾಳೊಪಾಟ್ ಮೂಲಕ ಹೇಳಿಸಿ, ಮನೆಯವರೆಲ್ಲರೂ ಜೋಗಿಯಿಂದ ಆಶೀರ್ವಾದ ಪಡೆದು ತಮ್ಮ ಕಾಣಿಕೆಯನ್ನು ನೀಡುತ್ತಿದ್ದರು. 7ನೆ ದಿನದ ಕೊನೆಗೆ ವಿಜೃಂಭಣೆಯಿಂದ ಹಬ್ಬವು ನಡೆಯುತ್ತಿತ್ತು. ಹೊಸದಾಗಿ ಮದುವೆಯಾದವರನ್ನು ಇದು ವಿಶೇಷವಾಗಿ ಓಲೈಸುತ್ತಿತ್ತು. ಏನು ಗೌಡ್ರರೆ, ಏನ್ ಕೊರಗರೆ, ಕಾಂಚಾಣಿ ಕೊಡಬೇಕಲ್ಲೊ, ಕಿಗ್ಗಟ್ಟ್ ನಾಡಿಂದ ಬಂದಿಹೆ ಜೋಗಿ ತಾಲಿತಾಲಿಲೆಲ್ಲೆಲ್ಲಾ ಇತ್ಯಾದಿ ಹಾಡುಗಳನ್ನು ಕೇಳುವುದು ಬರಿ ಬರವಣಿಗೆಯಲ್ಲಿ ಮಾತ್ರವಾಗಿದೆ ಇಂದು. ಕಾರಣ ಈ ತೆರನಾದ ಉತ್ಸಹವೂ 1962ರಿಂದ ಈಚೆಗೆ ನಿಂತು ಹೋಗಿರುವುದು ಊರಿನವರ ಪಾಲಿಗೆ ಮತ್ತು ನೆಂಟರಿಸ್ಟರ ಪಾಲಿಗೆ ದುರದೃಷ್ಟಕರವೆನ್ನುವುದು ಊರಿನವರ ಕೊರಗು. ಹೆಣ್ಣು ನೋಡಲು ಈ ಊರಿಗೆ ಹಬ್ಬದ ದಿವಸಗಳಂದು ವಧು/ವರಗಳಾಗುವವರು ಬಂದರೆ ಸಾಕು ಸಂಬಂಧ ಕುದುರುತ್ತಿತ್ತು. ಅಂತಹ ಕಾಲವೊಂದಿತ್ತು. ಈಗೆಲ್ಲಾ ಗತಕಾಲದ ವೈಭವವಷ್ಟೆ. ನಾಡ ಜಾನಪದ ಜ್ಯೋತಿಯೊಂದು ಹೀಗೆ ನಂದಿ ಹೋಗಿರುವುದು "ಒಲುಮೆ" ಬರುವವರಿಗೆ ಸರಿ ಕಾಣದುದೆಂಬ ಅಭಿಪ್ರಾಯವಿದೆ.

ಬಹಳ ಪಂಡ್ ಈ ಊರು ಬರಗಾಲದಿಂದ ತತ್ತರಿಸುತ್ತಿತ್ತು. ಕಾರಣವೇನೆಂದು ತಂತ್ರಿಗಳಿಂದ ವಿಚಾರಿಸಲಾಗಿ ದೈವಗಳಾದ, ಜೋಗಿ ಅಯ್ಯಪ್ಪ ಮತ್ತು ಕೇರಿ ಅಯ್ಯಪ್ಪನವರ ನೆನೆದು ಕೋಲ ಕಟ್ಟಿ ಹಬ್ಬ ಆಚರಿಸಿದರೆ ಸಕಲೈಶ್ವರ್ಯ ಸೌಭಾಗ್ಯ ಸಿಗುವುದೆಂದು ತಿಳಿಸಿದ ಪ್ರಕಾರದಲ್ಲಿ ಹಬ್ಬಕ್ಕೆ ಅಣಿಯಾದ ಊರಿನವರಿಗೆ ಅಚ್ಚರಿಯೊಂದು ಕಾದಿತ್ತು. ಅಂದಿನಿಂದಲೂ ಇಂದಿನ ತನಕ ಯಾವುದೆ ಬರಗಾಲವನ್ನು ಎದುರಿಸದೆ ಸಂತೃಪ್ತಿ ಜೀವನ ಸಾಗಿಸುತ್ತಿರುವ ಈ ಊರ ಜನರು ಕೇಡು, ಮತ್ಸರ, ದ್ವೇಷ, ಹೊಟ್ಟೆ ಕಿಚ್ಚು ಬಿಟ್ಟು ವಿದ್ಯೆ, ವಿಶಾಲ ಮನೋಭಾವನೆ ರೂಢಿಸಿಕೊಂಡಾಗ ಮಾತ್ರ ಇನ್ನೂ ಹೆಚ್ಚಿನ ಪ್ರಗತಿ ಸಿಗುವುದೆಂದು ಲೇಖಕನ ಅಭಿಪ್ರಾಯವಾಗಿದೆ.

ಅಂಜಧಾರೆ ಬೇಟೆ ಕಾಡಿನಲ್ಲಿ ಹುಟ್ಟಿ ಹರಿದು ಬರುವ ಝರಿ ಚಾಮುಂಡಿಬನದ ಪಕ್ಕ ಜಲಪಾತವಾಗಿ ಮಾರ್ಪಡುತ್ತದೆ. ಮಳೆಗಾಲದಲ್ಲಿ ಈ ಜಲಪಾತದ ರುದ್ರರಮಣೀಯ ನೋಟ ಆಹ್ಲಾದಕರವಾಗಿರುತ್ತದೆ. ಇದರ ಭೋರ್ಗರೆತ ಬಹುದೂರ ದವರೆಗೂ ಕೇಳಿಸುತ್ತದೆ.

ಹಿಂದೊಮ್ಮೆ ಅವಂದೂರು ಜೇನು ಕೃಷಿಗೆ ಹೆಸರುವಾಸಿಯಾಗಿದ್ದು ಕೊಡಗಿನ ಜೇನುಗೂಡು ಎಂದೇ ಪ್ರಖ್ಯಾತವಾಗಿತ್ತು. ಭಾಗಮಂಡಲ ಜೇನು ಕೃಷಿಕರ ಸಹಕಾರ ಸಂಘದಿಂದ ಈ ಊರಿನ ಅನೇಕ ಮಂದಿಗೆ ಉತ್ತಮ ಜೇನು ಕೃಷಿಕರೆಂಬ ಪ್ರಶಸ್ತಿ ದೊರೆತಿದೆ. ಕಳೆದ ಒಂದು ದಶಕದಿಂದೀಚೆಗೆ ವೈರೆಸ್ ಹಾವಳಿಯಿಂದ ಜೇನುಕೃಷಿ ಕ್ಷೀಣಿಸಿದೆ.ಅವಂದೂರಿನಲ್ಲಿ ಭತ್ತ, ಕಾಫಿ, ಏಲಕ್ಕಿ, ಅಡಿಕೆ, ಬಾಳೆ, ಕಿತ್ತಳೆ, ಅನಾನಸ್ ಅನ್ನು ಯಥೇಚ್ಛವಾಗಿ ಬೆಳೆಯಲಾಗುತ್ತಿದೆ. ಇತ್ತೀಚೆಗೆ ಏಲಕ್ಕಿ ಗಿಡಕ್ಕೆ ಕಟ್ಟೆರೋಗ ತಗುಲಿ ಆ ಬೆಳೆಗಾರರು ತತ್ತರಿಸಿ ಹೋಗಿದ್ದಾರೆ.

ನಾಮಧಾರಿ ಒಕ್ಕಲಿಗರು

ನಾಮಧಾರಿ ಒಕ್ಕಲಿಗರು ಕರ್ನಾಟಕ ಒಕ್ಕಲಿಗ ಸಮಾಜದ ಒಂದು ಒಳ ಪಂಗಡ. ಇವರು ಮುಖ್ಯವಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಶೃಂಗೇರಿ, ಹೊಸನಗರ, ಮೂಡಿಗೆರೆ ತಾಲ್ಲೂಕುಗಳಲ್ಲೂ, ದ. ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಬೆಳ್ತಂಗಡಿ ತಾಲ್ಲೂಕು ಗಳಲ್ಲೂ ವ್ಯಾಪಕವಾಗಿ ಬಯಲು ಸೀಮೆಯ ಕಡೂರು, ಬೇಲೂರು, ನಾಗಮಂಗಲ ಕುಣಿಗಲ್, ಪಿರಿಯಾಪಟ್ಟಣ, ಹುಣಸೂರು, ಕೆ. ಆರ್. ನಗರ, ಹೆಗ್ಗಡದೇವನಕೋಟೆ, ಹಾಸನ, ಕೊಡಗು ಜಿಲ್ಲೆಯ ಕೆಲವೆಡೆ ಮತ್ತು ಕೇರಳ ಜಿಲ್ಲೆಯ ವೈನಾಡಿನಲ್ಲಿ ಅಲ್ಲಲ್ಲಿ ಕಂಡುಬರುತ್ತಾರೆ. ಮೂಲ ಪುರುಷ ಆದಿಗೌಡನೆಂದು ಹೇಳಿ ಕೊಳ್ಳುವ ನಾಮಧಾರಿ ಒಕ್ಕಲಿಗರು ತಮ್ಮ ಒಕ್ಕಲುತನದಿಂದ ಒಕ್ಕಲಿಗರಾಗಿ ಬೆಳೆದರೆಂದು ಹೇಳಿಕೊಳ್ಳುತ್ತಾರೆ. ನೇಗಿಲಿನಿಂದ ಉಳುವೆ ಮಾಡಿ ಜೀವಿಸಲು ಕಲಿತು ವ್ಯವಸಾಯಗಾರರಾದರು. ಆದರೆ ವ್ಯವಸಾಯ ವೃತ್ತಿಯನ್ನು ಒಕ್ಕಲಿಗರ ಕುರಿತ್ತಲ್ಲದೆ ನಾಮಧಾರಿ ಒಕ್ಕಲಿಗರ ಮೂಲದ ಬಗ್ಗೆ ಹೇಳುವುದಿಲ್ಲ.

ಈ ಒಕ್ಕಲಿಗರ ಪ್ರಾಚೀನತೆಯೆನ್ನು ಸ್ಥಾಪಿಸಲು ಖಚಿತ ಆಧಾರಗಳು ಹೆಚ್ಚಿಗೆ ಲಭ್ಯವಿಲ್ಲವೆಂದು ಅಧ್ಯಯನಕಾರರು ಹೇಳುತ್ತಾರೆ. ಹನ್ನೆರಡನೆ ಶತಮಾನದವರೆಗೆ ಜೈನಧರ್ಮಕ್ಕೆ ಪ್ರಾಬಲ್ಯತೆ ಇದ್ದು, ಮುಂದೆ ಧಾರ್ಮಿಕ ಕ್ರಾಂತಿಯಿಂದಾಗಿ ಹುಟ್ಟಿಕೊಂಡ ಪಂಗಡ ಇದಾಗಿರಬಹುದೆಂದು ಸಂಶೋಧಕರ ಭಾವನೆ. ರಾಮಾನುಜಚಾರ್ಯರ ಉಪದೇಶದಿಂದ ಹೊಯ್ಸಳ ಚಕ್ರವರ್ತಿ "ಬಿಟ್ಟಿದೇವ ವಿಷ್ಣುವರ್ಧನ" ಎಂಬ ಹೆಸರಿನಲ್ಲಿ ವೈಷ್ಣವನಾಗಿ (ಪರಿವರ್ತನೆ) ಹೊಂದಿದ ಮೇಲೆ ಮೇಲುಕೋಟೆ ಮತ್ತು ಬೇಲೂರುಗಳು ಶ್ರೀ ವೈಷ್ಣವ ತತ್ವದ ಮುಖ್ಯ ಪ್ರಚಾರ ಕೇಂದ್ರಗಳಾದ ಮೇಲೆ ಸುತ್ತಮುತ್ತಲ ಒಕ್ಕಲಿಗ ಕುಟುಂಬಗಳು ಜೈನ ಮತದಿಂದ ವೈಷ್ಣವ ತತ್ವಕ್ಕೆ ತಮ್ಮ ನಿಷ್ಠೆಯನ್ನು ಬದಲಾಯಿಸಿ ನಾಮಧಾರಿಗಳಾಗಿರಬೇಕು ಎಂದು ಕೃಷ್ಣ ಅಯ್ಯರ್ ಅವರ ಅಧ್ಯಯನ (1930) ದಿಂದ ಊಹಿಸಲಾಗಿದೆ.

ಮಲೆನಾಡ ಭಾಗಗಳಲ್ಲಿ ನೆಲೆಸಿರುವವರೆಲ್ಲ ಪ್ರಧಾನವಾಗಿ ವೈಷ್ಣವ ಸಂಪ್ರದಾಯಸ್ತರೆನಿಸಿದರೆ ಬಯಲು ಸೀಮೆಯವರು ಶೈವ ಮೂಲಸ್ತರು ಎಂದು ಗುರುತಿಸಲ್ಪಟ್ಟಿದ್ದಾರೆ. ಅಂದರೆ ನಾಮಧಾರಿಗಳಲ್ಲಿ ವೈಷ್ಣವ ಮತ್ತು ಶೈವ ಸಂಪ್ರದಾಯಸ್ತರೆಂಬ ಈ ಎರಡೂ ಗುಂಪಿನವರು ಒಂದೇ ಪ್ರದೇಶದಲ್ಲಿ ನೆಲೆಸಿರುವ ನಿದರ್ಶನಗಳಿವೆ ಎಂದು ತಿಳಿಯುತ್ತದೆ. ಇವರುಗಳಲ್ಲೆ ಶೈವ-ವೈಷ್ಣವ ಎಂಬ ಭೇದವಿದ್ದರೂ ಈ ಪಂಗಡಗಳ ನಡುವೆ ಬಹಳ ಹಿಂದಿನಿಂದಲೂ ಮಧುರ ಬಾಂಧವ್ಯವಿದ್ದು ರಕ್ತಸಂಬಂಧಗಳು ನಡೆದಿವೆ. ವೈಷ್ಣವ ಮೂಲದವರು ತಿರುಪತಿ ತಿಮ್ಮಪ್ಪ, ಮೇಲು ಕೋಟೆ ಚೆಲವರಾಯಸ್ವಾಮಿ ಮುಂತಾದ ದೇವರುಗಳನ್ನು ತಮ್ಮ ಕುಲದೇವರಾಗಿ ಪೂಜಿಸುತ್ತಾ ಬಂದಿದ್ದಾರೆ. ಶೈವ ಸಂಪ್ರ ದಾಯದವರು ಕಾಲಭೈರವನನ್ನು ತಮ್ಮ ಮನೆದೇವರಾಗಿ ಆರಾಧಿಸುತ್ತಾರೆ. ನಾಮಧಾರಿ ಒಕ್ಕಲಿಗರು ವಿಜಯನಗರ ಪತನದ ನಂತರ ಮಹಮ್ಮದ್ದೀರ ಧಾಳಿಯ ಭಯದಿಂದ ಕರ್ನಾಟಕದ ಉದ್ದಗಲಕ್ಕೂ ಹೋಗಿರಬಹುದಾದ ಸಾಧ್ಯತೆಯಿದೆ. ಇವರ ಪೈಕಿ ಅಪ್ಪಟ ಸಸ್ಯಾಹಾರಿಗಳು ಮಲೆನಾಡಿನಿಂದ ಬಯಲು ಸೀಮೆಗೆ ಹೆಚ್ಚು ಹೆಚ್ಚಿಗೆ ವಲಸೆ ಹೋದರು. ಇಕ್ಕೇರಿ ರಾಜರ ಆಳ್ವಿಕೆಯ ಕಾಲದಲ್ಲಿ ಹಾಸನ ಜಿಲ್ಲೆಯ ಐಗೂರು ಸೀಮೆಗೆ ಹೆಚ್ಚು ಹೆಚ್ಚಾಗಿ ಬೇರೆ ಕಡೆಯಿಂದ ಬಂದು ನೆಲೆಸಿದಂತೆ ಅದೇ ಸಮಯದಲ್ಲಿ (ಆಗಿನ ಕೊಡಗು ದೇಶದ ಲಿಂಗಾಯಿತ ರಾಜರುಗಳ ಕಾಲ) ಇಕ್ಕೇರಿ ಸಂಸ್ಥಾನದ ಐಗೂರು ಅಮರ ಸುಳ್ಯ ಸೀಮೆಗಳಲ್ಲಿ ಲಿಂಗಾಯಿತ ಪಾಳೆಯಗಾರರಿದ್ದರು. ಕೊಡಗಿನ ಲಿಂಗರಾಜನಿಗೂ ಬಾಂಧವ್ಯವಿತ್ತು. ಅಮರ ಸುಳ್ಯ ಸೀಮೆಗಳು ಕೊಡಗಿಗೆ ಸೇರಿದ್ದವಾಗಿದ್ದರೂ ಅವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಬಿಟ್ಟುಕೊಟ್ಟು ಸಂಪಾಜೆ ಮತ್ತು ಪೆರಾಜೆ ಊರುಗಳನ್ನು ಕೊಡಗಿಗೆ ಸೇರಿಸಿಕೊಂಡ ಆ ಸಂದರ್ಭದಲ್ಲಿ ಪ್ರಾಮಾಣಿಕತೆಗೆ ಪಾತ್ರರಾಗಿದ್ದ ನಾಮಧಾರಿ ಒಕ್ಕಲಿಗ ಗೌಡರನ್ನು ಬಳಸಿಕೊಂಡ ಇವರ ಪ್ರಾಮಾಣಿಕ ಸೇವೆ, ಕಾರ್ಯನಿಷ್ಠೆಗಳು ರಾಜನ ಮೆಚ್ಚುಗೆ ಗಳಿಸಿದವು. ಅಮರ ಸುಳ್ಯಗಳಿಂದ ಕೊಡಗಿಗೆ ಬಂದರೆ ಅಂಥವರಿಗೆ ಜಮ್ಮ ಜಹಗೀರುಗಳನ್ನು ಉಂಬಳಿಯಾಗಿ ನೀಡುವುದಾಗಿ ವಾಗ್ದಾನ ನೀಡಿದ. ಅಂತೆಯೇ ಐಗೂರು ಮತ್ತು ಇಕ್ಕೇರಿ ಸಂಸ್ಥಾನಗಳಿಂದ ಕನ್ನಡ ಮಾತನಾಡುವ ನಾಮಧಾರಿ ಒಕ್ಕಲಿಗಗೌಡರು, ಲಿಂಗಾಯಿತರು ಹಾಗೂ ಅಮರ ಸುಳ್ಯಗಳಿಂದ ಅರೆಗನ್ನಡ ಮಾತನಾಡುವ ಗೌಡ ಜನಾಂಗದವರು ಬಂದು ನೆಲೆಸಿದರು. ವೀರರಾಜೇಂದ್ರ ರಾಜನು ಪಿರಿಯಾಪಟ್ಟಣ ಜೈಲಿನಿಂದ ತಪ್ಪಿಸಿ ಬಂದ ನಂತರ ದಿಕ್ಕು ದೆಸೆಯಿಲ್ಲದೆ ಇದ್ದ ಪ್ರಜೆಗಳ ಪ್ರೀತಿ ಸಂಪಾದಿಸಿ ಕಂಪೆನಿ ಸರಕಾರದ ಸಹಾಯದಿಂದ ತನ್ನ ರಾಜ್ಯದ ಆಯಕಟ್ಟಿನ ಭಾಗಗಳನ್ನು ಬಂದದ್ದಾಗಿ ಭದ್ರಪಡಿಸಿಕೊಳ್ಳುತ್ತಿದ್ದ ಆ ಸಮಯದಲ್ಲಿ (1798-99) ವೀರರಾಜೇಂದ್ರನ ಅಪ್ಪಣೆ ಮೇರೆ ಅವನ ಅಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಲ್ತಾನನ ಅಧಿಕಾರಿಗಳನ್ನು ಸೋಲಿಸಿ ಊರುಗಳನ್ನು ಹಿಡಿಯುತ್ತಿದ್ದಾಗ ಪ್ರತಿ ಊರಿನಿಂದಲೂ ಹದಿನೈದು ಜನರನ್ನು.(ಗಂಡು ಹೆಣ್ಣು ಸೇರಿ) ಕೊಡಗಿನಲ್ಲಿ ಬಂದು ನೆಲೆಸುವುದಕ್ಕೆ ರಾಜ್ಯ ವಿನಂತಿಸಿದಕೆ, ಬಂದವರಲ್ಲಿ ಅರೆಗನ್ನಡ ಮಾತನಾಡುವ ಗೌಡರುಗಳೇ ಇದ್ದರು. ಈ ರೀತಿಯಲ್ಲಿ ಕುಂಬಳೆ ಬಂಟವಾಳ, ಕಾವಿಲಕಟ್ಟೆ, ಜಮಾಲಾಬಾದು ಮತ್ತು ಅವುಗಳ ಅಕ್ಕಪಕ್ಕ ಊರುಗಳಿಂದ ನೂರಾರು ಜನರು ಕೊಡಗಿನಲ್ಲಿ ರಾಜನಿಂದ ನಿಲ್ಲಿಸಲ್ಪಟ್ಟರು. 1801ರೊಳಗಾಗಿ ಗೌಡರು ಬ್ರಾಹ್ಮಣ, ಒಕ್ಕಲಿಗ, ಲಿಂಗಾಯಿತ ಜನಾಂಗಗಳನ್ನೊಳಗೊಂಡು ಕೈಗೆ ಸಿಕ್ಕಿದ ನೂರುರು ಜನರನು ತಂದು ನಿಲ್ಲಿಸಿದನು. ಆ ಸಮಯದಲ್ಲಿ ನಾಮಧಾರಿ ಒಕ್ಕಲಿಗರೂ ಕೊಡಗಿಗೆ ಬಂದು ನೆಲೆಸಿದ್ದಾರೆ.

ನಾಮಧಾರಿ ಒಕ್ಕಲಿಗರಲ್ಲಿ 18 ಬಳಿಗಳಿವೆ. ಒಂದೇ ಬಳಿ ಅಥವಾ ಕುಲಕ್ಕೆ ಸೇರಿದ ಜನರ ನಡುವೆ ವಿವಾಹ ನಿಷೇಧ. ನಾಮಧಾರಿಗಳನ್ನು ಮೊದಲಿಗೆ 'ನಾಡವರು', ಎಂದು ಕರೆಯುವ ವಾಡಿಕೆಯಿತ್ತು. ನಾಡವರು ಅಂದರೆ ನಾಡಿನ ಜನರು ಎಂದು

ಅರ್ಥ. ಶಿವಮೊಗ್ಗ ಜಿಲ್ಲೆಯಲ್ಲಿರುವ ನಾಡುಗೌಡ ಎಂಬ ಜಾತಿಯವರನ್ನೂ ನಾಡವರು ಎಂದು ಕರೆಯಲಾಗುತ್ತದೆ.

ನಾಮಧಾರಿ ಒಕ್ಕಲಿಗರು ತಮ್ಮ ಹೆಸರುಗಳ ಮುಂದೆ ಮನೆತನ ಸೂಚಕವಾಗಿ 'ಗೌಡ', ನಾಯಕ, ಹೆಗ್ಗಡೆ ಎಂಬ ಅಂಕಿತಗಳನ್ನು ಹೊಂದಿರುತ್ತಾರೆ. ಇವು ಒಂದು ರೀತಿಯಲ್ಲಿ ಅಡ್ಡ ಹೆಸರುಗಳೇ ಆಗಿವೆ. ಈ ಅಡ್ಡ ಹೆಸರುಗಳು ಪುರಾತನ ಕಾಲದಿಂದ ಅವರ ಪೂರ್ವಿಕರು ನಿರ್ವಹಿಸುತ್ತಿದ್ದ ಕಸಬುಗಳಿಂದಲೇ ಬಂದವುವಾಗಿವೆ. ಗ್ರಾಮದ ಮುಖಂಡರಾಗಿದ್ದುದರಿಂದ ಗೌಡ ಎಂಬ ಹೆಸರು ಉಳಿದು ಬಂದಿದೆ. ನಾಯಕ ಎಂಬುದು ಪರಾಕ್ರಮದ ಬಿರುದು. ಕಳ್ಳಕಾಕರನ್ನು ಹಿಡಿದುಕೊಡು ತ್ತಿದ್ದುದರಿಂದ ಹಳೆಯ ಕಾಲದ ರಾಜರ ಕಾಲದಿಂದ ಬಂದಿದೆ. ಹಾಗೆನೇ ದೊಡ್ಡ ದೇವಾಲಯಗಳ ವಹಿವಾಟು ನಡೆಸಿ ಜನರಿಗೆ ನ್ಯಾಯ ನೀತಿ ಒದಗಿಸಿ ಕೆಲಸ ಕಾರ್ಯಗಳನ್ನು ನಿರ್ವಹಿಸು ತ್ತಿದ್ದುದರಿಂದ ಇವರಿಗೆ ಹೆಗ್ಗಡೆ ಎಂಬ ಅಡ್ಡ ಹೆಸರು ಗೌರವದ ಬಿರುದು ಆಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲ್ಲೂಕುಗಳಲ್ಲಿ ನೆಲೆಸಿರುವ ನಾಮಧಾರಿಗಳು ಮೊದಲಿಗೆ ಮಲೆನಾಡು ಪ್ರಾಂತ್ಯಗಳಲ್ಲಿ ನೆಲೆಸಿದ್ದು ಕ್ರಮೇಣ ಬೇರೆ ಬೇರೆ ಕಾರಣಗಳಿಂದ ವಲಸೆ ಹೋಗಿ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ನೆಲೆಸಿರಬೇಕು. ಏಕೆಂದರೆ ಈ ಭೂಪ್ರದೇಶದಲ್ಲಿ ನೆಲೆಸಿರುವ ನಾಮಧಾರಿಗಳ ಮನೆ ಮಾತು ಕನ್ನಡ ತುಳುವಲ್ಲ. ಮಲೆನಾಡ ಪ್ರದೇಶದ ನಾಮಧಾರಿ ಗೌಡ್ತಿಗಳು ಗೊಬ್ಬೆ ಸೀರೆ (ಗೇಂಟಿಗೆ ಸೀರೆ) ಉಡುವುದು ಮತ್ತು ಮದುವೆಯಲ್ಲಿ ಮಧುವಿಗೆ ಬಂಗಾರದ ಹಣ (ಬಣ್ಣ ಬಂಗಾರ) ನೀಡುವ ಪದ್ಧತಿ ನಮ್ಮ ಅರೆಗನ್ನಡ ಗೌಡರ ಪದ್ಧತಿಗಳಿಗೆ ಹತ್ತಿರದವಾಗಿವೆ. ಈ ರೀತಿ ಕೆಲವೊಂದು ವ್ಯಾಪಕವಾಗಿ ಪ್ರಚಲಿತವಿರುವ ಭಾವನೆಗಳಿಗೆ ಪುಷ್ಟಿಯನ್ನೀಡುವ ಆಧಾರಗಳ ಸಂಶೋಧನೆ ನಡೆಯಬೇಕಾಗಿದೆ.

ನಾಮಧಾರಿ ಒಕ್ಕಲಿಗರಲ್ಲಿ 'ಕೊಟ್ಟೆ' ಒಕ್ಕಲಿಗರು ಮತ್ತು 'ಕರೆ' ಒಕ್ಕಲಿಗರು ಎಂಬ ಗುಂಪುಗಳಿವೆ. ಮಳೆಗಾಲದಲ್ಲಿ ಅಡಕೆ ಗೊನೆಗಳಿಗೆ ಕೊಳೆರೋಗ ಬಾರದಂತೆ ಮಾಡಲು ಅಡಕೆ ಮರದ ಹಾಳೆ ಕೊಟ್ಟೆಯನ್ನು ಗೊನೆಗಳಿಗೆ ಕಟ್ಟುವ ಕಸಬು ಮಾಡು ತ್ತಿದ್ದವರೇ ಕೊಟ್ಟೆ ಒಕ್ಕಲಿಗರು ಎಂದು ಹೆಸರು ಪಡೆದರಬೇಕೆಂದು ಅನಂತಕೃಷ್ಣ ಅಯ್ಯರ ಅಭಿಪ್ರಾಯ. ಇವರು ಒಂದು ಕಾಲದಲ್ಲಿ ನಾಮಧಾರಿ ಒಕ್ಕಲಿಗರೇ ಆಗಿದ್ದರಂತೆ. ಶೈವ ಸಂಪ್ರದಾಯದ ನಾಮಧಾರಿಗಳಂತೆ ಇವರಿಗೆ ಮದ್ಯಮಾಂಸಗಳು ವರ್ಜಿತ ವಾಗಿರುವುದು. ಕರೆ ಒಕ್ಕಲಿಗರು ಕೊಟ್ಟೆ ಒಕ್ಕಲಿಗರಂತೆ ವೈಷ್ಣವ ಸಂಪ್ರದಾಯದವರೆ ಆದರು ಇವರು ಮದ್ಯ ಮಾಂಸಹಾರ ಪ್ರಿಯರು. ಇವರು ಇತರ ಒಕ್ಕಲಿಗ ಒಳಪಂಗಡಗಳ ನಡುವೆ ಯಾವುದೇ ಬಗೆಯ ಸಂಬಂಧ ಹೊಂದಿಲ್ಲದಿರುವುದು ಗಮನಾರ್ಹ. ಇವರು ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಉ. ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಚದುರಿದಂತೆ ನೆಲೆಸಿದ್ದಾರೆ.

-ಬೈತಡ್ಕ.ಎ.ಬೆಳ್ಯಪ್ಪ
21-16, ಎಲ್.ಐ.ಸಿ. ಕಛೇರಿ ಬಳಿ
ರೇಸ್‌ಕೋರ್ಸು ರಸ್ತೆ, ಮಡಿಕೇರಿ - 571201

ಹೆಣ್ಣನ್ನು ಭೂಮಿಗೆ, ಪ್ರಕೃತಿಗೆ, ಗಂಗೆಗೆ, ಮಾತೆಗೆ ಅಗ್ನಿ, ದೇವಿ ಹಾಗೂ ತಾಯಿಗೆ ಹೆಸರಾಂತವಾಗಿದೆ

ಭೂಮಿಯನ್ನು ತಾಯಿ ಎನುವೆ
ಪ್ರಕೃತಿಯನ್ನು ಮಾತೆ ಎನುವೆ
ಹೆಣ್ಣು ಹೆತ್ತರೆ ಮೂಗು ಮುರಿಯುವೆಯೋ "ಮನುಜ"
ನಿನ್ನ ಹೆತ್ತ ತಾಯಿ ಹೆಣ್ಣಲ್ಲವೋ ॥ 2 ಸಲ ॥

ಹುಟ್ಟುವಾಗ ತಾಯ ಒಡಲು
ಬೆಳೆಯುವಾಗ ತಾಯ ಮಡಿಲು
ನಿನ್ನ ಮೊದಲ ಮಾತೆ ಅಮ್ಮನಲ್ಲವೋ
ನಿನ್ನ ಮೊದಲ ಗುರುವು ತಾಯಿಯಲ್ಲವೋ ॥2ಸಲ ॥
ನಿನ್ನ ಹೆತ್ತ ತಾಯಿ ಹೆಣ್ಣಲ್ಲವೋ ॥ ಭೂಮಿ ॥

ಬಾಲ್ಯದಲ್ಲಿ ತಂದೆಯ ಬಂಧನ
ಯೌವನದಲ್ಲಿ ಗಂಡನ ಬಂಧನ
ಮುಪ್ಪಿನಲ್ಲಿ ಮಗನ ಬಂಧನ ॥ ನಿನಗೆ ॥
ಸ್ವಾತಂತ್ರ್ಯ ಬೇಡ ಎಂದನೋ ॥ 2 ಸಲ ॥ ॥ ಮನುಜ ॥
ನಿನ್ನ ಸ್ವಾತಂತ್ರ್ಯವ ಕಸಿದುಕೊಂಡನೋ ॥ ಭೂಮಿ ॥

ಮದುವೆ ಎಂಬ ಜಾತ್ರೆಯಲಿ
ವರದಕ್ಷಿಣೆ ಜಾಲದಲ್ಲಿ
ಪಶುವಿನಂತೆ ಮಾರಿಕೊಂಡರೂ
ನಿನ್ನ ಸ್ವಾಭಿಮಾನ ಕಸಿದುಕೊಂಡರೋ ॥ ಭೂಮಿ ॥

ಮನುಜ ನಿನ್ನ ಎದೆಯ ಸೀಳು
ಜೀವ ಗಂಡೋ ಹೆಣ್ಣೋ ಹೇಳು
ಹೆಣ್ಣು ಗಂಡಿನ ಮಿಲನ ಜೀವವೋ
ಆ ಮಿಲನ ಮುರಿಯೇ ಜೀವನಾಶವೋ ॥ 3 ಸಲ ॥

ತಾಯ ನಿನ್ನ ಮೌನ ಮುರಿದು
ಪುರುಷ ಪ್ರದಾನ ಮೌಲ್ಯ ಮುರಿದು
ನಿನ್ನ ಶಕ್ತಿಯನ್ನು ಜನತೆ ಸಾರು "ಬಾ"
ಆ ಶಕ್ತಿಯಲ್ಲಿ ಮುಕ್ತಿ ಕಾಣು ಬಾ ॥ 2 ಸಲ ॥
ನಿನ್ನ ಶಕ್ತಿಯಿಂದ ಜಗವ ಬೆಳಗು ಬಾ ॥ ಭೂಮಿ ॥

-ಕಾಳೆಯಂಡ ಮಜುನ್ (ಮನು) ಬಿಳಿಗೇರಿ

ನಗೆ ಹನಿಗ

ಕನ್ನಡ ಕ್ಲಾಸಲಿ ಗ್ರಾಮರ್ ಕಲ್ಸ್‌ತ್ತಿದ ಮಾಸ್ತರ್ "ಮಕ್ಕಳೇ ನಿಮ್‌ಗೆ ಕ್ರಿಯಾಪದಗಳನ್ನ ಹೇಳ್‌ರೆ, ಅದರ ನಾಮರೂಪನ ಹೇಳಿಕೆ ಆದೆ ಅಲಾ?"

ಮಾಸ್ತರ್ ಹೇಳ್‌ಕನ ಮಕ್ಳೆಲ್ಲ ತಲೆ ಆಡಿಸಿದೊ. "ಹಾಂ. ಜಾಣರ್. ಈಗ ನೀನ್ ಕ್ರಿಯಾಪದಗ ಹೇಳಿಕಂಡ್ ಹೋಕು ಗೊತ್ತಾತ?"

ಯೋಚಿಸಿ ಮೊದಲನೆಯವ ಎದ್ದ್ "ಯೋಚನೆ"ತ್ ಹೇಳ್ತ್.

ಸರಿ ಭಾವಿಸು ನೆಕ್ಸ್ಟ್ ಹೇಳ್ತ್?

ಭಾವನೆ 2ನೆಯವ ಹೇಳ್ತ್. ಸರಿ "ವಾಸಿಸು" ನೆಕ್ಸ್ಟ್ ನವ ಹೇಳ್ತ್. 3ನೆಯಂವ ಎದ್ದ್‌ನಿಂತ್ ಮೊದಲನೆಯವರ್‍ನ ಅನುಸರಿಸಿ ವಾಸನೆ ಸಾರ್‌ತ ಹೇಳ್ತ್.

-ಚೇಯಪನ ಚರಣ್ (ಮಿಥುನ್)

ಮೈಸೂರಿನಲ್ಲಿ ಗೌಡರ ಸಂಸ್ಕೃತಿ ಸಂಪ್ರದಾಯವನ್ನು ಮೆಲುಕು ಹಾಕಿಸಿದ ಮಾಜಿ ಸೈನಿಕರು.

ಯಾವುದೇ ಜನಾಂಗಕ್ಕೆ ಸೇರಿದವರಾಗಲಿ ಇಂದು ಶಾಸ್ತ್ರ ಸಂಪ್ರದಾಯವೆಂದರೆ ಅಸಹ್ಯಪಡುತ್ತಿರುವುದು, ದಿನ ಬೆಳಗಾದರೆ ಒಂದಲ್ಲ ಒಂದು ರೀತಿಯಲ್ಲಿ ಕಾಣುತ್ತಿರುತ್ತೇವೆ. ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಹೇಗೆ ಬೇಕಾದರೂ ಮೈಗೂಡಿಸಿಕೊಂಡು ಸಮಾಜದಲ್ಲಿ ಓಡಾಡುವುದು ಸರ್ವ ಸಾಮಾನ್ಯ ಹಾಗೂ ಅದಕ್ಕೆ ಹೆಚ್ಚಿನ ಆದ್ಯತೆ. ಕಾರಣವಿಷ್ಟೆ. ನಮ್ಮ ಸಂಸ್ಕೃತಿ ಸಂಪ್ರದಾಯ ದಲ್ಲಿ ಅರ್ಥವಿಲ್ಲವೆಂಬ ಭಾವನೆ ಈಗಿನ ಕಾಲದ ಯುವಕ ಯುವತಿಯರಲ್ಲಿ ಬೇರೂರಿದೆ. ಇದಕ್ಕೆ ಅವರ ಪೋಷಕರೂ ಒಂದು ರೀತಿಯಲ್ಲಿ ಕಾರಣರೆಂದರೆ ಖಂಡಿತಾ ತಪ್ಪಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ಕೊಡಗು ಗೌಡ ಮಾಜಿ ಸೈನಿಕರು ತಮ್ಮ ಜನಾಂಗದ ಸಂಸ್ಕೃತಿ, ಸಂಪ್ರದಾಯ, ಆಚಾರ, ವಿಚಾರ ಹಾಗೂ ಭಾಷೆಯ ಬಗ್ಗೆ ಹೆಚ್ಚಿನ ಒಲವು ತೋರಿ, ಜನಾಂಗಕ್ಕೆ ಪುನಃ ಇದರ ಬಗ್ಗೆ ಅರಿವು ಮೂಡಿಸಲು ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರಜಯನವರ ನೇತೃತ್ವದಲ್ಲಿ ಗೌಡ ಸಂಸ್ಕೃತಿ ಪುಸ್ತಕವನ್ನು ಆಳವಾಗಿ ಅಧ್ಯಯನ ಮಾಡಿ, ಅದನ್ನು ರಸಪ್ರಶ್ನೆ ರೂಪದಲ್ಲಿ ಹೊರತಂದು ಜನಾಂಗಕ್ಕೆ ಇದು ಅನುಕೂಲವಾಗಬಹುದೆಂದು ನಂಬಿ, ಡಿಸೆಂಬರ್ 1ರಂದು ಮೈಸೂರಿನಲ್ಲಿ ಜನಾಂಗದ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸೋಬಾನೆ ಹಾಡು, ಹಿರಿಯರಿಗೆ ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮ, ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ, ಅಲ್ಲದೆ ಯುವಕ ಯುವತಿಯರಿಗೆ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಾಡು ಮಾಡಲಾಗಿ ಈ ಪ್ರಯುಕ್ತ ನವೆಂಬರ್ 24ರಂದು ಸ್ಪರ್ಧೆಗಳನ್ನು ಆಹ್ವಾನಿಸಿ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಮಡಿಕೇರಿಯಿಂದ ತೀರ್ಪುಗಾರರಾಗಿ ಬೈತಡ್ಕ ಬೆಳ್ಯಪ್ಪ ಮತ್ತು ಜಾನಕಿ ದಂಪತಿಗಳು ಹಾಗೂ ಮೈಸೂರಿನಿಂದ ಕೂಡಕಂಡಿ ಗೋಪಾಲನವರು ಹಾಜರಿದ್ದು ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ನವೆಂಬರ್ 24ರ ದಿನ ನಡೆದ ಮಕ್ಕಳ ಚಿತ್ರ ಬರೆಯುವ ಸ್ಪರ್ಧೆಯಲ್ಲಿ 36 ಮಕ್ಕಳು, ಯುವಕ ಯುವತಿಯರ ಸಾಮಾನ್ಯ ಜ್ಞಾನ ಸ್ಪರ್ಧೆಯಲ್ಲಿ 26 ಜನರಿದ್ದರೆ ಸೋಬಾನೆ ಹೇಳಲು ಮಹಿಳೆಯರು 18 ಜನರಿದ್ದರಲ್ಲದೆ ಮಹನೀಯರ ಸ್ಪರ್ಧೆಯಲ್ಲಿ ಕೊಡಗು ಗೌಡ ಸಂಘದ ಮೈಸೂರಿನ ಅಧ್ಯಕ್ಷರಾದ ಅಮೆ ಶಿವರಾಯ್ ಹಾಗೂ ಕೊಡಗು ಸಂಗಾತಿ ಪತ್ರಿಕೆಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರರವರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಈ ಕಾರ್ಯಕ್ರಮಕ್ಕೆ ನಿಜವಾಗಲೂ ಕಳೆ ತುಂಬಿದವರೆಂದರೆ ತಡಿಯಪ್ಪನ ಕುಮಾರಜಯನವರ ಪ್ರಯತ್ನ. ಯಾರೂ ನಿರೀಕ್ಷಿಸದ ರೀತಿಯಲ್ಲಿ ಪ್ರಶ್ನೆಗಳನ್ನು ಆರಿಸಿ ಕೇಳಿ ಅಂದು ನೆರೆದಿದ್ದ ವೀಕ್ಷಕರಿಗೂ ರಸದೌತಣ ನೀಡಿ ಎಲ್ಲರ ಪ್ರಶಂಸೆಗೆ ಪಾತ್ರರಾದರಲ್ಲದೆ, ಅವರ ಪ್ರಶ್ನೆ ಮಾಲಿಕೆಗೆ ಭಾರೀ ಬೇಡಿಕೆ ಬಂದು ಕೆಲವರು ಪ್ರಶ್ನೆ ಮಾಲಿಕೆಯ ಜೆರಾಕ್ಸ್ ಕಾಪಿ ಕೇಳುತ್ತಿದ್ದುದು ಕಂಡುಬಂದಿತು. ಅಂತೆಯೇ ಪ್ರಶ್ನೆಮಾಲಿಕೆ ಬಗ್ಗೆ ಮಡಿಕೇರಿ ಹಾಗೂ ಬೆಂಗಳೂರಿನಿಂದಲೂ ಸಂಗಾತಿಗೆ ದೂರವಾಣಿ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ, ಪ್ರತಿಗಾಗಿ ಬೇಡಿಕೆ ಸಲ್ಲಿಸಿದ್ದಾರೆ.

ಡಿಸೆಂಬರ್ 1ರ ಭಾನುವಾರದಂದು ರಸಪ್ರಶ್ನೆ ಮತ್ತು ಸೋಬಾನೆ ಕಾರ್ಯಕ್ರಮದ ಅಂತಿಮ ಹಂತವಾಗಿತ್ತಲ್ಲದೆ ಅಂದೇ ನಮ್ಮ ಜನಾಂಗದಲ್ಲಿ ಇರುವ ಕೆಲವು ಕೆ.ಎ.ಎಸ್. ಅಧಿಕಾರಿಗಳನ್ನು ಗುರುತಿಸಿ ಅವರಿಗೆ ಸನ್ಮಾನವನ್ನು ಮಾಡುವ ಕಾರ್ಯಕ್ರಮವಿತ್ತು. ಹಾಗೂ ಅದರಲ್ಲಿ 25 ವರ್ಷದ ಒಳಗಡೆ ಇರುವ ಸಾಮಾನ್ಯ ಜ್ಞಾನ ರಸಪ್ರಶ್ನೆಯಲ್ಲಿ ಮೊದಲನೆ ಬಹುಮಾನವನ್ನು ಕೂಡರಂಡಿ ಬಬಿತ ಬಸಪ್ಪನವರು, ಎರಡನೇ ಬಹುಮಾನವನ್ನು ತುಂತಜೆ ಮೋಹನ್‌ಕುಮಾರ್ ಉಲ್ಲಾಸನವರು, ಹಿರಿಯರ ರಸಪ್ರಶ್ನೆ ವಿಭಾಗದಲ್ಲಿ ಮೊದಲನೇ ಬಹುಮಾನವನ್ನು ಪಾಣತ್ತಲೆ ವಸಂತಿ ಪಳಂಗಪ್ಪನವರು, ಎರಡನೇ ಬಹುಮಾನವನ್ನು ಅಮೆ ಶಿವರಾಯ್‌ರವರು ಪಡೆದರು.

ಮಹಿಳೆಯರ ವಿಭಾಗದ ಸೋಬಾನೆಯಲ್ಲಿ ಮೊದಲ ಬಹುಮಾನ ಕಡ್ಯದ ಶ್ಯಾಮಲ ತಾರಣಯ್ಯನವರ ಪಾಲಿಗೆ ಹೋದರೆ ಎರಡನೇ ಬಹುಮಾನವನ್ನು ಪಾಣತ್ತಲೆ ವಸಂತಿ ಪಳಂಗಪ್ಪನವರು ಪಡೆದುಕೊಂಡರು. ಮಕ್ಕಳ ಚಿತ್ರ ಬರೆಯುವ ಸ್ಪರ್ಧೆಯಲ್ಲಿ 10 ವರ್ಷದ ಒಳಗಿರುವ ಮಕ್ಕಳ ವಿಭಾಗದಲ್ಲಿ ದಂಬೆಕೋಡಿ ಮೌಲ್ಯ ಪೂರ್ಣಚಂದ್ರಳು ಮೊದಲನೇ ಬಹುಮಾನ ಪಡೆದರೆ, ಎರಡನೇ ಬಹುಮಾನವನ್ನು ಕೆರೆಮನೆ ಅನುಶ ಜಯಕುಮಾರ್ ಪಡೆದುಕೊಂಡಳು. 11 ವರ್ಷ ಮೇಲ್ಪಟ್ಟ ಚಿತ್ರ ಬರೆಯುವ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನ ಸೂದನ ಧನ್ಯ ಮೋಹನ್ ಪಡೆದುಕೊಂಡರೆ, ದಂಬೆಕೋಡಿ ನವೀನ್ ಬಾಲಕೃಷ್ಣ ಎರಡನೇ ಸ್ಥಾನವನ್ನು ಪಡೆದುಕೊಂಡನು.

ಪುರುಷರ ಸೋಬಾನೆ ವಿಭಾಗದಲ್ಲಿ ಮೊದಲನೇ ಬಹುಮಾನವು ಅಮೆ ಶಿವರಾಯ್‌ರವರ ಪಾಲಾದರೆ, ಎರಡನೇ ಬಹುಮಾನವನ್ನು ಪಟ್ಟಡ ಪ್ರಭಾಕರ್‌ರವರು ಪಡೆದುಕೊಂಡರು.

ಮೊದಲಿಗೆ ಮುಖ್ಯ ಅಥಿತಿಗಳಿಂದ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ನಂತರ ಕಡ್ಯದ ಶ್ಯಾಮಲ ಮತ್ತು ಜ್ಯೋತಿಯವರಿಂದ ಪ್ರಾರ್ಥನೆ ನೆರವೇರಿತು. ನೆರೆದ ಸರ್ವರನ್ನು ಸಂಘದ ಉಪಾಧ್ಯಕ್ಷರಾದ ಕುಯ್ಯಮುಡಿ ರಾಮಪ್ಪನವರು ಸ್ವಾಗತ ಬಯಸಿದರು. ಅಥಿತಿಗಳಿಗೆ ಸನ್ಮಾನವನ್ನು ಕುಯ್ಯಮುಡಿ ರಾಮಪ್ಪನವರು ಹಾಗೂ ಪಟ್ಟಡ ಪ್ರಭಾಕರ್‌ರವರು ಶಾಲು

ಹೊದಿಸಿ ಸನ್ಮಾನಿಸಿದರು. ಅಥಿತಿಗಳನ್ನು ಕರ್ಣಯ್ಯನ ಲಕ್ಷ್ಮಣನವರು ಸಭೆಗೆ ಪರಿಚಯಿ ಸಿದರು. ವೇದಿಕೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ರಾದ ತಡಿಯಪ್ಪನ ಕುಮಾರ ಜಯನವರು ವಹಿಸಿದ್ದರು.

ಮೊದಲಿಗೆ ನಂಗಾರು ನಾಣಯ್ಯನವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಮಾಜಿ ಸೈನಿಕರು ದೇಶಸೇವೆ ಮಾಡಿ ಅನೇಕ ರಾಜ್ಯದ ಸಂಸ್ಕೃತಿ ಹಾಗೂ ಜನರಲ್ಲಿ ಬೆರೆತು ಕೊನೆಗೆ ನಮ್ಮ ಜನಾಂಗದ ಸಂಸ್ಕೃತಿ ಸಂಪ್ರದಾಯವನ್ನು ಎತ್ತಿ ಹಿಡಿಯಲು ಇಡುತ್ತಿರುವ ಹೆಜ್ಜೆಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾಜಿ ಸೈನಿಕರನ್ನು ವಿಶ್ವಮಾನವರಿಗೆ ಹೋಲಿಸಿ, ಮುಂದೆ ನಿಮ್ಮ ಕಾರ್ಯಕ್ರಮಗಳಿಗೆ ನನ್ನ ಸಹಕಾರವಿದ್ದೇ ಇದೆಯೆಂದು ತಿಳಿಸಿದರು. ಮುಂದುವರಿದು ನಮ್ಮ ಜನಾಂಗದಲ್ಲಿ ಇರುವ ಒಂದೇ ಒಂದು ಪತ್ರಿಕೆ ಕೊಡಗು ಸಂಗಾತಿ. ಈ ಪತ್ರಿಕೆಗೆ ತನು ಮನ ಧನ ಅರ್ಪಿಸಿ ಉಳಿಸಿ ಬೆಳೆಸಬೇಕು. ಪಟ್ಟಡ ಪ್ರಭಾಕರ್‌ರವರು ಮಾಡಿರುವ ಇಂತಹ ಒಳ್ಳೆ ಕೆಲಸವನ್ನು ಜನಾಂಗ ಬಂಧುಗಳು ಪ್ರೋತ್ಸಾಹಿಸಬೇಕಲ್ಲದೆ ಜನಾಂಗದೊಳಗೆ ನಡೆಯುವ ಕಾರ್ಯಚಟುವಟಿಕೆಗಳನ್ನು ಈ ಪುಸ್ತಕದಿಂದ ತಿಳಿಯಬಹುದು. ಆದುದರಿಂದ ಇವರ ಈ ಶ್ರಮಕ್ಕೆ ಜನಾಂಗ ಸ್ಪಂಧಿಸಬೇಕು ಎಂದು ಹೇಳಿ ಪತ್ರಿಕೆ ಬಗ್ಗೆ ಇರುವ ಅಭಿಮಾನವನ್ನು ವ್ಯಕ್ತಪಡಿಸಿದರು.

ಇನ್ನೊಬ್ಬ ಕೇಟೋಳಿ ಯತೀಶ್‌ಕುಮಾರ್‌ನವರು ಮಾತನಾಡಿ ಮಾಜಿ ಸೈನಿಕರ ಕಾರ್ಯಕ್ರಮ ಮೆಚ್ಚುವಂತಹದ್ದು ಬ್ರಿಟಿಷರಿಂದ ಗೌಡ ಜನರಿಗೆ ಆದ ನೋವನ್ನು ಎಳೆ ಎಳೆಯಾಗಿ ತಿಳಿಸಿ ಅಪ್ಪಯ್ಯ ಗೌಡರನ್ನು ನೇಣುಗಂಬಕ್ಕೆ ಏರಿಸಿದ ಬ್ರಿಟಿಷ್ ಕ್ರಮ ಮತ್ತು ಅದರ ಹಿಂದಿನ ಪಿತೂರಿಯನ್ನು ಅಲ್ಲದೆ ಅಪ್ಪಯ್ಯಗೌಡರ ಬಗ್ಗೆಯೂ ಹೆಚ್ಚಿನ ಮಾಹಿತಿ ಬೇಕಾದರೆ ತಮ್ಮನ್ನು ಸಂಪರ್ಕಿಸು ವಂತೆ ಸೂಚಿಸಿದರು.

ಮತ್ತೊಬ್ಬ ಅಥಿತಿ ಚೆರಿಯಮನೆ ಜಯರಾಂರವರು ಸಂಘದ ಕಾರ್ಯಕ್ರಮವನ್ನು ಪ್ರಶಂಸಿಸಿದರು. ಮಗದೊಬ್ಬ ಅತಿಥಿ ಪಾಣತ್ತಲೆ ಪಳಂಗಪ್ಪನವರು ಕೆ.ಎ.ಎಸ್. ಪಡೆಯಲು ಪಟ್ಟಶ್ರಮ ಹಾಗೂ ಆ ಶ್ರಮಕ್ಕೆ ನಂಗಾರು ನಾಣಯ್ಯನವರ ಸಹಕಾರವನ್ನು ವಿವರಿಸಿ, ಈ ಸಂಸ್ಕೃತಿ ಸಂಪ್ರದಾಯಗಳ ರಸಪ್ರಶ್ನೆಯನ್ನು ಖುದ್ದಾಗಿ ಆಲಿಸಿ ಧನ್ಯವಾದವನ್ನು ಅರ್ಪಿಸಿದರು.

ಸಭೆಯಲ್ಲಿ ನಿವೃತ್ತ ಕರ್ನಲ್ ಸಾಹೇಬರಂತೆ ಗೋಚರಿಸು ತ್ತಿದ್ದ ಮೈಸೂರಿನ ಕೊಡಗು ಗೌಡ ಸಂಘದ ಅಧ್ಯಕ್ಷರಾದ ಅಮೆ ಶಿವರಾಯ್‌ರವರು ಮಾತನಾಡಿ ಮಾಜಿ ಸೈನಿಕರ ಕಾರ್ಯಕ್ರಮ ವನ್ನು ಹೊಗಳಿದರಲ್ಲದೆ ಮಾಜಿ ಸೈನಿಕರು ಸೈನ್ಯಕ್ಕೆ ಮಾತ್ರ ಮಾಜಿಗಳು, ನಮಗಲ್ಲವೆಂದು ಹೇಳಿ ಈ ರೀತಿಯ ಕಾರ್ಯಕ್ರಮ ಗಳು ಮುಂದೆಯೂ ನಡೆಯಬೇಕೆಂದು ಸಲಹೆಯಿತ್ತರು. ಜನಾಂಗದಲ್ಲಿ ಕೆಲವರು ಸಂಸ್ಕೃತಿ ಸಂಪ್ರದಾಯಗಳನ್ನು ಹಾಳು ಗೆಡುವುತ್ತಿದ್ದಾರೆ. ಅದನ್ನು ಉಳಿಸಿ ಬೆಳೆಸಬೇಕು, ನಮ್ಮ ನಮ್ಮ ಸಂಪ್ರದಾಯ ಹಾಗೂ ಭಾಷೆಯ ಬಗ್ಗೆ ಅಭಿಮಾನವಿರಬೇಕು. ನಮ್ಮ ಜನ ನಮ್ಮ ಭಾಷೆ ಮಾತನಾಡದೆ ಬೇರೆ ಭಾಷೆ ಮಾತನಾಡುತ್ತಾರೆ, ಇದು ಸಲ್ಲದೆಂದು ಪರೋಕ್ಷವಾಗಿ ಜನಾಂಗವನ್ನು ಎಚ್ಚರಿಸಿ ಕೊಡಗಿನ ಗೌಡರೆಂದು ಸಭೆ ಸಮಾರಂಭಗಳಲ್ಲಿ ಗುರ್ತಿಸಬೇಕಾದರೆ ನಮ್ಮ ಸಾಂಪ್ರ ದಾಯಿಕ ಉಡುಪನ್ನು ಧರಿಸಬೇಕೆಂದು ಹಿತವಚನ ನೀಡಿದರು.

ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರ ಜಯನವರು ಸಂಘವು ಹಮ್ಮಿಕೊಂಡಿರುವ ಕಾರ್ಯಕ್ರಮ ಗಳನ್ನು ವಿವರಿಸಿ ನಮ್ಮ ಜನಾಂಗದಲ್ಲಿ ಇರುವ ಅನಾಥ ಮಕ್ಕಳನ್ನು ಗುರುತಿಸಿ ಅವರಿಗೆ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಲು ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಕಾರ್ಯಕ್ರಮಕ್ಕೆ ಜನಾಂಗ ಸ್ಪಂದಿಸಿದರೆ ನಮ್ಮ ಜನಾಂಗದಲ್ಲಿರುವ ಕಟ್ಟಕಡೆಯ ಪಂಕ್ತಿಯವರೆಗೆ ಸಹಕರಿಸಿದಂತೆ ಆಗುತ್ತದೆಯಲ್ಲದೆ ಮುಂದೆ ನಮ್ಮ ಜನಾಂಗದಲ್ಲಿ ಅನಾಥರಾರೂ ಇರಬಾರದೆಂದು ಇದನ್ನು ಸಮಾಜದ ಎಲ್ಲಾ ಸಂಘ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸ ಬೇಕೆಂದು ಕರೆಯಿತ್ತರು.

ನಂಗಾರು ನಾಣಯ್ಯನವರು ಹಾಗೂ ಕೇಟೋಳಿ ಯತೀಶ್ ಕುಮಾರ್‌ರವರ ಸಲಹೆಗೆ ಸ್ಪಂದಿಸಿದ ಅಧ್ಯಕ್ಷರು ಶಾಲೆ ಹಾಗೂ ಬ್ಯಾಂಕ್ ತೆರೆಯುವ ಬಗ್ಗೆ ಈ ಹಿಂದೆ ಪ್ರಯತ್ನಿಸಿ ಕಾರಣಾಂತರ ದಿಂದ ಕೈಬಿಡಲಾಗಿದೆ ಎಂದರಲ್ಲದೆ ಶಾಲೆಯನ್ನು ತೆರೆಯುವ ಬಗ್ಗೆ ಈಗಲೂ ಚಿಂತನೆ ಇದೆ. ಮುಂದೆ ಸಾಧ್ಯವಾದರೆ ಒಳ್ಳೆಯ ಶಿಸ್ತಿನ ಶಾಲೆಯನ್ನು ತೆರೆಯಲಾಗುವುದು ಎಂದು ತಮ್ಮ ಕನಸನ್ನು ತಿಳಿಸಿದರು. ಮುಂದುವರಿದ ಶ್ರೀಯುತರು ಜನಾಂಗ ಒಂದಲ್ಲ ಒಂದು ರೀತಿಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಬೇಕು. ಈ ನಮ್ಮ ಶರೀರವನ್ನು ಜೋಪಾನವಾಗಿ ಪೋಷಿಸಿ ಕೊನೆಗೆ ಶವವಾಗುವಾಗ ಮಣ್ಣಿಗೋ ಅಥವಾ ಬೂದಿಯಾಗುವುದು ತರವಲ್ಲ, ಬದಲಾಗಿ ನಾವು ಸತ್ತ ಮೇಲೆ ನಮ್ಮ ಕಣ್ಣುಗಳನ್ನು ದಾನ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಶಿವರಾಯ್‌ರವರ ಅಭಿಪ್ರಾಯಕ್ಕೆ ಬೆಂಬಲ ಸೂಚಿಸಿ, ಮುಂದೆ ಇಂತಹ ಒಂದು ಕಾರ್ಯಕ್ರಮ ಅವರಿಂದಲೇ ಪ್ರಾರಂಭ ವಾಗಲಿ, ಅದಕ್ಕೆ ಮಾಜಿ ಸೈನಿಕರ ಸಂಪೂರ್ಣ ಬೆಂಬಲವಿದೆ ಎಂದರಲ್ಲದೆ, ಈ ರೀತಿಯ ಶಿಸ್ತಿನ ಕಟ್ಟುಪಾಡನ್ನು ಪಾಲಿಸಲು ನಮ್ಮ ಸಮಾಜಗಳ ಒಕ್ಕೂಟವನ್ನು ರಚಿಸಿ ಆ ಒಕ್ಕೂಟದಲ್ಲಿ ನಿರ್ಣಯವನ್ನು ಮಂಡಿಸಿ ಅಲ್ಲಿ ಅನುಮೋದನೆಯಾಗಿ, ಅದನ್ನು ಎಲ್ಲಾ ಸಮಾಜಗಳಿಗೆ ರವಾನಿಸಿ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದರು. ಒಂದು ವೇಳೆ ಈ ನಿರ್ಣಯವನ್ನು ವಿರೋಧಿಸು ವವರನ್ನು ಸಮಾಜದೊಳಗೆ ಶಿಕ್ಷೆ ವಿಧಿಸುವಷ್ಟು ಸಮಾಜ ಶಕ್ತವಾಗಿರಬೇಕು. ಹಾಗಿದ್ದಲ್ಲಿ ಮಾತ್ರ ನಮ್ಮ ಸಂಸ್ಕೃತಿ ಸಂಪ್ರದಾಯ ಹಾಗೂ ಭಾಷೆ ಉಳಿಯುತ್ತದೆ. ಇಲ್ಲದಿದ್ದರೆ ಮುಂದೆ ನಶಿಸಿ ಹೋಗುವುದರಲ್ಲಿ ಸಂಶಯವಿಲ್ಲ. ಇಂತಹ ವೇದಿಕೆ ಭಾಷಣ ಮಾಡಲು ಮಾತ್ರ ಚೆನ್ನ, ಕಾರ್ಯಗತಗೊಳಿಸಲು ಸಾಧ್ಯವಿಲ್ಲವೆಂದರು.

ಕೊನೆಯದಾಗಿ ಅಥಿತಿಗಳಿಂದ ಬಹುಮಾನ ವಿತರಿಸಿದರು. ನಿರೂಪಣೆಯನ್ನು ಕೊಂಬಾರನ ಸುಬ್ಬಯ್ಯನವರು ನೀಡಿದರೆ, ಸಂಘದ ಸಲಹೆಗಾರ ಪಟ್ಟಡ ಪ್ರಭಾಕರ್‌ರವರು ವಂದಿಸಿದರು.

- ಸಂಗಾತಿ

ಕೊಡಗು ಕಾಶ್ಮೀರವಾಗುತ್ತಿದೆ !

ಕೊಡಗಿಗೆ ಬರುವ ಯಾವುದೇ ಗಣ್ಯರು, ರಾಜಕಾರಣಿಗಳು, ಅತಿಥಿಗಳು ಕೊಡಗನ್ನು ಕಾಶ್ಮೀರಕ್ಕೆ ಹೋಲಿಸುತ್ತಾರೆ. ಕೊಡಗಿನ ನೈಸರ್ಗಿಕ ಸಿರಿ, ಇಲ್ಲಿನ ವಾತಾವರಣ ಹಾಗೆ ಹೇಳಲು ಅವರನ್ನು ಪ್ರೇರೇಪಿಸಿ ಬಿಡುತ್ತದೆ. ಕೊಡಗಿನ ಜನರೂ ಅಷ್ಟೇ, ಅತಿಥಿ ಸತ್ಕಾರಕ್ಕೆ ಹೆಸರಾದವರು. ಶಿಸ್ತು, ತ್ಯಾಗ, ಧೈರ್ಯ ಛಲಕ್ಕೆ ಹೆಸರಾದವರು ಕೊಡಗಿನವರು. ತಮ್ಮದೇ ಆದ ವಿಶಿಷ್ಠ ಸಂಸ್ಕೃತಿ, ಸಂಪ್ರದಾಯಗಳಿಂದ ವಿಶ್ವದ ಗಮನವನ್ನೇ ಸೆಳೆಯ ಬಲ್ಲಂತ ಹವರು. ಶಾಂತಿ, ಸಹನೆಗಳ ಸಮ್ಮಿಳಿತದ ಬೆಡಗು ಈ ಕೊಡಗು.

ಆದರೆ ಇತ್ತೀಚೆಗೆ ಈ ಕೊಡಗಿಗೆ ಏನಾಗುತ್ತಿದೆ?, ಮನುಷ್ಯ ಇಂದು ಏನೆಲ್ಲಾ ಸಾಧಿಸಿದ್ದಾನೆ. ಆದರೆ ತನ್ನನ್ನು ತಾನು ಅರಿಯಲಾಗದೆ ಕುಬ್ಜನಾಗಿದ್ದಾನೆ. ವೈಜ್ಞಾನಿಕತೆ, ತಂತ್ರಜ್ಞತೆ ಬೆಳೆದಂತೆಲ್ಲಾ ಮಾನವೀಯತೆಯನ್ನೂ ಕಳೆಯುತ್ತಾ ಸಾಗಿದ್ದಾನೆ. ಅಮಾನವೀಯತೆ, ಹಿಂಸೆ ಜಗತ್ತಿಗೆ ಹೊಸದೇನಲ್ಲ. ಆದರೆ ಕೊಡಗಿನ ಮಟ್ಟಿಗೆ ಮಾತ್ರ ಅನಿರೀಕ್ಷಿತ ಬೆಳವಣಿಗೆಯಾಗಿದೆ.

ಕೊಂಗಣಮಾಡದಲ್ಲಿ ವ್ಯಕ್ತಿಯೊಬ್ಬ ತನ್ನ ಸ್ಥಿಮಿತ ಕಳೆದುಕೊಂಡು ತನ್ನ ಹೆಂಡತಿ, ಮಗುವನ್ನೂ ಕೊಂದು ಮತ್ತೊಬ್ಬರ ಮೇಲೆ ದ್ವೇಷ ಸಾಧಿಸಲು ಮುಂದಾಗುತ್ತಾರೆ. ಭಾಗಮಂಡಲದಲ್ಲಿ ಕ್ಷುಲ್ಲಕ ವಿಚಾರಕ್ಕಾಗಿ ಮಹಿಳೆ, ಮಕ್ಕಳೆನ್ನದೆ ಇಡೀ ಕುಟುಂಬದ ಮೇಲೆ ಕತ್ತಿ ಪ್ರಹಾರ ಮಾಡಲಾಗುತ್ತದೆ. ಎಲ್ಲೋ ದೂರದಲ್ಲಿದ್ದ ವರದಕ್ಷಿಣೆಯಂತಹ ಪಿಡುಗು ಇಂದು ಕೊಡಗನ್ನೂ ತಲ್ಲಣಗೊಳಿಸಲಾರಂಭಿಸಿದೆ. ಕ್ಷುಲ್ಲಕ ಕಾರಣಕ್ಕಾಗಿ ಕಾರ್ಮಿಕರಿಂದ ಮಾಲೀಕನ ಕೊಲೆ, ಮಾಲೀಕನಿಂದ ಕಾರ್ಮಿಕನ ಕೊಲೆ, ಆಸ್ತಿಗಾಗಿ ಸೋದರ ಸಂಬಂಧಿಗಳ ಕೊಲೆ ಹೀಗೆ ಪ್ರತಿದಿನ ಕೊಡಗಿನ ಪತ್ರಿಕೆಗಳಲ್ಲಿ ಒಂದಲ್ಲ ಒಂದು ರೋಚಕ ಕೊಲೆಗಳ ಸುದ್ದಿ ಪ್ರಕಟಗೊಳ್ಳುತ್ತಲೇ ಇರುತ್ತದೆ.

ಪ್ರತಿದಿನ ಕೊಡಗಿನಲ್ಲಿ ಹಿಂಸೆ, ಕೊಲೆ, ದೌರ್ಜನ್ಯಗಳನ್ನು ಗಮನಿಸುವಾಗ ಇವೂ ಸಹ 'ಕೊಡಗಿನ ಸಂಸ್ಕೃತಿಗಳೇ?' ಎನ್ನುವ ಪ್ರಶ್ನೆ ಎಂತಹವರ ಮನಸ್ಸಲ್ಲೂ ಮೂಡದಿರದು. ಕೊಡಗಿನವರು ತಿಳುವಳಿಕೆಯುಳ್ಳವರು, ಬಂದೂಕನ್ನು ಯಾವ ಸಂದರ್ಭದಲ್ಲಿ ಬಳಸಬೇಕೆಂಬುದನ್ನು ಬಲ್ಲವರು ಎಂಬ ಕಾರಣದಿಂದ ಕಾನೂನಿನ ಮೂಲಕವೇ ಬಂದೂಕು ಹೊಂದಲು ಕೊಡಗಿನವರಿಗೆ ಅವಕಾಶ ನೀಡಿರುವಾಗ, ಕೊಡಗಿನವರು ಆ ಅವಕಾಶವನ್ನೇ ಇಂದು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ಹೀಗೆಯೇ ಮುಂದುವರಿದರೆ ಮುಂದೆ ಬಂದೂಕು ಹೊಂದುವ ಅವಕಾಶವನ್ನೇ ಕಳೆದುಕೊಳ್ಳುವ ಸ್ಥಿತಿ ಬಂದರೂ ಬರಬಹುದು.

ಕೊಡಗಿನ ಜನತೆಯಲ್ಲಿ ಮಾನವೀಯತೆ ಮಾಯ ವಾಗುತ್ತಿದೆ. ಅಮಾನವೀಯತೆಯ ಕೆಟ್ಟ ಸಂಸ್ಕೃತಿ ತಲೆ ಯೆತ್ತುತ್ತಿದೆ. ಆದರೆ 'ಕೊಡಗಿನ ನೆಲ, ಜಲ, ಸಂಸ್ಕೃತಿಗಳ ರಕ್ಷಕರು ನಾವ್' ಎಂದು ಬಡಾಯಿ ಕೊಚ್ಚಿಕೊಳ್ಳುವ ಜನರು ಕೊಡಗಿನ ಸಮಾಜದಲ್ಲಿ ತಲೆಯೆತ್ತಿರುವ ಈ ಕೆಟ್ಟ ಪರಂಪರೆ ಯನ್ನು ತೊಡೆದು ಹಾಕುವ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲವೇಕೆ? ಕೊಡಗನ್ನು ಪ್ರವೇಶಿಸಿರುವ ಸಮಾಜ ಬಾಹಿರ ದುಷ್ಟ ಚಟುವಟಿಕೆಗಳನ್ನು ತೊಡೆದು ಹಾಕಲು 'ವಿಚಾರ ಸಂಕಿರಣ', ಮಾನವೀಯತೆಯನ್ನು ಮೂಡಿಸುವ ಸತ್ಪ್ರಯತ್ನಗಳನ್ನು ಬಿಟ್ಟು, ಕೊಡಗು ರಾಜ್ಯ ಕೊಡಗು ದೇಶದ ಮಂತ್ರ ಜಪಿಸಿದರೆ ಸಮೃದ್ಧ ಕೊಡಗನ್ನು ಕಟ್ಟಲಾದೀತೆ?

ಕೊಡಗಿನ ಮುಂದೆ ಇಂದು ಹಲವು ಸಮಸ್ಯೆಗಳಿವೆ. ಕೊಡಗಿನ ಯುವಕರು ಬಹುಮಂದಿ ನಿರುದ್ಯೋಗಿಗಳಾಗಿ ಉಳಿದಿದ್ದಾರೆ. ಕೊಡಗಿನ ಸರ್ಕಾರಿ ಇಲಾಖೆಗಳಲ್ಲಿ ಸಮರ್ಪಕ ಕಾರ್ಯಗಳು ನಡೆಯುತ್ತಿಲ್ಲ. ಬಸ್ಸು ಬಾರದ, ವಿದ್ಯುತ್ ಬೆಳಕು ಕಾಣದ, ದೂರವಾಣಿ ಪ್ರವೇಶಿಸದ, ಕುಡಿಯುವ ನೀರು ಸಿಗದ ಹಳ್ಳಿಗಳು ಕೊಡಗಿನಲ್ಲಿ ಬೇಕಾದಷ್ಟಿವೆ. ಕೊಡಗಿಗಾಗಿ ಪ್ರತ್ಯೇಕ ಲೋಕಸಭಾ ಕ್ಷೇತ್ರವೂ ಇಲ್ಲ. ಇರುವ ವಿಧಾನ ಸಭಾ ಕ್ಷೇತ್ರಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ. ಕೊಡಗಿಗೆ ಪ್ರತ್ಯೇಕ ಅಭಿವೃದ್ಧಿ ಮಂಡಳಿಯನ್ನು ರಚಿಸಬೇಕೆಂದು ಸಂವಿಧಾನ ಪರಾಮರ್ಶನಾ ಆಯೋಗ ಶಿಫಾರಸ್ಸು ಮಾಡಿದ್ದರು. ಅದು ಮರೀಚಿಕೆಯಂತೆ ಗೋಚರಿಸುತ್ತಿದೆ. ಇಂತಹ ಹಲವು ಸಮಸ್ಯೆಗಳ ಕವಚವನ್ನು ಸೀಳಿ ಹೊರಬರಬೇಕಾದರೆ ಇಡೀ ಕೊಡಗಿನ ಜನತೆ ತಮ್ಮಲ್ಲಿನ ಭಿನ್ನತೆ, ಪ್ರತಿಷ್ಠೆಗಳನ್ನು ಬದಿಗೆ ಸರಿಸಿ ಸಂಘಟಿತ ಪ್ರಯತ್ನ ನಡೆಸಬೇಕಾಗಿದೆ. ಆದರೆ ಕೊಡಗಿನಲ್ಲಿ ಸಂಘಟನೆ ಗಿಂತಲೂ ವಿಘಟನೆಗೇ ಪ್ರಾಮುಖ್ಯತೆ ಸಿಗುತ್ತಿರುವುದು ಜಿಲ್ಲೆಯ ದುರಂತವೆಂದೇ ಹೇಳಬೇಕು.

ಹಿಂದೆ ಕೊಡಗಿನ ಸೌಂದರ್ಯ ನೋಡಿ 'ಕಾಶ್ಮೀರ' ಎಂದು ಬಣ್ಣಿಸುತ್ತಿದ್ದವರು ಇಂದು ಕೊಡಗಿನ ದುರವಸ್ಥೆ ನೋಡಿ 'ಕಾಶ್ಮೀರ' ಎಂದು ಉದ್ಗರಿಸುವಂತಾಗಿದೆ. ಪಂಜೆ ಮಂಗೇಶ ರಾಯರು ಕೊಡಗು 'ದೇವತೆಗಳ ತಾಣ' ಎಂದು ಬಣ್ಣಿಸಿದ್ದರೆ ಇಂದು ಕೊಡಗು ಅಪರಾಧಿಗಳ ತಾಣವಾಗುವತ್ತ ಹೆಜ್ಜೆ ಹಾಕುತ್ತಿದೆ. ಇದಿನ್ನೂ ಆರಂಭವಷ್ಟೇ. ಆರಂಭದಲ್ಲೇ ಇಂತಹ ಅನೀತಿಯ ಚಟುವಟಿಕೆಗಳನ್ನು ಹತ್ತಿಕ್ಕಲು ಕೊಡಗಿನ ಎಲ್ಲಾ ಜನಾಂಗಗಳ ಹಿರಿಯ ಮುತ್ಸದ್ದಿಗಳು ಚಿಂತನೆ ಮತ್ತು ಪ್ರಯತ್ನ ನಡೆಸುವುದು ಈಗ ಹಿಂದೆಂದಿಗಿಂತಲೂ ಅನಿವಾರ್ಯವೆನಿಸಿದೆ. ಕೊಡಗು ಪ್ರಕ್ಷುಬ್ಧತೆಯ ಕಾಶ್ಮೀರ ವಾಗುವುದು ಬೇಡ. ಹೃದಯವಂತಿಕೆಯ 'ಸುಂದರ ಕೊಡಗು' ನಮ್ಮದಾಗಲಿ. ಹೊಸ ವರ್ಷದ ಉದಯ ನಮ್ಮ ಜನತೆಯ ಹೃದಯದಲ್ಲಿ ಮಾನವೀಯತೆಯ ಶುಭೋದಯಕ್ಕೆ ನಾಂದಿಯಾಗಲಿ.

-ಪಟ್ಟಡ ಶಿವಕುಮಾರ್, ಉಪನ್ಯಾಸಕ.

ತನ್ನ ಲಗ್ನ ಕಾಲದಲ್ಲಿ ಕಟ್ಟಿಡುವ ಹರಕೆ ಹಣವನ್ನು ಒಪ್ಪಿಸಲು ಗೌಡನೆಂದು ಮರೆಯಬಾರದು.

ಕೊಡಗು ಜಿಲ್ಲಾ ಸಾಂಸ್ಕೃತಿಕ ಉತ್ಸವ - ಮೈಸೂರು



ಕಳೆದ ನವೆಂಬರ್ 7 ಮತ್ತು 8ರಂದು ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಬಿ. ವಿ. ಕಾರಂತ ಬಯಲು ರಂಗಮಂದಿರದಲ್ಲಿ ಕರ್ನಾಟಕ ಪುಟ್ಟ ಜಿಲ್ಲೆಯೆಂದು ಪರಿಗಣಿಸಿರುವ ಕೊಡಗು ಜಿಲ್ಲಾ ಸಾಂಸ್ಕೃತಿಕ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಸಮಾರಂಭದ ಉದ್ಘಾಟನೆಯನ್ನು ಕೊಡಗು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಹೆಚ್. ಬಿ. ಜಯಮ್ಮನವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಆರ್. ರಘುರವರು, ಕೊಡಗು ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆ ನೆಲ್ಲಮಕ್ಕಡ ಕಾಮವ್ವನವರು, ಕೊಡಗು ಜಿಲ್ಲಾಧಿಕಾರಿಗಳಾದ ಶ್ರೀ ಬಿ. ಎಸ್. ಪಾಲಾಕ್ಷನವರು, ವಸ್ತುಪ್ರದರ್ಶನ ಪ್ರಾಧಿಕಾರದ ವ್ಯವಸ್ಥಾಪಕರಾದ ಎಸ್.ಎನ್. ಮೂರ್ತಿಯವರು, ಕೊಡಗು ಜಿಲ್ಲಾ ಪಂಚಾಯಿತಿಯ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಇಲಾಖೆಯ ಅಧ್ಯಕ್ಷರಾದ ಸಿ. ಕೆ. ಪೊನ್ನಪ್ಪನವರು ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಸ್. ವಿ. ಪ್ರತಾಪ್‌ನವರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಮೊಯಿದ್ದೀನ್ ಕುಂಞ್ಞಾರವರು ಹಾಗೂ ಮೈಸೂರು ಕೊಡವ ಸಮಾಜದ ಅಧ್ಯಕ್ಷ ಡಾ|| ಕುಟ್ಟಪ್ಪನವರು ದಿನಾಂಕ 7ರಂದು ಹಾಜರಿದ್ದರು.

ದಿನಾಂಕ 8-11-2002ರ ಮುಕ್ತಾಯ ಸಮಾರಂಭದ ಉದ್ಘಾಟನೆಯನ್ನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕರ್ನಾಟಕ ರಾಜ್ಯದ ರಾಜ್ಯ ಅಬಕಾರಿ ಸಚಿವರು ಆದ ಮುಂಡಂಡ ನಾಣಯ್ಯನವರು ನೆರವೇರಿದರು. ಅಧ್ಯಕ್ಷತೆಯನ್ನು ರಾಜ್ಯ ಸಹಕಾರಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಮತ್ರಿಗಳು ಆದ ಎಚ್. ವಿಶ್ವನಾಥ್‌ನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ಮುಜರಾಯಿ ಸಚಿವೆ ಶ್ರೀಮತಿ ಸುಮಾವಸಂತ್‌ರವರು, ರಾಜ್ಯ ವಿಮಾನಯಾನ ಮತ್ತು ಮೂಲಭೂತ ಸೌಲಭ್ಯ ಸಚಿವರಾದ ಟಿ. ಜಾನ್‌ರವರು, ರಾಜ್ಯ ತೋಟಗಾರಿಕಾ ಸಚಿವ ಎಂ. ಶಿವಣ್ಣನವರು, ಕೊಡಗು ಪಂಚಾಯಿತಿ ಜಿಲ್ಲಾಧ್ಯಕ್ಷೆ ಎಚ್. ಬಿ. ಜಯಮ್ಮನವರು, ವಿಧಾನ ಪರಿಷತ್‌ನ ಸದಸ್ಯರಾದ ಎಂ. ಸಿ. ನಾಣಯ್ಯನವರು, ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಅಪ್ಪಚ್ಚುರಂಜನ್, ಪ್ರಾಧಿಕಾರದ ಅಧ್ಯಕ್ಷ ಆರ್. ರಘುನವರು, ಉಪಾಧ್ಯಕ್ಷೆ ನೆಲ್ಲಮುಕ್ಕಡ ಕಾಮವ್ವನವರು ಹಾಗೂ ಕೊಡಗು ಜಿಲ್ಲಾಧಿಕಾರಿ ಬಿ.ಎಸ್. ಪಾಲಕ್ಷನವರು ಉಪಸ್ಥಿತರಿದ್ದರು.

ಎರಡು ದಿನವು ಬಹುಸಾಂಗವಾಗಿ ನಡೆದ ಈ ಉತ್ಸವದಲ್ಲಿ ಕೊಡಗಿನಿಂದ ಹಲವಾರು ತಂಡದವರು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ವಿರಾಜಪೇಟೆಯಿಂದ ಉಮ್ಮತಾಟ್, ಕೋಟೆ ಬೆಟ್ಟ ಈಶ್ವರ ತಂಡದಿಂದ ಬೊಳಕಾಟ್, ಬಾಳುಗೋಡು ಯುವಕರಿಂದ ಪರಿಯಾಟ್, ಭಾಗಮಂಡಲ ಕಾವೇರಿ ಮಹಿಳಾ ತಂಡದಿಂದ ಕೋಲಾಟ ಮತ್ತು ನೃತ್ಯ, ಯರಪಾರೆ ಸ್ಪೂರ್ತಿ ಯುವತಿ ಮಂಡಳಿಯಿಂದ ಜಾನಪದ ನೃತ್ಯ, ಕಾವೇರಿ ಸಾಕ್ಷರ ಕಲಾತಂಡದಿಂದ ನಾಟಕ, ಬಿ. ಎ. ಗಣೇಶ್ ತಂಡದವರಿಂದ ಸುಗಮ ಸಂಗೀತ, ತೂಚಮಕೇರಿ ಯುವಕ ಸಂಘದಿಂದ ಉಮ್ಮತಾಟ್ ಮತ್ತು ಬೊಳಕಾಟ್, ಆದಿಪರಾಶಕ್ತಿ ಯುವಕ ಸಂಘ ಮಡಿಕೇರಿ ಇವರಿಂದ ಜಾನಪದ ನೃತ್ಯ, ಕೊಯಿನಾಡ್ ಜೈಹಿಂದ್ ಯುವತಿ ಮತ್ತು ಯುವಕರ ಸಂಘದಿಂದ ಸುಗ್ಗಿ ನೃತ್ಯ ಮತ್ತು ಕೋಲಾಟ, ಸರಸಯ್ಯ ತಂಡದಿಂದ ವಾದ್ಯವು, ಸಂಪಾಜೆ ರಾಚಪ್ಪ ತಂಡದಿಂದ ಭೂತನೃತ್ಯ, ಎಂ. ವಿ. ಜಯಶ್ರೀ ತಂಡದಿಂದ ಭರತನಾಟ್ಯವು ನಡೆಯಿತು.

ಅಲ್ಲದೆ ಅವಂದೂರು ಕಾವೇರಿ ಮಹಿಳಾ ಸ್ವಸಹಾಯದಿಂದ ಅಮ್ಮಾಜೀರ ಪೊನ್ನಪ್ಪ ರಚಿತ ಸುಗ್ಗಿಸುವ್ವಾಲೆ ಕುಣಿತ ಕೋಲಾಟ ಮತ್ತು ಕೊಡಗಿನ ಕಾವೇರಿ ನೃತ್ಯವು ತುಂಬಾ ಮನರಂಜನೀಯವಾಗಿತು. ಅಲ್ಲದೆ ಕೊಡಗಿನ ಗೌಡ ಜನಾಂಗದ ವತಿಯಿಂದ ಏಳೆಂಟು ತಂಡಗಳು ಭಾಗವಹಿಸಿದ್ದು ನಿಜವಾಗಿಯೂ ನೆರೆದವರ ಮನರಂಜಿಸುವಲ್ಲಿ ಸಫಲತೆ ಗಳಿಸಿತು. ನಿಜಕ್ಕೂ ಶ್ಲಾಘನೀಯವಾದುದು.

ವರದಿ -ಸಂಗಾತಿ

ತಿಂಗಳ ಸಂಗಾತಿ ನೋಡ್‌ರ್

ತಿಂಗಳ ಸಂಗಾತಿ ಬಾತ್ ರಾ
ವಾರ್ತಾ ನೀತಿನ ಶಾತ್‌ರಾ
ಗೌಡರ ಕೀರ್ತಿಯ ಜ್ಯೋತಿರಾ
ಹೆದರದೆ ಸಾರ್‌ತ ಉಟ್ಬುರಾ

ಪರ ಪರ ಬಾತ್‌ರಾ
ತರ ತರ ದರ್‌ಗ್‌ರಾ
ಕೊರೆಂಬೆಲಿ ತುಂಬುರಾ
ಅದ್ ಆದೆ ಸಂಪತ್ತ್‌ರಾ

ಅಕ್ಕಂದ್‌ರ ಸೊಬಗ್‌ರಾ
ಅಣ್ಣಂದಿರಾ ಗೊರ್‌ಗ್‌ರಾ
ನಾಡಿಗದ್ ಮೆರ್‌ಗ್‌ರಾ
ಹೊಯ್ಯ ಹಾಡ್‌ನ ಗುಂಗ್‌ರಾ

ಶೀಲಂಗುಟ್ಟು ಸಂಗಾತಿ ಮಣಿರಾ
ಪ್ರಭಾಕರನ ಕರಿಮಣಿನ ತಾಳಿರಾ
ಮಿಂಚಿದೆ ಸಂಗಾತಿ ಮಣಿಸರಾ
ನಮ್ಮ ಧ್ಯೇಯೆಯ ಜ್ಯೋತಿರಾ

ಮನೆಗೊಂದು ಗೌಡರಾ
ನಾಡಿಗೆ ಅಂವ ದೊಡ್ಡಂವರಾ
ಅರೆಗನ್ನಡ ಭಾಷೆಗೆ ಗಡಾರಾ
ತಿಂಗತಿಂಗ ಸಂಗಾತಿ ನೋಡ್‌ರಾ

- ಅಮ್ಮಾಜೀರ ನೀಲಾ, ಪೊನ್ನಪ್ಪ
"ಕಾವೇರಿನಾಡ್", ಬೆಂಗಳೂರು.

ವರ್ಷಕ್ಕೊಮ್ಮೆಯಾದರೂ ಶೃಂಗೇರಿ ಸಬ್ಬಮ್ಮ / ಸುಬ್ಬಮ್ಮನವರನ್ನು ಧ್ಯಾನಿಸು (ಕಾಳಿಕಾಂಜೆ ಮತ್ತು ದುರ್ಗ)

ಕೊಡಗು ಗೌಡ ಸಮಾಜ ಬೆಂಗಳೂರು ವತಿಯಿಂದ ಭರ್ಜರಿ ಹುತ್ತರಿ ಹಬ್ಬದ ಆಚರಣೆ

ನವೆಂಬರ್ 21ನೇ ತಾರೀಕು ರೋಹಿಣಿ ನಕ್ಷತ್ರದ ಹುಣ್ಣಿಮೆಯ ದಿನ, ಬೆಂಗಳೂರಿನ ಕಾವೇರಿ ನಗರದ "ಕೊಡಗು ಗೌಡ ಸಮಾಜ"ದ, "ಕಾವೇರಿ ಶಾಲೆ"ಯ ಆವರಣದಲ್ಲಿ, ಜಗಮಗಿಸುವ ವಿದ್ಯುತ್ ದೀಪದ ಅಲಂಕಾರ ಮತ್ತು ತಳಿರು ತೋರಣಗಲಿಂದ ನವವಧುವಿನಂತೆ ಶೃಂಗರಿಸಲ್ಪಟ್ಟ ಸಮಾಜದ ಸಭಾಂಗಣದಲ್ಲಿ, ಕೊಡಗು ಗೌಡ ಸಮಾಜದ ಕಾರ್ಯಕರ್ತರು ಭರ್ಜರಿ ತಯಾರಿ ನಡೆಸುತ್ತಿದ್ದಂತೆ ಸಂಜೆಯಾಯಿತು. ಇದೆಲ್ಲಾ ಯಾಕೆ ಎಂದು ಕೇಳುತ್ತೀರಾ ?ಅಯ್ಯೊ ಹುತ್ತರಿ ಹಬ್ಬ ಅಲ್ಲವೆ!

ಕೊಡಗು ಗೌಡ ಸಮಾಜ ಬೆಂಗಳೂರಿನವರಿಂದ ಸತತವಾಗಿ ಮೂರನೆ ವರ್ಷದ ಹುತ್ತರಿ ಹಬ್ಬ ಆಚರಿಸಲ್ಪಟ್ಟಿತು. ಸಂಜೆ 7 ಗಂಟೆಗೆ ಕಿಕ್ಕಿರಿದು ತುಂಬಿದ ಸಭಾಂಗಣದ ಮುಂದೆ ಶ್ರೀಮತಿ ಕಾವೇರಿ ಮನೆ ಬೋಜಮ್ಮನವರ ನೇತೃತ್ವದಲ್ಲಿ ದೇವರ ಪೂಜೆಯನ್ನು ಮಹಿಳೆಯರು ಮಾಡಿದರು. ನಂತರ ಶ್ರೀಮತಿ ಬಿಟ್ಟೀರ ಚೋಂದಮ್ಮನವರ ಪ್ರಾರ್ಥನೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭವಾದವು. ಮಕ್ಕಳು ಉತ್ತಮ ಮಟ್ಟದ ನೃತ್ಯಾಭಿನಯವನ್ನು ನೀಡಿದರು. ನಂತರ ಕುದುಕುಳಿ ವಾರಗೆಯವರ ವೃಂದದಿಂದ ಮಹಿಳೆಯರ ಕೋಲಾಟ ರಮಣೀಯವಾಗಿ ಸಭಿಕರನ್ನು ರಂಜಿಸಿತು. ನಂತರ ಬಿಳುಪು ಕುಪ್ಪಸದಟ್ಟಿಯನ್ನು ತೊಟ್ಟು ಕಯ್ಯಲಿ ಕೋಲು ಹಿಡಿದು ದುಡಿಯನ್ನು ಕೊಟ್ಟುತ್ತಾ ಮಹನೀಯರು ಎರಡು ಸಾಲುಗಳಲ್ಲಿ ಸಾಗಿ ಬರುತ್ತಿದ್ದರು. ಮುಂದೆ ಗುತ್ತಿಯನ್ನು ಹೊತ್ತು ಬಿಳಿಯ ಕುಪ್ಪಸದಟ್ಟಿಯನ್ನು ಧರಿಸಿದ ತೋಟಂಬೈಲು ಬೆಳ್ಳಿಯಪ್ಪನವರು ಗಜ ಗಾಂಭೀರ್ಯದಿಂದ ಬರುತ್ತಿದ್ದುದನ್ನು ನೋಡಲು ಎರಡು ಕಣ್ಣು ಸಾಲದು ಎನಿಸುತ್ತಿತ್ತು. ಬಾರಿಕೆ ರಾಘವ ಮೇಸ್ತ್ರ ನೇತೃತ್ವದಲ್ಲಿ ತಯಾರಾಗಿ ಬಂದಿದ ಈ ದಂಡು ಕೋಲಾಟದ ರಮಣೀಯ ದೃಶ್ಯವನ್ನು ನೀಡಿ ಬಂದಿದ್ದ ಬಂಧುಗಳ ಕಣ್ಮನ ತಣಿಸಿದರು. ಕುಮಾರಿ ಬಿಟ್ರ ಚೇತನಾ ಶಂಭು ಗೌಡ ಉಡುಗೆ ಧರಿಸಿ ಕಂಚಿಮಿ ಹಿಡಿದು ಮುಂದೆ ಹೊರಟರೆ, ಜೊತೆಯಲ್ಲಿ ಗುತ್ತಿಯನ್ನು ಹೊತ್ತು ತೋಟಂಬೈಲು ಬೆಳ್ಳಿಯಪ್ಪನವರು ಅವರ ಹಿಂದೆ ಚಾಮರ ದುಡಿಯೊಂದಿಗೆ ಕುಪ್ಪಸ ತೊಟ್ಟ ವೀರರೂ ಬಂಧುಗಳೂ ಶಾಲೆಯ ಆವರಣಕ್ಕೆ ಸಾಗಿ, ಕೊಡಗಿನ ಪದ್ಧತಿಯಂತೆ ಆಕಾಶಕ್ಕೆ ಗುಂಡು ಹಾರಿಸಿ, ಕಿವಿಗಡಚಿಕ್ಕುವ ಪಟಾಕಿಗಳ ಸಿಡಿತದೊಡನೆ, ಶಾಸ್ತ್ರೋಸ್ತ್ರವಾಗಿ ಕಧಿರನ್ನು ತಂದು ದೇವರ ಮುಂದೆ ಇಟ್ಟರು. ನಂತರ ಹಸಿದ ಹೊಟ್ಟೆಗೆ ತಂಬಿಟ್ಟು ಖಾರದ ಅವಲಕ್ಕಿ, ಹೋಳಿಗೆ, ಪಾಯಸ, ಪುಳಿಯೊಗರೆ ತಿಂದು ಬಾದಾಮಿ ಹಾಲು ಕುಡಿದು ಬಂದಿದ ಬಾಂಧವರು ಕದಿರಿನೊಂದಿಗೆ ನಿರ್ಗಮಿಸಿದರು.

ಈ ಕಾರ್ಯಕ್ರಮಕ್ಕೆ ತಿಂಡಿ ತೀರ್ಥಗಳನ್ನು ಒದಗಿಸಿದವರು ಶ್ರೀಮತಿ ಕಾವೇರಿ ಮನೆ ಬೋಜಮ್ಮ, ಕೂಡಕಂಡಿ ಹೊನ್ನಮ್ಮ, ಕುದುಪಜೆ ಸೀತಾ ಗಣಪತಿ, ಮೊಟ್ಟನ ಜಯರವಿಕುಮಾರ್, ಹೊಸೂರು ವಾಸಂತಿ, ಬಿಟ್ರಚೋಂದಮ್ಮ ಶಂಭು, ಕುದುಕುಳಿ ಧರಣಿ ಜನಾರ್ಧನ್, ಕುದುಕುಳಿ ರಾಧ ದಾಮೋದರ್, ಮುಕ್ಕಾಟಿ ದಮಯಂತಿ, ತೋಟಂಬೈಲು ಭವಾನಿ ಮತ್ತು ಇವರ ಸಹೋದರಿ ಗೌರಮ್ಮ, ನಿಡುಬೆ ಮೋಹನ್, ಗೋವಿಂದಮ್ಮನ ಪ್ರವೀಣ್ ಕುಮಾರ್, ಕಟ್ರತನ ದಿನೇಶ್ ಮತ್ತು ಮುಕ್ಕಾಟಿ ಅಣ್ಣಯ್ಯನವರು.

ಈ ಎಲ್ಲಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟವರು ಕೆ.ಜಿ.ಎಸ್.ನ ಸೆಕ್ರೆಟರಿಯಾದ ಶ್ರೀಮಾನ್ ಕುದುಪಜೆ ಗಣಪತಿಯವರು. ಮುಂದಾಳತ್ವ ವಹಿಸಿ ಕಾರ್ಯಕ್ರಮವನ್ನು ರೂಪಿಸಿದವರು ಕಾವೇರಿ ಮನೆ ಡಾ|| ಬೋಜಪ್ಪನವರು. ಈ ಕಾರ್ಯಕ್ರಮಕ್ಕೆ ಕದಿರನ್ನು ಒದಗಿಸಿದವರು ಶ್ರೀಮಾನ್ ಮೊಟ್ಟನ ರವಿಕುಮಾರ್‌ರವರು ಕೆ. ಜಿ. ಎಸ್.ನಲ್ಲಿ ಹುತ್ತರಿ ಹಬ್ಬವನ್ನು ಆಚರಿಸಲು ಕಾರಣಕರ್ತರೂ ಇವರೇ.

ಇನ್ನು ಮುಂದೆಯೂ ಈ ಹುತ್ತರಿ ಕಾರ್ಯಕ್ರಮ ವರುಷದಿಂದ ವರುಷಕ್ಕೆ ಕಾವೇರಮ್ಮ, ಇಗ್ಗುತಪ್ಪ, ಕುಲದೇವ ವೆಂಕಟರಮಣ ಪದ್ಮಾವತಿಯರ ದಯೆಯಿಂದ ಸುಂದರವಾಗಿ ಮೂಡಿ ಬರಲಿ ಎಂದು ಹಾರೈಸುತ್ತೇನೆ. ಬೆಂಗಳೂರಿನ ಅರೆಭಾಷಿಕ ಗೌಡಬಾಂಧವರು ಒಗ್ಗಟ್ಟಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಚೆಂದಗಾಣಿಸಲಿ.

ನಮ್ಮ ಪ್ರಯತ್ನ ಮುಂದೆಂದೂ ನಿಲ್ಲಬಾರದೆಂಬ ಉದ್ದೇಶದಿಂದ ಒಂದು ಚಿಕ್ಕ ಹುತ್ತರಿ ಹುಂಡಿಯನ್ನು ಪ್ರಾರಂಭಿಸಲಾಗಿದೆ. ಡಾ|| ಕಾವೇರಿ ಮನೆ ಬೋಜಪ್ಪನವರ ಕಾಣಿಕೆಯೊಂದಿಗೆ ಪ್ರಾರಂಭವಾದ ಈ ಹುಂಡಿಗೆ ರೂ. 2500/-ರಷ್ಟು ಶೇಖರಣೆಯಾಗಿದೆ. ಇದು ಕಡಿಮೆಯಾದರೂ ಈ ಹುಂಡಿ ಬೃಹದಾಕಾರವಾಗಿ ಬೆಳೆಯಲೆಂದು ಹಾರೈಸುತ್ತೇವೆ.

ಬರಹ : ಬಿಟ್ಟೀರ-ಚೋಂದಮ್ಮ ಶಂಭು

ಪರಿಸರ

ಮುಂಜಾನೆ ಹೊತ್ತು ಕಣ್ಣಿಗೆ ಬಿತ್ತು ಇಬ್ಬನಿ ಮುತ್ತು
ಆಗಸದಿ ಕಂಡೆನು ಕಾಮನಬಿಲ್ಲು
ಭೂಮಿಯಲಿ ಎಲ್ಲೆಡೆ ಹಸಿರಿನ ಹುಲ್ಲು
ಗಿಡಗಂಟಿಗಳ ಕೊರಳಿಂದ ಹೊರಟಿತು ಹಾಡು.

ಕಾತುರದಿ ನೋಡಲು ಕಂಡಿತು ಹಕ್ಕಿಗಳ ನಾಡು
ದಣಿಯುತ ಮುಂದಕೆ ಸಾಗಲು ಬಂದಿತು
ತಂಪಿನ ಸ್ಪರ್ಶವ ತಂಗಾಳಿ ತಂದಿತು
ನೀರು ಹರಿಯಲು ಜಲಪಾತ ಉಕ್ಕಿತು.

ಇದು ನೋಡಿ ಮನದ ದಣಿವಾರಿತು
ಕುಡಿಯಲು ನೀರು ತೀರಿತು ದಾಹ
ಬಂದನು ನೇಸರ ನೆತ್ತಿಯ ಮೇಲೆ
ತಂದನು ಉರಿಬಿಸಿಲ ಬೇಗೆ.

ಪಕ್ಕನೆ ಬೀಸಿ ಬಂದನು ವಾಯುದೂತ
ಬಿಸಿಲ ಬೇಗೆಯ ನೀಗುತ
ಬೀರಿದ ರವಿ ಮುಸ್ಸಂಜೆಯ ಕಿರಣ
ಜಗವಾಯಿತು ತಂಪಿನ ಸುಂದರ ತಾಣ.

-ಕೋಡಿಯಡ್ಕ ರಮೇಶ್ ಕೃಷ್ಣಪ್ಪ
ಮಕ್ಕಂದೂರು ಗ್ರಾಮ

ಪತ್ರ ವಿಭಾಗ -1

To,
Kodagu
Sangathi

ಹೊಸ ವರುಷದ ಶುಭಾಷಯಗಳು

ಹೊಸ ವರುಷಕ್ಕೆ ಕಾಲಿಡುತ್ತಿರುವ ಹಿನ್ನಲೆಯಲ್ಲಿ ಈ ನಮ್ಮ "ಕೊಡಗು ಸಂಗಾತಿಯು" ನಮ್ಮ ಗೌಡ ಜನಾಂಗದಲ್ಲಿ ಬೆರೆತು ನೋವು ನಲಿವುಗಳಿಗೆ ಸ್ಪಂದಿಸುತ್ತಾ, ತನ್ನ ಅನಿಸಿಕೆಗಳನ್ನು ಸ್ಪಷ್ಟಪಡಿಸುತ್ತಾ ಲೇಖಕ, ಹಾಗು ಲೇಖಕಿಯರಿಗೆ ಸ್ಫೂರ್ತಿದಾಯಕವಾಗಿ ಅವಕಾಶವನ್ನು ಮಾಡಿಕೊಟ್ಟು ಚಿಕ್ಕ ಪುಟ್ಟ ಮಕ್ಕಳಿಗೆ ಧೈರ್ಯ ತುಂಬುತ್ತಾ ಅವರಿಗೂ ಎಲ್ಲಾ ರೀತಿಯಲ್ಲಿ ಸ್ಪರ್ಧೆಗಳಿಗೆ ಅವಕಾಶವನ್ನು ಮಾಡಿಕೊಡುವ ಒಂದು ಪತ್ರಿಕೆ. ಎಲ್ಲಾರ ಮನೆ ಮನೆ ಬಾಗಿಲಲ್ಲಿ ಸುದ್ದಿಯನ್ನು ನಾವು ತಿಳಿದು ಕೊಳ್ಳುವಂತಹ ಪತ್ರಿಕೆ "ಕೊಡಗುಸಂಗಾತಿ"ಯಾಗಿದೆ. ಪುಟಗಳು ಕಡಿಮೆಯಾದರೂ ಮುಖ್ಯವಾದ ವಿಷಯಗಳನ್ನು ನಾವು ತಿಳಿದುಕೊಳ್ಳುವಂತಹ ಅವಕಾಶ ಈ ಪತ್ರಿಕೆಯಲ್ಲಿ ಅಡಗಿದೆ. ಲೇಖನಗಳು, ಕವನಗಳು, ವರದಿಗಳು, ಮಕ್ಕಳ ಜ್ಞಾನಾರ್ಜನೆಗೆಂದು ಸಂಬಂಧಿಸಿದ ಲೇಖನಗಳು ಇವುಗಳು ಮಕ್ಕಳಿಗೆ ಉಪಯೋಗಕ್ಕೆ ಬರುವಂತಹದು ಮತ್ತು ಉದ್ಯೋಗ ವಾರ್ತೆ "ವಧು ವರ" ಪುಣ್ಯ ಅನ್ವೇಷಣೆ ಹೀಗೆ ಹಲವಾರು, ಈ ಹಿಂದೆ ಕಥೆಗಳಿಗೆ ಅವಕಾಶವಿತ್ತು ಇತ್ತೀಚೆಗೆ ಕಥೆಗಳಿಗೆ ಅವಕಾಶ ಕಡಿಮೆಯಾಗಿದೆ. ಲೇಖಕರು ಬರೆಯುದಿಲ್ಲವೋ ಅಥವಾ ಅವಕಾಶವಿಲ್ಲವೋ ಅದು ಸಂಪಾದಕರಿಗೆ ಸೇರಿದ್ದು. ಈ ಎಲ್ಲಾ ರೀತಿಯಲ್ಲಿ ಗೌಡ ಜನಾಂಗದವರ ಮನವನ್ನು ತಟ್ಟುವಂತಹ ಪತ್ರಿಕೆಯಾಗಿ ಮನೆ ಮನೆಯಲ್ಲಿ ಮಾತಾಗಿ ಎಲ್ಲಾ ಜನಾಂಗದವರಿಗೂ ಸ್ಪಂದಿಸುವಂತಾಗಿ ಉಜ್ವಲ ರೀತಿಯಲ್ಲಿ "ಕೊಡಗು ಸಂಗಾತಿ"ಯು ಬೆಳೆಯಲೆಂದು ಮತ್ತು ನಾಡಿನ ಕುಲಕೋಟಿ ಜನರಿಗೂ ಮತ್ತು ಗೌಡ ಜನಾಂಗದವರಿಗೂ, ಕೊಡಗು ಸಂಗಾತಿಯ ಪತ್ರಿಕೋದ್ಯಮಿಯರಿಗೂ ಹಾಗೂ ಲೇಖಕ, ಲೇಖಕಿಯರಿಗೂ 2003ರ ಸಾಲಿನ ನನ್ನ ತುಂಬು ಹೃದಯದ ಕ್ರಿಸ್ತಹೊಸ ವರುಷದ ಶುಭಾಷಯವನ್ನು ಕೋರುವ

-ಆಜಡ್ಕ ರಾಣಿಬಾಲಕೃಷ್ಣ, ಕುಶಾಲನಗರ

ಬಾಲಸಂಗಾತಿ ವಿಭಾಗ : ಕತೆ - 7

ಒಬ್ಬನ ಭಾಗ್ಯ ಮತ್ತೊಬ್ಬರಿಗೆ ಮೃತ್ಯು

ಒಂದು ಊರ್‌ಲಿ ಒಬ್ಬ ಹಾವಾಡಿಗ ಇತ್ತ್. ಅಂವ ಒಂದು ಹಾವುನ ಹಿಡ್ದ್ ಅದರ ಹಲ್ಲ್‌ನ ಕಿತ್ತ್ ಪೆಟ್ಟಿಗೆಲಿ ಹಾಕಿ ಮಡ್ಗಿತ್. ದಿನಾಲೂ ಒಂದೊಂದು ಊರಿಗೆ ಹೋಗಿ ಹಾವುನ ಪ್ರದರ್ಶನ ಮಾಡಿ ಹಾವಾಡ್ಸಿ ಹಣ ಸಂಪಾದನೆ ಮಾಡಿ ಜೀವನನ ಸಾಗಿಸ್‌ತ್ತಿತ್ತ್. ಹಿಂಗಿರ್‌ಕನ ಒಂದ್ ದಿನ ಅವನ ಅವ್ವಂಗೆ ಸಕತ್ತ್ ಖಾಯಿಲೆ ಹಾಸಿಗೆ ಹಿಡ್ದುಟತ ಗೊತ್ತಾಗಿ ಊರಿಗೆ ಹೋತ್. ಒಂದು ವಾರ ಆದರೂ ವಾಪಸ್ಸ್ ಬಾತ್ಲೆ. ಇತ್ತ ಹಾವು ಪೆಟ್ಟಿಗೆಯೊಳಗೆ ಹಸಿವುಲಿ ಕಣ್ ಕಾಂಬತ್ತಿತ್ತ್‌ಲೆ. ಪೆಟ್ಟಿಗೆಂದ ಹೊರಗೆ ಬಾಕೆ ಪ್ರಯತ್ನ ಪಟ್ಟತ್. ನಿಶ್ಯಕ್ತಿಲಿ ಸಾಧ್ಯ ಆತ್‌ಲೆ.

ಒಂದು ಇಲಿ ಅಲ್ಲಿಗೆ ಬಂದ್ ಪೆಟ್ಟಿಗೆನ ನೋಡ್ತ್. ಆಗ ಅದರ ಮನ್‌ಸ್‌ಲಿ ಈ ಪೆಟ್ಟಿಗೆ ಒಳ್ಗಡೆ ತಿಂಬೆಕೆ ಎಂತಾರ್ ಇರ್ದುತ ಗ್ಯಾನ ಮಾಡ್ತ್. ಗ್ಯಾನ ಬಂದದ್ದೇ ತಡ ಪೆಟ್ಟಿಗೆಗೆ ತೂತ ಕೊರ್‌ತ್. ಒಳಗಡೆಗೆ ಹೋತ್. ಸೀದಾ ಹೋಗಿ ಹಾವುನ ಬಾಯೊಳ್ಗೆ ಬೀತ್. ಅದೋ ಹಾವುನ ಅದೃಷ್ಟ. ಹಾವು ಇಲಿನ ತಿಂದ್ ಅದೇ ತೂತ್‌ಲಿ ಹೊರಗೆ ಹೊರ್‌ಟ್ ಹೋತ್. ಹಾವುನ ಭಾಗ್ಯ ಇಲಿಗೆ ಮೃತ್ಯು ಆತ್.

- ಬಿಟ್ಟೀರ ಚೋಂದಮ್ಮ ಶಂಭು. (ಮುಂದ್‌ವರ್ದದೆ)

ಜ್ಞಾನ -7

ಶಾಲೆಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಸಸ್ಯಶಾಸ್ತ್ರ (ವನಸ್ಪತಿ) (Botony)

ಸಸ್ಯಶಾಸ್ತ್ರದ ಅಧ್ಯಯನ ಪ್ರಾಚೀನ ಕಾಲಂದನೂ ಭಾರತಲಿ ನಡ್ಕಂಡೇ ಇತ್ತ್. ಅಥರ್ವವೇದಲಿ ಸಸ್ಯಗಳ ಆಕಾರ, ಗುಣಧರ್ಮ ಲಕ್ಷಣಗಳನ್ನ ಆಧರಿಸಿ ವಿಂಗಡಣೆ ಮಾಡ್ದ್ ಕಂಡ್‌ಬಂದದೆ. ಆ ವರ್ಗೀಕರಣ ಹಿಂಗ್ಯುಟ್ಟು.

ಪ್ರಸ್ಥಾನವತೀ - Spreading
ಸ್ಥಂಬಿನಿ - Busy
ಏಕಶೃಂಗ - with single whole of colyx
ಅಂಶುಮತಿ - Having many shoots
ಪ್ರತಾನವತಿ - extending
ವಿಶಾಖ - Having extending branches
ಕಂಡಿನೀ - Jointed
ಜೀವಾಲ - Lively
ನಗೀರಷ - Harmless
ಮಧುಮತಿ - Very Sweet

ಈ ತರ ವರ್ಗೀಕರಣನ 5,000 ವರ್ಷಗಳಷ್ಟ್ ಹಿಂದೆನೇ ಮಾಡಿದ್ದೊ. ಆದರೆ ಸಸ್ಯಶಾಸ್ತ್ರದ ಪಿತಾಮಹತೇಳಿ ಪರಿಗಣಿಸುದು ಗ್ರೀಕ್ ದೇಶದ ಥಿಯೋಪ್ರಸ್ಸ್‌ಸ್‌ನ. ಅಂವ ಇದೇ ವರ್ಗೀಕರಣನ ಹೇಳ್ದ್ ಕ್ರಿ. ಪೂ. 3ನೇ ಶತಮಾನಲಿ !

ವೃಕ್ಷಾಯುರ್ವೇದ :- ಸಸ್ಯಶಾಸ್ತ್ರ ಕ್ಷೇತ್ರಲಿ ಪರಾಶರ ಮಹರ್ಷಿಗ ರಚಿಸಿದ ವೃಕ್ಷಾಯುರ್ವೇದ ಗ್ರಂಥಕ್ಕೆ ಮಹತ್ವಪೂರ್ಣ ಸ್ಥಾನ ಉಟ್ಟು. ಸಸ್ಯಶಾಸ್ತ್ರನ ಕುರಿತ್ ಗಹನವಾದ ಚಿಂತನೆ ಇಲ್ಲಿ ಕಂಡ್‌ಬಂದದೆ. ಅವು ಮಾಡ್ದ ವೃಕ್ಷಗಳ ವರ್ಗೀಕರಣ ಎಸ್ಟ್ ವೈಜ್ಞಾನಿಕ ಆಗ್ಯುಟ್ಟುತ್ತೇಳ್ರೆ, ಆಧುನಿಕ ಸಸ್ಯಶಾಸ್ತ್ರಲಿನೂ ಅದನ್ನೇ ಅನುಸರಿಸಿವೆ.

ಪರಾಶರರ ವರ್ಗೀಕರಣ (ಕ್ರಿ. ಪೂ 100)	ಆಧುನಿಕ ವರ್ಗೀಕರಣ (1700 ಕ್ರಿ. ಶ.)
ಶಮೀಗಣೀಯಾ	Leguminoesae
ಪುಷೀಲಿಕಗಣೀಯಾ	Retaceal
ಸ್ವಸ್ತಿಕಗಣೀಯಾ	Cruciferal
ಕೂರ್ಚಗಣೀಯಾ	Compositial

ರಸಕೋಷ (Plant Cell) :

ಪರಾಶರರು ತಮ್ಮ ಗ್ರಂಥಲಿ ಸಸ್ಯಗಳ ರಸಕೋಷದ ಬಗ್ಗೆ ವಿಸ್ತಾರ ಆಗಿ ವರ್ಣಿಸ್ಯೊಳೊ. ಅಂದ್ ಅವು ಸೂಕ್ಷ್ಮದರ್ಶಕದ ಸಹಾಯ ಇಲ್ಲದೆ ಮಾಡ್ದ ಸಂಶೋಧನೆ ಕ್ರಿ. ಸ. 1665ರ್‌ಲಿ ರಾಬರ್ಟ್ ಹುಕ್ಕ್ ತೇಳುವ ವಿಜ್ಞಾನಿ ಸೂಕ್ಷ್ಮದರ್ಶಕದ ಸಹಾಯಲಿ ಮಾಡ್ದ ಸಂಶೋಧನೆಗಿಂತ ಉತ್ಕೃಷ್ಟ ಆಗ್ಯುಟ್ಟು

20 ನೇ ಪುಟಕ್ಕೆ

-: ಸತ್ಯದೆಡೆಗೆ ಜೀವನ :-

ಮಾನವನ ಅತೀ ಅಮೂಲ್ಯವಾದ ಐಶ್ವರ್ಯ ಸತ್ಯ. ಶಕ್ತಿಯಲ್ಲಿ ಪರಮ ಶಕ್ತಿ ಸತ್ಯ. ಅದನ್ನೇ 'ಸತ್ಯಂ ಸರ್ವಭೂತಾಂತರಾತ್ಮ" ಎಂದಿದ್ದಾರೆ. ಸತ್ಯ ಎಂಬುದು ಎಲ್ಲಿದೆ ? ಅದು ಇಲ್ಲೂ ಇದೆ, ಅಲ್ಲೂ ಇದೆ, ಎಲ್ಲೆಲ್ಲೂ ಇದೆ. ಸತ್ಯವಿಲ್ಲದ ಸ್ಥಳವು ಜಗತ್ತಿನಲ್ಲಿಲ್ಲ. ನಮ್ಮ ಏಳ್ಗೆಗೆ ಕಾರಣ ಸತ್ಯ. (Truth) ಸತ್ಯವನ್ನು ಮರೆತರೆ ನಮಗೆ ದೊರಕುವುದು ಸಂಕಷ್ಟಗಳ ಸರಮಾಲೆ. ಸತ್ಯ ಮತ್ತು ಸದಾಚಾರ ನೀತಿ ನಿಯಮಕ್ಕೆ ಕಾರಣ. ನೀತಿಯಲ್ಲಿದ್ದರೆ ನಮಗೆ ಖ್ಯಾತಿ. ನೀತಿ, ನಿಜಯತಿಯೇ ಮಾನವ ಜಾತಿ.

ಸತ್ಯವೇ ನಮಗೆ ನಿತ್ಯತ್ವ. ಅದೇ ದೈವತ್ವ. ಸತ್ಯ ಹರಿಶ್ಚಂದ್ರನಂತೆ ಆಗಲು ಸಾಧ್ಯವಿಲ್ಲದಿದ್ದರೂ ಸತ್ಯಪಾಲನೆ ಮಾಡಬಹುದು. ಸತ್ಯಪಾಲನೆಯಲ್ಲಿ ದ್ವೇಷಕ್ಕಿಡೆ ಇಲ್ಲ. ಅದೇ ಜೀವನದ ಉದ್ದೇಶ. ನಾವು ನಮ್ಮ ಅನಿಸಿಕೆಗಳನ್ನು ಆಸೆ ಆಕಾಂಕ್ಷೆಗಳನ್ನು ಈಡೇರಿಸಿಸಲು ನಾನಾ ಮಾರ್ಗೋಪಾಯಗಳನ್ನು ಹುಡುಕುತ್ತೇವೆ. ಆಸೆ ಆಕಾಂಕ್ಷೆಗಳ ಬೆನ್ನು ಹತ್ತಿ ಸತ್ಯವನ್ನು ಮರೆಯುತ್ತೇವೆ. ದುಃಖದಲ್ಲಿ ಮುಳುಗುತ್ತೇವೆ. ಸತ್ಯ, ನೀತಿಯನ್ನು ಬಿಟ್ಟ ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣ, ಕುಂಭಕರ್ಣ, ದುರ್ಯೋಧನ, ದುಶ್ಯಾಸನ ಇವರ ಜೀವನದಲ್ಲಿ ಏನಾಯಿತೆಂಬುವುದು ಸರ್ವರಿಗೂ ತಿಳಿದಿದೆ. ಆದರೂ ಸತ್ಯ, ನೀತಿ, ನಿಯಮ ಪಾಲಿಸಲು ನಾವು ಹಿಂಜರಿಯುತ್ತಿದ್ದೇವೆ. ಪ್ರಾಪಂಚಿಕ ಸುಖ ಕ್ಷಣಿಕ. ಆಧ್ಯಾತ್ಮಿಕ ಸುಖ ಶಾಶ್ವತ. ಇದು ಗೊತ್ತಿದ್ದೂ ನಮ್ಮ ಒಲವು ಕ್ಷಣಿಕ ಸುಖಕ್ಕಾಗಿ. ಇದಕ್ಕೆ ಕಾರಣ ನಮಗೆ ಮಾರ್ಗದರ್ಶನದ ಕೊರತೆ. ಮನಸ್ಸಿನ ಚಂಚಲತೆ ; ಸುಖ ಏನೆಂಬುದರ ಅರಿವಿಕೆಯ ಕೊರತೆ.

ಸತ್ಯವೇ ಧರ್ಮ ; ಧರ್ಮವೇ ಸತ್ಯ. ಧರ್ಮವೆಂದರೆ ದಾನ ಧರ್ಮ ಮಾತ್ರವಲ್ಲ. ನಿತ್ಯ ಜೀವನದಲ್ಲಿ, ವ್ಯವಹಾರದಲ್ಲಿ ಪಾರದರ್ಶಿಕದ ರೀತಿ, ನ್ಯಾಯದ ನೀತಿ. ಇಂದಿನ ಯುವ ಜನಾಂಗ ಯಾವುದೇ ಜನಾಂಗವಾಗಿರಲಿ, ಯುವಕ, ಯುವತಿಯರಲ್ಲಿ ಸತ್ಯ, ದರ್ಮ, ಸದಾಚಾರವಿಲ್ಲದಿದ್ದರೆ ಆ ಜನಾಂಗ ನಾಶದೆಡೆಗೆ ಪ್ರಯಾಣ ಮಾಡಿದಂತೆ. ಆದ್ದರಿಂದ ನಮ್ಮ ಜನಾಂಗದ ಯುವಕ, ಯುವತಿಯರಲಿ ಇದನ್ನರಿತು ತಮ್ಮ ಜೀವನ ಶೈಲಿಯನ್ನು ರೂಪಿಸಿಕೊಳ್ಳಬೇಕಾಗಿದೆ. ನಮ್ಮ ಯುವ, ಯುವತಿಯರಲ್ಲಿ ಬಿಸಿ ರಕ್ತವಿದೆ. ಹುಮ್ಮಸ್ಸು ಇದೆ, ಚೈತನ್ಯ ಇದೆ. ಅವರೇ ತಮಗೆ, ತಮ್ಮ ಜನಾಂಗಕ್ಕೆ, ನಮ್ಮ ಹುಟ್ಟೂರಿಗೆ, ಭಾರತಕ್ಕೆ ಕೀರ್ತಿಯನ್ನು ತರುವವರು. ಅವರೇ ಮುಂದಿನ ಜನಾಂಗದ ದೀಪ. ಅವರು ಕಾರ್ಯಪ್ರವರ್ತರಾದರೆ ಕೀರ್ತಿ, ಉದಾಸೀನ ತಾಳಿದರೆ ಜನಾಂಗದ ಅಧೋಗತಿ.

ಸತ್ಯ, ಧರ್ಮ ಜೀವನದ ನೀತಿ, ಪ್ರೇಮ ಪ್ರೇಮಿಯರ ಉಸಿರಾಟ. ಯುವ ಯುವತಿಯರ ರಕ್ತದ ಚಿಲುಮೆ. ಅದನ್ನು ಸರಿಯಾದ ರಸ್ತೆಯಲ್ಲಿ ಚಲಿಸುವಂತೆ ಮಾಡುವುದು ಅವರ ಕರ್ತವ್ಯ. ಮಗುವಿನ ಜನನಕ್ಕೆ ತಂದೆ, ತಾಯಿ ಕಾರಣ. ಉಸಿರಾಟಕ್ಕೆ ಆತ್ಮ ಕಾರಣ. ಜೀವನಕ್ಕೆ ಸತ್ಯ, ಧರ್ಮ ಕಾರಣ. ಒಬ್ಬರಿಗೊಬ್ಬರ ಮಾರ್ಗದರ್ಶಿ ಸಹಬಾಳ್ವೆಗೆ ಕಾರಣ. ಕಾರಣಕ್ಕೆ ಕಾರಣವೇ ಸಾಕ್ಷಿ. ಆ ಕಾರಣವೇ ನಮ್ಮ ಗುರು.

'ನುಡಿಯಂತೆ ನಡೆ' ಇದು ಧರ್ಮ ತತ್ವ. ಅದೇ ಪ್ರೀತಿ, ವಿಶ್ವಾಸವನ್ನು ಗಳಿಸುವ ಪ್ರಥಮ ಮಂತ್ರ. ಮಾತಿಗೆ ತಪ್ಪುವುದೇ ನರಕ. ಮಾತು ಮಂದಾರವಾಗಬೇಕು. ಕೃತಿ ಸುಂದರವಾಗಿರಬೇಕು. ಅದೇ ಶೌರ್ಯದ ಬಾವುಟ. ಚಕ್ರವರ್ತಿಗಳಲ್ಲಿ ಬಲಿಚಕ್ರವರ್ತಿಯ ನೆನಪಾಗುವುದು. ಪಾಂಡವರಲ್ಲಿ ಧರ್ಮರಾಜನ ನೆನಪಾಗುವುದು. ನಮ್ಮ ಜೀವನದಲ್ಲಿ ನಮಗೊಬ್ಬರು ಆದರ್ಶಪ್ರಾಯರಾಗಿರಬೇಕು. ಆದರ್ಶವು ನಿದರ್ಶನವಾಗಿರಬೇಕು.

ಇಂದಿನ ಯುವ, ಯುವತಿಯರಿಗೆ ಆದರ್ಶರು ಯಾರು ? ಇದರ ಚಿಂತನೆ ಮಾಡಿರುವಿರಾ ? ಆ ಕಾರಣಕ್ಕಾಗಿ ನಮ್ಮ ಜೀವನ ಒಂದು ಗಾಳಿಪಟವಾಗಿದೆ. ಯುವ ಪೀಳಿಗೆಗೆ ಹೆಚ್ಚಾಗಿ ಆದರ್ಶ ಟಿ. ವಿ. ನಟ ನಟಿಯರು. ರಾಜಕೀಯ ಪುಢಾರಿಗಳು ಮತ್ತು ಅವರ ಸ್ವಾರ್ಥ ತುಂಬಿದ ಸೇವಾಕಾರ್ಯ. ಇದು ಎಷ್ಟರ ಮಟ್ಟಿಗೆ ಯುವ ಜನಾಂಗವನ್ನು ಮೇಲೆತ್ತಿದೆ. ದಯವಿಟ್ಟು ಒಂದು ನಿಮಿಷ ಕಣ್ಣು ಮುಚ್ಚಿ ಆಲೋಚನೆ ಮಾಡಿ. ಸತ್ಯದ ಅರಿವಾಗುವುದು ರಾಜಕೀಯವು ಇಂದು ಅಷ್ಟರ ಮಟ್ಟಿಗೆ ಕೀಳು ದಾರಿಗಿಳಿದಿದೆ. ಅಷ್ಟರ ಮಟ್ಟಿಗೆ 'ಕೀಂಜ ಪೋಯಿತ್', ಇದು ಯುವ ಜನಾಂಗಕ್ಕೆ ಮಾರ್ಗದರ್ಶನವಾಗಲಾರದು. ಆಗುವುದೂ ಇಲ್ಲ.

ನಮ್ಮ ಯುವ ಜನಾಂಗಕ್ಕೆ ಇಂದು ಆದರ್ಶ ಪ್ರಾಯರೆಂದರೆ ನನ್ನ ಮಟ್ಟಿಗೆ ಸ್ವಾಮಿ ವಿವೇಕಾನಂದರು. ಸತ್ಯವನ್ನು ನುಡಿದರು. ನುಡಿದಂತೆ ನಡೆದರು. ಅದಕ್ಕಾಗಿ ಜನರನ್ನು ದೇಶ ವಿದೇಶಗಳಲ್ಲಿ ಹುರಿದುಂಬಿಸಿದರು. ಚಿಕ್ಕ ವಯಸ್ಸಿನಲ್ಲಿ ಸಾವನ್ನಪ್ಪಿದರು. ಕೀರ್ತಿವಂತರಾದರು. ಅವರ ಗುರು ಶ್ರೀ ರಾಮಕೃಷ್ಣ ಪರಮಹಂಸರು, ಅವರ ಪತ್ನಿ ಶಾರದಾಂಬೆ ಜಗತ್ತಿನ ಮಾತೆಯಾದರು. ಏಕೆ ? ಸತ್ಯ ಧರ್ಮದ ಆಚರಣೆಯಿಂದ, ಇಂತಹ ಜಗಜ್ಯೋತಿಯರನ್ನು ನಾವು ಆದರ್ಶರನ್ನಾಗಿ ಇಟ್ಟುಕೊಳ್ಳಬೇಕು. ಅವರಿಟ್ಟ ಹೆಜ್ಜೆಯಲ್ಲಿ ಹೆಜ್ಜೆ ಹಾಕಲು ಹವಣಿಸಬೇಕು. ಇದೇ ಸತ್ಯ, ಧರ್ಮ, ರೀತಿ ಮತ್ತು ನೀತಿ.

ಹಿಂದಿನ ವಿದ್ಯಾಭ್ಯಾಸ ಓಂ ನಮಃ ಶಿವಾಯವೆಂಬ ಪಂಚಾಕ್ಷರಿ ಮಂತ್ರ ಇಲ್ಲವೇ ಓಂ ನಮೋ ನಾರಾಯಣವೆಂದ ಅಸ್ಟಾಕ್ಷರಿ ಮಂತ್ರ, ಗಣಧಿ ಪಾತಾಯವೆಂಬ ಗಣೇಶ ಸ್ತೋತ್ರದೊಂದಿಗೆ ಪ್ರಾರಂಭವಾಗುತ್ತಿತ್ತು. ಅವರಲ್ಲಿ ಕಿಂಚಿತ್ತಾದರೂ ದೈವಗುಣ ಇರುತ್ತಿತ್ತು. ಇಂದು ಪಾಶ್ಚಾತೀಕರಣ "ಬಾಬಾ ಬ್ಲೇಕ್ ಶೀಪ್" ಅಂತೆಯೇ ನಮ್ಮ ಜೀವನ ಶೈಲಿ ಮಾತಾಪಿತೃವನ್ನು ಕಡೆಗಣಿಸುವ ರಾಕ್ಷಸ ಗುಣದ ವಿದ್ಯಾರ್ಜನೆ. ಹೊಟ್ಟೆ ಪಕ್ಷದ ವಿದ್ಯಾಭ್ಯಾಸ.

ಭಗವದ್ಗೀತೆ ಹೇಳಿದಂತೆ ಎಲ್ಲಿ ದೇವನಿರುವನೋ, ಎಲ್ಲಿ ಅರ್ಜುನ (ಕರ್ತವ್ಯನಿರತ) ಅಲ್ಲಿ ಜಯ, ವಿಜಯ, ಐಶ್ವರ್ಯ ತಾಂಡವಾಡುವದು. ಅಂದರೆ ದೀನರ ಸ್ಮರಣೆಯಿಂದ ದೇವರ ಅನುಗ್ರಹ, ಕೈಯಲ್ಲಿ ಸತ್ಕಾರ್ಯ ನಡೆಯುವುದೋ ಅಲ್ಲಿ ಸಂತೃಪ್ತಿ ಲಭಿಸುವುದು ಹಾಗೆಯೇ ಭಗವದ್ಗೀತೆಯ ಶ್ಲೋಕ ಸುರುವಾಗುವುದು. ಧರ್ಮದಿಂದ, ಕೊನೆಗೊಳ್ಳುವ ಶ್ಲೋಕ ಮಮ ಅಂದರೆ ಗೀತೆಯ ಸಾರ 'ಮಮಧರ್ಮ' ಅಂದರೆ ನಮ್ಮ ಧರ್ಮ, ಸತ್ಯ ನಮ್ಮನ್ನು ಕಾಪಾಡುವುದು. ಸತ್ಯವಿದ್ದರೆ ನಿತ್ಯತ್ವವಿರುವುದು. ಅವೆರಡು ದೈವತ್ವಕ್ಕೆ ದಾರಿ. ನಮ್ಮ ಯುವ ಜನಾಂಗಕ್ಕೆ ಯಾವ ದಾರಿ ಬೇಕೆಂದು ಯುವ ಪೀಳಿಗೆಯೇ ನಿರ್ಧರಿಸಿಕೊಳ್ಳಬೇಕು.

-ಚೇಂದ್ರಿಮಾಡ.ಗ.ಮುತ್ತಪ್ಪ, ಕುಶಾಲನಗರ.

ಜೀವಿತದಲ್ಲಿ ಒಮ್ಮೆಯಾದರೂ ಶೃಂಗೇರಿಗೆ ಹೋಗಿ ಬಾ - ಗುರುಶಾಪ ವಿಮೋಚನೆಯಾಗಲಿ

"ಗೌಡ ಜನಾಂಗವನ್ನು ನಿರ್ಲಕ್ಷಿಸಿದರೆ ಜಂಟಿಯಾಗಿ ಪ್ರತಿಭಟನೆ"

ಕೊಡಗು ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಒಕ್ಕೊರಲ ಘೋಷಣೆ

ಕೊಡಗಿನಲ್ಲಿ ಗೌಡ ಜನಾಂಗವನ್ನು ವಿವಿಧ ಇಲಾಖೆಯ ಅಧಿಕಾರಿಗಳು ನಿರ್ಲಕ್ಷಿಸುತ್ತಾ ಬರುತ್ತಿದ್ದಾರೆ. ಕೊಡಗಿನಲ್ಲಿ ಬಹುಸಂಖ್ಯೆಯಲ್ಲಿರುವ ಗೌಡ ಜನಾಂಗವನ್ನು ಮುಖ್ಯವಾಹಿನಿಯಿಂದ ದೂರವಿಡಲು ಯಾವುದೇ ಅಧಿಕಾರಿಗಳು ಪ್ರಯತ್ನಿಸಿದ್ದೆ ಆದರೆ ಕೊಡಗಿನಲ್ಲಿರುವ ಎಲ್ಲಾ ಗೌಡ ಸಂಘಟನೆಗಳು ಜಂಟಿಯಾಗಿ ಪ್ರತಿಭಟಿಸಲು ಮುಂದಾಗಬೇಕೆಂದು ಕೊಡಗು ಗೌಡ ಮಹಾ ಜನತೆ, ಗೌಡ ಸಂಘಟನೆಗಳಿಗೆ ಕರೆ ನೀಡಿದ್ದಾರೆ.

ಡಿಸಂಬರ್ 15 ರಂದು ಮಡಿಕೇರಿಯ ಗೌಡ ವಿದ್ಯಾ ಸಂಘದ ಸಭಾಂಗಣದಲ್ಲಿ ಕೊಡಗು ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾ ಸಭೆಯಲ್ಲಿ, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜೆ ಗಣೇಶರವರು, ಇತ್ತೀಚೆಗೆ ಕೊಡಗಿನಲ್ಲಿ ನಡೆದ 'ಗಡಿನಾಡ ಉತ್ಸವ'ದಲ್ಲಿ ಕೊಡಗು ಗೌಡ ಜನಾಂಗವನ್ನು ನಿರ್ಲಕ್ಷಿಸಲಾಗಿದೆ ಎಂದು ಖೇದ ವ್ಯಕ್ತ ಪಡಿಸಿದಾಗ ಅದಕ್ಕೆ ಪ್ರತಿಕ್ರಿಯಿಸಿದ ಸಭಿಕರು ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿ ಗೌಡ ಜನಾಂಗವನ್ನೂ ನಿರ್ಲಕ್ಷಿಸಿದ್ದೇ ಆದರೆ ಕೊಡಗಿನ ಎಲ್ಲಾ ಭಾಗಗಳಲ್ಲಿರುವ ಗೌಡ ಸಂಘಟನೆಗಳೂ ಸೇರಿದಂತೆ, ಗೌಡ ಸಮಾಜ, ವಿದ್ಯಾ ಸಂಘ, ಮಹಿಳಾ ಒಕ್ಕೂಟ ಅಕಾಡೆಮಿ, ಮಾಜಿ ನೌಕರರ ಸಂಘ, ಜಂಟಿಯಾಗಿ ಹೋರಾಟ ರೂಪಿಸಬೇಕೆಂದರಲ್ಲದೆ, ಗಡಿನಾಡ ಉತ್ಸವದಲ್ಲಿ ಜನಾಂಗವನ್ನು ನಿರ್ಲಕ್ಷಿಸಿದ್ದರ ವಿರುದ್ಧ ಅಕಾಡೆಮಿಯ ನೇತೃತ್ವದಲ್ಲೇ ಹೋರಾಟ ರೂಪುಗೊಳ್ಳಲಿ ಎಂದು ಸಲಹೆ ನೀಡಿದರು.

ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಗೌಡ ಜನಾಂಗದ ಏಳಿಗೆ ಬಗ್ಗೆ ಹಲವು ಸುತ್ತಿನ ಚಿಂತನ-ಮಂಥನ ನಡೆಯಿತು. ವಿದ್ಯಾ ಸಂಘದ ಕಾರ್ಯದರ್ಶಿ ಕುಡೆಕಲ್ಲ್ ವಿದ್ಯಾಧರ್‌ರವರು ಕೊರತೆಯ ಆಯ-ವ್ಯಯ ಮಂಡಿಸಿದರು. ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಹೊಸೂರು ರಮೇಶ್‌ನವರು ಮಾತನಾಡಿ ಅವರ ಅಧಿಕಾರಾವಧಿಯಲ್ಲಿ ವಿದ್ಯಾಸಂಘ ಸಾಧಿಸಿದ ಸಾಧನೆಗಳನ್ನು ವಿವರಿಸಿದರು. ಅಲ್ಲದೆ ಈಗಿನ ಗೌಡ ವಿದ್ಯಾ ಸಂಘದ ಮುಂದಿನ ಅಂಗಣವನ್ನು ಡಾಂಬರೀಕರಣಗೊಳಿಸಲಾಗುವುದು, ಮೈಸೂರಿನ ಶಾಖೆಯ ಕಟ್ಟಡವನ್ನೂ ಪೂರೈಸಲಾಗುವುದು, ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ ನೀಡಲಾಗುವುದು ಎಂದರಲ್ಲದೆ ಈ ದಿಸೆಯಲ್ಲಿ ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಮಗಳಿಗೆ ವಿದ್ಯಾ ಸಂಘದ ಸರ್ವ ಸದಸ್ಯರು ಸಹಕಾರ ನೀಡಬೇಕೆಂದು ಕೋರಿದರು.

2001-02 ನೇ ಸಾಲಿನ ಆಡಿಟ್ ವರದಿಯನ್ನು ಮಂಡಿಸಲಾಗಿ ಇದರಲ್ಲಿ ರೂ 2000/- ವನ್ನೂ (ಹೊಸ ನಿರ್ವೇಶನದ ಕೇಸಿನ ಖರ್ಚು) ಆಡಳಿತ ಮಂಡಳಿ ಖರ್ಚು ಮಾಡದೆ ಇದ್ದರೂ ಸಹ ತಮ್ಮ ಸ್ವ ಇಚ್ಛೆಯಂತೆ ಖರ್ಚೆಂದು ತೋರಿಸಿದ್ದುದರಿಂದ ಲೆಕ್ಕ ಪರಿಶೋದನೆಯಲ್ಲಿ ತಪ್ಪು ಲೆಕ್ಕವನ್ನು ಕಾಣಿಸಲಾಗಿದೆಯೆಂದು ಶ್ರೀ ಅಮೆ ಶಿವಾರಾಮ್, ಡಾ|| ಪದ್ಮಾಜಿ, ಕೋಳುಮುಡಿಯನ ಅನಂತಕುಮಾರ್, ಸೂರ್ತಲೆ ಸೋಮಣ್ಣ, ಗುಡ್ಡೆಮನೆ ರಮೇಶ ಪಂಜಿಪುಳ್ಳ ವೆಂಕಪ್ಪ, ಸೂದನ ನಾಣಯ್ಯ, ಕುಯ್ಯಮುಡಿ ರಾಮಪ್ಪ, ಪಟ್ಟಡ ಪ್ರಭಾಕರ್, ಮೊಟ್ಟನ ಅಮೂಲ್ ಮತ್ತು ಇನ್ನು ಹಲವು ಮಂದಿ ಆಕ್ಷೇಪಣೆ ಎತ್ತಿದಲ್ಲೂ ಮಹಾ ಸಭೆಯು ಒಕ್ಕೊರಲಿನ ಬೆಂಬಲ ನೀಡಿತು ಮತ್ತು ತನ್ನ ಅಸಮಾಧಾನದ ಅಭಿಪ್ರಾಯವನ್ನು ಮಂಡಿಸುತ್ತಾ ಈ ಸಾಲಿನ ಆಡಿಟ್ ವರಿದಿಯನ್ನು ಅನೂರ್ಜಿತವೆಂದು ತೀರ್ಮಾನಿಸಿತು.

ಈ ಸಾಲಿನ ಆಡಿಟ್ ರಿಪ್ರೋರ್ಟ್ ನೀಡಿದ ಶ್ರೀ ಬಿ. ಎಂ. ದೇವಯ್ಯನವರು ಇದಕ್ಕೆ ಸಮ್ಮತಿಸಿ, ಸಂಬಂಧಿಸಿದ ಲೆಕ್ಕ ಪರಿಶೋದಕರಿಂದ ಈ ವ್ಯತ್ಯಾಸವನ್ನು ಸರಿಪಡಿಸಿ ಮುಂದೆ ಆಡಳಿತ ಮಂಡಳಿಗೆ ವರದಿಯನ್ನು ಒಪ್ಪಿಸುತ್ತೇನೆಂಬ ಜವಾಬ್ದಾರಿಯನ್ನು ತೆಗೆದುಕೊಂಡರು. 2000-01ನೇ ಸಾಲಿನ ಆಡಿಟ್ ವರದಿ ಸರಿಯಿಲ್ಲವೆಂದು ಮೈಸೂರು ತಂಡವು ಆ ಹಿಂದೆ ಆರೋಪಿಸಿ ಮರು ಲೆಕ್ಕ ಪರಿಸೋಧನೆಗೆ ಒತ್ತಾಯಿಸಿದ್ದುದರಿಂದ ಉತ್ಕೃಷ್ಟವಾಗಿ ಲೆಕ್ಕ ಪರಿಶೋಧಿಸಲು ಮೈಸೂರಿನ ಖ್ಯಾತ ಚಾರ್ಟೆಡ್ ಅಕೌಂಟೆಂಟ್ ಶ್ರೀ ಬಿದುರುಪಣೆ ದೇವಯ್ಯನವರಿಗೆಂದು ಒಪ್ಪಿಸಿದ್ದುದ್ದನ್ನು ಇಲ್ಲಿ ಸ್ಮರಿಸಬಹುದು.

ಇದೇ ಸಂದರ್ಭದಲ್ಲಿ ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯನವರು ಮಾತನಾಡಿ ಗೌಡ ಸಮಾಜವು ವಿದ್ಯಾ ಸಂಘಕ್ಕೆ ನೀಡಬೇಕಾಗಿರುವ ನೆಲಬಾಡಿಗೆ ಹಣದಲ್ಲಿ ರಿಯಾಯಿತಿ ತೋರಬೇಕೆಂದು ಸಮಾಜವು ಆರ್ಥಿಕ ದುಃಸ್ಥಿತಿಯಲ್ಲಿದೆ ಎಂದು ನಿವೇದನೆ ಮಾಡಿಕೊಂಡರು. ಆದರೆ ಮಹಾಸಭೆಯು ಅವರ ಮನವಿಯನ್ನು ತಿರಸ್ಕರಿಸಿ ಈಗ ತಾವು ಕೊಡುತ್ತಿರುವ ಮೊತ್ತ ಅಷ್ಟೇನೂ ಹೊರೆಯಾಗುವಂತಹದಲ್ಲ ಆದುದರಿಂದ ಈಗ ನಿಗದಿಯಾದ ದರವನ್ನೇ ನೀಡಬೇಕೆಂದು ತಿಳಿಸಿತು.

ಮೈಸೂರಿನ ಹೆಬ್ಬಾಳು ನಿವೇಶನವನ್ನು "ಕೊಡಗು ಗೌಡ ಸಂಘ" ಎಂಬುದಾಗಿ ನೋಂದಣಿ ಮಾಡಿ ಸದಸ್ಯತ್ವ ನೀಡುತ್ತಿದ್ದರ ಬಗ್ಗೆ ಮಹಾಸಭೆಯ ಗಮನಕ್ಕೆ ತಂದಾಗ ಹಲವಾರು ಅಭಿಪ್ರಾ.ಗಳು ಮೂಡಿಬಂದವು. ಆ ನಿವೇಶನದ ಖರೀದಿಗೆ ಮೈಸೂರಿನ ಗೌಡ ಬಾಂಧವರೆ ಹಣ ಹೊಂದಿಸಿಕೊಂಡ ಕಾರಣ ಮೈಸೂರಿನಲ್ಲಿ ಸಧ್ಯಕ್ಕೆ ಯಾವುದೇ ಸಮಾಜ ಅಸ್ತಿತ್ವದಲ್ಲಿ ಇಲ್ಲದೆ ಇರುವುದರಿಂದ ಆ ನಿವೇಸನವನ್ನು ಇನ್ನು ಮುಂದಕ್ಕೆ "ಕೊಡಗು ಗೌಡ ಸಮಾಜ" ಎಂದೇ ಕರೆದು ತಿದ್ದುಪಡಿ ಮಾಡಲು ಮಹಾಸಭೆಯು ಒಕ್ಕೊರಲಿನ ಅನುಮತಿ ನೀಡಿತು. ವಿದ್ಯಾ ಸಂಘದ ಅಧ್ಯಕ್ಷ ಹೊಸೂರು ರಮೇಶ್‌ರವರು ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರೆ ಕೆಲವೊಮ್ಮೆ ಅನುಭವಿ ಉಪಾಧ್ಯಕ್ಷರಾದ ಸೂರ್ತಲೆ ಸೋಮಣ್ಣನವರು ಸೂಕ್ತ ಸಮಜಾಯಿಷಿಕೆ ನೀಡುತ್ತಿದ್ದರು.

ಸಮಾರಂಭದಲ್ಲಿ ಮಡಿಕೇರಿ ಪುರಸಭಾಧ್ಯಕ್ಷರಾದ ಮಡಿಕೇರಿ ಪುರಸಭಾಧ್ಯಕ್ಷೆ ಕೂಡಕಂಡಿ ಕಾವೇರಮ್ಮನವರು, ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ತೋಟಂಬೈಲು ನಾಣಯ್ಯನವರು, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷರಾದ ಕೋರನ ಪೂಣಚ್ಚನವರು, ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್‌ನವರು, ಮಹಿಳಾ ಒಕ್ಕೂಟ ಅಧ್ಯಕ್ಷೆ ಚೀಯಂಡಿ ರಾಧ ಯಾದವನವರು ಹಾಗೂ ಗೌಡ ಮಾಜಿ ನೌಕರರ ಸಂಘದ ಅಧ್ಯಕ್ಷ ಸೂದನ ನಾಣಯ್ಯನವರು, ಜಿಲ್ಲಾ ಬಿಜೆಪಿ ಅಧ್ಯಕ್ಷ ಕೊಂಬಾರನ ಬೋಪಯ್ಯನವರು, ಕೊಡಗು ಸಂಗಾತಿ ಪತ್ರಿಕೆಯ ಗೌರವ ಸಂಪಾದಕ ಪಟ್ಟಡ ಪ್ರಭಾಕರನವರು ಅಲ್ಲದೆ ಕೊಡಗು ಗೌಡ ಸಂಘದ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು. ವಿದ್ಯಾ ಸಂಘದ ಕಾರ್ಯದರ್ಶಿ ಕುಡೆಕಲ್ಲು ವಿದ್ಯಾಧರ್ ವರದಿ ವಾಚಿಸಿದರು. ಪಂಜಿಪಳ್ಳ ಇಂದ್ರಾಕ್ಷಿ ಪ್ರಾರ್ಥಿಸಿದರೆ ಉಪಾಧ್ಯಕ್ಷ ಸೂರ್ತಲೆ ಸೋಮಣ್ಣನವರು ಸರ್ವರಿಗೂ ವಂದಿಸಿದರು.

-ಸಂಗಾತಿ

ಕೊಡಗು ಗೌಡ ಸಮಾಜ ವತಿಯಿಂದ ಅಭಿನಂದನಾ ಕಾರ್ಯಕ್ರಮ

ಕೊಡಗು ಜಿಲ್ಲೆ ಕರ್ನಾಟಕದ ಮುಕುಟ ಮಣಿ ಹೈಕೋರ್ಟು ನ್ಯಾಯಮೂರ್ತಿ ಹೆಚ್. ಎನ್. ನಾರಾಯಣ : ವೀರ ಯೋಧರ ನೆಲೆಬೀಡಾಗಿರುವ ಕೊಡಗು ಕರ್ನಾಟಕ ರಾಜ್ಯಕ್ಕೆ ಮುಕುಟವಿದ್ದಂತೆ ಎಂದು ರಾಜ್ಯ ಉಚ್ಛ ನ್ಯಾಯಾಲಯದ ನ್ಯಾಯಾಧೀಶ ಎಚ್. ಎನ್. ನಾರಾಯಣ ಅವರು ದಿನಾಂಕ 23-12-02 ರಂದು ಕೊಡಗು ಗೌಡ ಸಮಾಜ ವತಿಯಿಂದ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಲ್ಲಿ ಒಬ್ಬರಾಗಿ ಮಾತನಾಡುತ್ತ ಅಭಿಪ್ರಾಯಪಟ್ಟರು.

ದಕ್ಷಿಣ ಗಂಗೆ ಜೀವನದಿ ಕಾವೇರಿ ಉಗಮ ಸ್ಥಾನದಲ್ಲಿ ಜನಿಸಿದ ಜಿಲ್ಲೆಯ ಜನತೆ ಪುಣ್ಯಶಾಲಿ ಭಾಗ್ಯವಂತರು ಎಂದ ಅವರು ಇಲ್ಲಿನ ಜನರ ಆಚಾರ, ವಿಚಾರ, ಆತಿಥ್ಯ ಶೌರತ್ವದ ಬಗ್ಗೆ ತಮಗೆ ಸವಿಸ್ಥಾರವಾಗಿ ತಿಳಿದಿದೆ ಎಂದು ತಿಳಿಸಿದರು. ನಂತರ ಮಾತನಾಡುತ್ತ ಮನುಷ್ಯನಿಗೆ ಹಣ ಮುಖ್ಯ ಅಲ್ಲ ಆದರೆ ಬೇಕು. ಐಕ್ಯತೆ ಒಕ್ಕಲೀಕರಣಕ್ಕೆ ಒತ್ತು ನೀಡುತ್ತಾ ಸಮಾಜದ ಎತ್ತರಕ್ಕೆ ಏರಲು ವಿದ್ಯೆ ಬೇಕು. ವಿದ್ಯೆಯೇ ಮೇಲು ಹಾಗಾಗಿ ಶಾಲೆ ಸಂಸ್ಥೆಗಳನ್ನು ನಡೆಸಲು ಪ್ರಾರಂಭಿಸಬೇಕು ಎಂದು ಮನವಿ ಮಾಡಿದರು. ಕೊಡಗಿನಲ್ಲಿ ಅಮೂಲ್ಯವಾದ ಮುತ್ತು ರತ್ನಗಳು ಇನ್ನೂ ಬೇಕಾದಷ್ಟಿವೆ. ಅವುಗಳನ್ನು ಹೆಕ್ಕಿ ತೆಗೆಯಲು ಸಮಾಜಕ್ಕೆ ಒಂದಿಷ್ಟು ಸಮಯಾವಕಾಶ ಬೇಕೆನ್ನುತ ಮುಂದುವರಿದು ಮಾತನಾಡುತ್ತಾ ಇನ್ನು ಬಯಲು ಸೀಮೆಗೆ ಕೊಡಗಿನ ಜನರ ಒಳಪರಿಚಯ ಏನೇನೂ ತಿಳಿದಿಲ್ಲವೆಂದು ಇದಕ್ಕಾಗಿ ಒಕ್ಕಲಿಗರ ಸಂಘವು ತನ್ನ ಬಾಹುವನ್ನು ಇತ್ತ ಚಾಚಿ ಸಂಘ ಬೆಳೆಯಲು ಪ್ರಯತ್ನಿಸಿ ಮಾರ್ಗದರ್ಶನ ಮಾಡಬೇಕೆಂದು ಇನ್ನೊಬ್ಬ ಅತಿಥಿ ಒಕ್ಕಲಿಗರ ಸಂಘದ ಅಧ್ಯಕ್ಷ ಡಾ|| ವಿಠಲ ಅವರಿಗೆ ಇದೆ ಸಂದರ್ಭದಲ್ಲಿ ಮನವಿ ಮಾಡಿದರು.

ಜಿಲ್ಲೆಯ ಸಂಸ್ಕೃತಿ, ಕಲೆ, ತ್ಯಾಗ ದೇಶಕ್ಕೆ ಮಾದರಿ :

ಇನ್ನೊರ್ವ ಮುಖ್ಯ ಅತಿಥಿ ಒಕ್ಕಲಿಗರ ಸಂಘದ ಅಧ್ಯಕ್ಷ ಡಾ|| ವಿಠಲ ಅವರು ಮಾತನಾಡುತ್ತ ಜಿಲ್ಲೆಯಲ್ಲಿ ಹಲವಷ್ಟು ಅಮೂಲ್ಯ ಪ್ರತಿಭೆಗಳಿದ್ದು ಅವುಗಳನ್ನು ಆಯ್ದು ಸಮಾಜಕ್ಕೆ ಪರಿಚಯಿಸುವಂತಹ ದಿಟ್ಟಕ್ರಮವನ್ನು ಗೌಡ ಸಮಾಜ ಕೈಗೆತ್ತಿಕೊಂಡಿರುವುದು ಶ್ಲಾಘನೀಯ ಎಂದರಲ್ಲದೆ ಇನ್ನಷ್ಟು ಪ್ರತಿಭೆ ಜಿಲ್ಲೆಯಲ್ಲಿ ಸುಪ್ತವಾಗಿದ್ದು ಅವರ ಪ್ರತಿಭೆಗಳನ್ನು ಹೊರ ತರುವಲ್ಲಿ ಕಾರ್ಯೋನ್ಮುಖರಾಗಬೇಕಿದೆ ಎಂದು ಕರೆ ನೀಡಿದರು. ಮುಂದುವರಿದು ಜಿಲ್ಲೆಯಲ್ಲಿನ ಸಂಸ್ಕೃತಿ, ಕಲೆ, ತ್ಯಾಗ, ಮನೋ ಭಾವನೆ ಇಡೀ ರಾಷ್ಟ್ರಕ್ಕೆ ಮಾದರಿ ಎಂದು ಪ್ರಶಂಶಿಸಿದ ಅವರು, ಸಮಾಜದ ಏಳಿಗೆಗಾಗಿ ತಮ್ಮ ಸುಖ ಜೀವನವನ್ನು ತ್ಯಾಗ ಮಾಡಲು ಯುವ ಸಮುದಾಯ ಯಾವುದೇ ಕಾರಣಕ್ಕೂ ಹಿಂಜರಿಯಬಾರದು ಎಂದು ಹಿತ ನುಡಿದರು. ಮಹಿಳೆಯರನ್ನು ಉದ್ದೇಶಿಸಿ ಸ್ತ್ರೀಶಕ್ತಿ ಜಾಗೃತವಾದರೆ ಖಂಡಿತ ನಮ್ಮ ದೇಶ ಉದ್ಧಾರವಾಗಲು ನಾಂದಿಯಾಗುವುದಲ್ಲದೆ ಅದಕ್ಕೆ ಇಂದಿನ ಸಭೆಯಲ್ಲಿ ಗಂಡಸರಿಗಿಂತಲೂ ಹೆಂಗಸರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿರುವುದಕ್ಕೆ ಸ್ತ್ರೀಶಕ್ತಿ ತಾಂಡವವಾಡುತ್ತಿದೆ ಎಂದು ಹರ್ಷ ವ್ಯಕ್ತ ಪಡಿಸಿದರು. ಯುವಶಕ್ತಿಗಳು ಯಾವ್ಯಾವ ಕಾರ್ಯ ಕ್ಷೇತ್ರದಲ್ಲಿ ಹೋದರೆ ಏನಾಗುತ್ತಿದೆ ಅನ್ನುವ ಬಗ್ಗೆ ತಿಳುವಳಿಕೆ ನೀಡಲು ಸಮಾಜಗಳು ಕಾರ್ಯೋನ್ಮುಖರಾಗಬೇಕೆಂದು ಇದ ರಿಂದ ಕೇಂದ್ರ/ರಾಜ್ಯದ ಸ್ಪರ್ಧೆ ಇಲ್ಲದ ಕ್ಷೇತ್ರದಲ್ಲಿ ಮಾರ್ಗ ದರ್ಶನವಾಗುತ್ತದೆಂದು ತಿಳಿಸಿದರು. ಪ್ರತ್ಯೇಕ ಪ್ರತ್ಯೇಕವಾಗಿರುವ ಸಂಘ ಸಂಸ್ಥೆಗಳು ಒಟ್ಟಾಗಿ ಸಂಘಟನಾತ್ಮಕವಾಗಿ ಕಾರ್ಯ ಕ್ಷೇತ್ರಕ್ಕೆ ಇಳಿಯುವುದರೊಂದಿಗೆ ಸಮಾಜದ ಕೆಳಸ್ತರದಲ್ಲಿನ ಪ್ರತಿಭಾವಂತರಿಗೆ ಅನುಕೂಲವಾಗುವಂತೆ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಮುಂದಾಗಬೇಕೆಂದು ಸಮಾರಂಭದಲ್ಲಿ ಕರೆಯಿತ್ತರು.

ಸನ್ಮಾನಿತರ ಪರವಾಗಿ ಮಡಿಕೇರಿ ಪುರಸಭಾಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣನವರು ಹಾಗೂ ಇನ್ನೋರ್ವ ಸನ್ಮಾನಿತ ಮೈಸೂರಿನ ಅಮೆ ಶಿವರಾಯ್‌ನವರು ಮಾತ ನಾಡಿದರು. ಕಾವೇರಮ್ಮನವರು ಮಾತನಾಡುತ್ತ ನಾವುಗಳು ನಮ್ಮನ್ನ ಗುರ್ತಿಸಿ ಕೊಳ್ಳೊದಕ್ಕೆ ಸಂಸ್ಕೃತಿ, ಆಚಾರ, ವಿಚಾರ, ಉಡುಪು ಭಾಷೆಯನ್ನು ಯಾವತ್ತು ಬಿಡಬಾರದೆಂದು, ಇತ್ತೀಚೆಗೆ ಗಂಡಸರಿಗಿಂತ ಹೆಚ್ಚಿನ ಪ್ರಶಸ್ತಿ ಪತ್ರಗಳು ಗೌಡವತಿಯರಿಗೆ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಅಮೆಶಿವರಾಯ್ ಮಾತನಾಡುತ್ತ ನಮ್ಮ ಸಮಾಜ ನಮ್ಮ ಪ್ರತಿಭೆಯನ್ನು ಗುರ್ತಿಸಬೇಕಲ್ಲದೆ ನಾವ್ ಗುರ್ತಿಸಿಕೊಳ್ಳುವುದು ಸರಿಯಲ್ಲ, ನಮ್ಮಲ್ಲಿ ಶೀಲಾ, ಸಾಧನೆ, ಧ್ಯೇಯ ಸಮಯ ಪ್ರಜ್ಞೆ ಇರಬೇಕೆಂದು ಪತ್ರಕರ್ತರನ್ನೂ ಉದ್ದೇಶಿಸಿ ಹಿತವಚನ ನೀಡಿದರು. ಲೋಕವು ಈಗ ಮನೋವೇಗದಲ್ಲಿ ಯಾವ ರೀತಿಯಲ್ಲಿ ಈ ಸ್ಪರ್ಧಾ ಪ್ರಪಂಚದಲ್ಲಿ ಮುನ್ನುಗ್ಗಬೇಕು, ಜನಾಂಗದವರನ್ನೂ ಹೇಗೆ ಮೇಲತ್ತಬೇಕು, ನಮ್ಮವರನ್ನು ಹೊರ ಪ್ರಪಂಚಕ್ಕೆ ಹೇಗೆ ಪರಿಚಯಿಸಬೇಕು, ನಮ್ಮನ್ನ ನಾವ್ ಕೀಳರಿಮೆಯಿಂದ ಕಾಣುವುದು ಸರಿಯಲ್ಲ, ಆಚಾರ ವಿಚಾರ, ಉಡುಗೆ ತೊಡುಗೆ ಭಾಷೆ ಮೂಲಕ ನಮ್ಮನ್ನ ನಾವ್ ಗುರ್ತಿಸಬೇಕೆಂದು ತಮ್ಮದೆ ಆದ ದಾಟಿಯಲ್ಲಿ ವಿವರಿಸಿದರು.

ಹಾಲಿ ಸಮಾಜದ ಅಧ್ಯಕ್ಷ ತೋಟಂಬೈಲು ನಾಣಯ್ಯನವರು ಮಾತನಾಡುತ್ತಾ ಎಲ್ಲಾ ಪ್ರತಿಭೆಗಳನ್ನು ಒಮ್ಮೆಗೆ ಹೆಕ್ಕಲು ಕಷ್ಟಕರವಾಗುತ್ತದೆ. ನಿಧಾನವಾಗಿ ಎಲ್ಲಾ ಪ್ರತಿಭಾವಂತರನ್ನು ಗುರ್ತಿಸಿ ಸನ್ಮಾನಿಸಲು ಸಮಾಜ ಖಂಡಿತ ಇಚ್ಛಿಸುತ್ತದೆಯೆಂದರು. ಕರ್ನಾಟಕದ ಜನಸಂಖ್ಯೆಯಲ್ಲಿ ಒಕ್ಕಲಿಗರು ಇಂದು ಒಂದು ಕೋಟಿಗಿಂತಲೂ ಹೆಚ್ಚಿನದಾಗಿದ್ದು, ಬಲಾಢ್ಯವಾದ ಕೋಮುಗಳಲ್ಲಿ ಒಂದಾಗಿದ್ದಾರೆ. ನಮ್ಮನ್ನ ಒಕ್ಕಲಿಗರಲ್ಲಿ ಗುರ್ತಿಸಿಕೊಳ್ಳುವುದಕ್ಕೆ ನಾವಿಂದು ವಿಫಲ

ರಾಗಿದ್ದೇವೆ. ನಮ್ಮನ್ನ ನಾವ್ ಪರಿಚಯಿಸಿಕೊಳ್ಳಲು ಮುಖ್ಯ ಅತಿಥಿಗಳನ್ನು ಹೊರಗಿನಿಂದ ಬರಮಾಡಿದ್ದೇವೆ. ನಮ್ಮ ಕೊಡಗಿನ ಪರಿಚಯ ಹೊರ ಸ್ಥಳಗಳಲ್ಲಿ ಇದರಿಂದ ಖಂಡಿತ ಆಗಲು ಸಾಧ್ಯವಿದೆ. ಆರ್ಥಿಕವಾಗಿ ಸಮಾಜಿಕವಾಗಿ, ಶೈಕ್ಷಣಿಕವಾಗಿ ನಾವಿಂದು ಬಹಳ ಹಿಂದುಳಿದಿದ್ದೇವೆ. ವಿದ್ಯೆಯಲ್ಲಿ ಬಹಳ ಹಿಂದುಳಿದಿದ್ದು ಉತ್ತಮ ಅವಕಾಶಕ್ಕಾಗಿ ನಾವಿಂದು ಕಾಯಬೇಕಾಗಿದೆ. ಸರ್ಕಾರ ರೈತರ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಲಿಲ್ಲ. ಇದೆಲ್ಲಾ ವಿದ್ಯಾ ಕ್ಷೇತ್ರದಲ್ಲಿ ನಾವ್ ಮುಂದುವರಿದರೆ ಮಾತ್ರ ಸಾಧ್ಯವೆಂದು, ಅನಾಥರನ್ನು, ಬಡವರನ್ನು ಗುರ್ತಿಸಿ ಅವರಿಗೆ ವಿದ್ಯೆ ನೀಡಬೇಕು, ಮಹಿಳೆ ಮುಂದೆ ಬಂದರೆ ಇಡೀ ಕುಟುಂಬವೇ ಮುಂದೆ ಬಂದ ಹಾಗೆ, ನಮ್ಮ ಸಮುದಾಯ ಖಂಡಿತ ಮುಂದುವರಿಯುವುದರಲ್ಲಿ ಸಂಶಯವಿಲ್ಲ, ರಾಜಕೀಯವಾಗಿ ನಮ್ಮಲ್ಲಿಂದ ಯಾರು ಪ್ರತಿನಿಧಿಗಳು ಇಲ್ಲವೆಂದು ತಮ್ಮ ಖೇದವನ್ನು ವ್ಯಕ್ತ ಪಡಿಸುತ್ತಾ ಇವುಗಳ ಕೊರತೆಯನ್ನು ಇನ್ಮುಂದೆಯಾದರೂ ಅರಿತು ಮುಂದುವರಿಯಬೇಕು ಆ ನಿಟ್ಟಿನಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಬೇಕು. ನಮ್ಮ ಸಮಾಜ ಬಂದ ಮ್ಯಾಲೆ ಕೋಮು ವಾದಿಯೆಂದು ಗುರ್ತಿಸಿಕೊಳ್ಳುವ ಪರಿಸ್ಥಿತಿ ಬಂತು, ಕೊಡಗಿನಲ್ಲಿ ನಾವುಗಳು ಅವಕಾಶ ವಂಚಿತರಾಗಿದ್ದೇವೆ. ಕೊಡಗಿನ ಜನಸಂಖ್ಯೆಯಲ್ಲಿ ಹೆಚ್ಚಿನವರು ನಮ್ಮವರಾಗಿದ್ದು ಮುಂದೆ ಏಕೈಕ ಮುಖ್ಯ ಜನಾಂಗವಾಗಿ ಬೆಳೆಬೇಕೆಂದು ತಮ್ಮ ಅಳಲನ್ನು ತೋಡಿಕೊಂಡರು.

ಅತಿಥಿಗಳನ್ನು ತೋಟಂಬೈಲು ನಾಣಯ್ಯನವರು ಶಾಲು ಹೊದಿಸಿ ಸನ್ಮಾನಿಸಿದರು. ಸನ್ಮಾನ ಸಮಾರಂಭದಲ್ಲಿ ಕೂಡಕಂಡಿ ಕಾವೇರಮ್ಮ ಸೋಮಣ್ಣ ತೆಕ್ಕಡೆ ಜಯಶೀಲಾ ಮುತ್ತಣ್ಣ, ಡಾ|| ಕಾವೇರಿ ಮನೆ ಬೋಜಪ್ಪ, ಡಾ||ಕುಂಞ್ಞಾಳಿ ಬೋಪಣ್ಣ, ಚೀಯಂಡಿರ ಬಸಪ್ಪ, ಕೆದಂಬಾಡಿ ನಂದ ಗೋಪಾಲ, ಕಾಳೇರಮ್ಮನ ನಾಣಯ್ಯ, ಸಂಪಾಜೆ ದೇವಿಪ್ರಸಾದ್, ದೇವಜನ ಧನಂಜಯ, ಅಮೆ ಸೀತಾರಾಮ್, ಅಮೆ ಶಿವರಾಯ್, ಸಿರಕಜೆ ಭರತ್, ದಂಬೆಕೋಡಿ ಆನಂದ, ತೋಟಂಬೈಲು ಮುದ್ದಪ್ಪ, ಕೂಡಕಂಡಿ ಗಣಪತಿ, ಪಾಣತ್ತಲೆ ರಾಮಯ್ಯ, ಕೂಡಕಂಡಿ ಸೋಮಣ್ಣ, ಬೆಪ್ಪುರನ ಅಣ್ಣಪ್ಪ ಕುಮಾರ್, ಕಾಳೇರಮ್ಮನ ರಾಯ್ ಪಾಲಾಕ್ಷ, ತಳೂರು ಕಲ್ಪನಾಥ, ಕು|| ಹುಲಿಮನೆ ಮಂಜುಳಾ ಹಾಗೂ ಕು|| ನಾಟೋಳನ ಹೇಮಲತ ಇವರುಗಳನ್ನು ಸಮಾಜವು ಶಾಲು ಹೊದಿಸಿ ಫಲ ಪುಷ್ಪ ನೀಡಿ ಸನ್ಮಾನಿಸಿತು.

ಉಪಾಧ್ಯಕ್ಷರಾದ ಕೋರನ ಪೂಣಚ್ಚನವರು ಸ್ವಾಗತಿಸಿದರು. ಸುಳ್ಯದ ಯಂ. ಬಿ. ಸದಾಶಿವರ ಅತ್ಯುತ್ತಮ ನಿರೂಪಣೆ ಜನರನ್ನು ಮೂಕ ವಿಸ್ಮಿತರನ್ನಾಗಿರಿಸಿದರೆ, ಕರ್ಣೇಯ್ಯನ ಸುಶೀಲಾ ವಿಶ್ವನಾಥ್ ಪ್ರಾರ್ಥಿಸಿದರು. ಕೊನೆಯಲ್ಲಿ ಪೈಕೇರ ಅನಂತ್ ರಾಮ್‌ನವರು ಸರ್ವರನ್ನೂ ವಂದಿಸಿದರು.

ವರದಿ -ಸಂಗಾತಿ

ಪೂಮಾಲೆ ಕುಡಿಯ ಜನಾಂಗದ ಕ್ರೀಡೋತ್ಸವ

ವೈವಿಧ್ಯಮಯ ಸಂಸ್ಕೃತಿಯ ನೆಲೆಬೀಡಾದ ಕೊಡಗಿನ ಮೂಲ ಜನಾಂಗದವರಾದ ಪೂಮಾಲೆ ಕುಡಿಯ ಜನಾಂಗದವರಿಗಾಗಿ ಮಡಿಕೇರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಎರಡು ದಿನಗಳ ಕ್ರೀಡಾ ಕೂಟವು ಇತ್ತೀಚೆಗೆ ನಡೆಯಿತು. ಜನಾಂಗದ ಐದನೇ ವರ್ಷದ ಈ ಕ್ರೀಡಾ ಕೂಟಕ್ಕೆ ಜಿಲ್ಲೆಯ ವಿವಿಧ ಭಾಗಗಳಿಂದ ಸುಮಾರು 300 ಕ್ಕೂ ಹೆಚ್ಚು ಜನರೂ ಆಗಮಿಸಿ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಂಡು ತಮ್ಮ ಸಂತಸ ಮತ್ತು ಐಕ್ಯತೆಯನ್ನು ಮರೆಯುವಲ್ಲಿ ಸಫಲರಾದರು.

ಬಳಿಕ ನಡೆದ ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದ ಗಣ್ಯರು ತಮ್ಮ ಜನಾಂಗದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಂಘಟಿತರಾಗಬೇಕಾದ ಅಗತ್ಯತೆಗೆ ಕರೆ ಕೊಟ್ಟರು. ಕ್ರೀಡೆಯಲ್ಲಿ ಫುಟ್ಬಾಲ್, ವಾಲಿಬಾಲ್ , ಥ್ರೋಬಾಲ್, ಅಥ್ಲೆಟಿಕ್ಸ್ ಸೇರಿದಂತೆ ಹಲವು ಕ್ರೀಡೆಗಳಿದ್ದವು. ಗ್ರಾಮೀಣ ಪ್ರದೇಶದಿಂದ ಬಂದ ಯುವಕ ಯುವತಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಜಿಲ್ಲೆಯ 16 ಕುಟುಂಬಗಳಿಂದ 250 ಕ್ಕೂ ಮಿಕ್ಕಿ ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಪೂಮಾಲೆ ಕುಡಿಯ ಸರ್ವಾಂಗೀಣ ಅಭಿವೃದ್ಧಿ ಸಮಾಜದ ಅಧ್ಯಕ್ಷ ಕೆ. ಎ. ಕಿಶೋರ್‌ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೆ. ಎ. ಮುತ್ತಪ್ಪ, ಕೆ. ಕೆ. ಅಪ್ಪಯ್ಯ, ಕೆ. ಬಿ. ಅಪ್ಪಚ್ಚು, ಕೆ. ಕೆ. ಪಾರ್ವತಿ, ಕೆ. ಕಾವೇರಮ್ಮ ಮೊದಲಾದವರು, ಭಾಗವಹಿಸಿ ಮಾತನಾಡಿದರು. ಸಮಾಜದಲ್ಲಿ ತುಳಿತಕ್ಕೊಳಗಾಗಿರುವ ಕುಡಿಯ ಜನಾಂಗವು ಅರ್ಹ ಸವಲತ್ತುಗಳನ್ನು ಪಡೆಯುವ ಮೂಲಕ ಅಭಿವೃದ್ಧಿ ಹೊಂದಲು ಕರೆ ನೀಡಿದರಲ್ಲದೆ ಜನಾಂಗದ ಸಂಸ್ಕೃತಿಯನ್ನು ಶಾಶ್ವತವಾಗಿ ಉಳಿಸಿಕೊಳ್ಳುವಂತೆ ಕರೆಯಿತ್ತರು. ಸಂಸ್ಕೃತಿ ಪರಂಪರೆ ಬಿಂಬಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. 1837 ರಲ್ಲಿ ನಡೆದ ಕೆನರಾ ಬಂಡಾಯದಲ್ಲಿ ಕರ್ತು ಮತ್ತು ಉತ್ತು ಕುಡಿಯರೆಂಬ ವೀರರು ಭಾಗವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

-ಸಂಗಾತಿ

ಮದೆ ಪಂಚಾಯಿತಿ ಅಧ್ಯಕ್ಷರಾಗಿ ಪಟ್ಟಡ ಮುತ್ತಣ್ಣ ಉಲ್ಲಾಸ್ ಆಯ್ಕೆ



ಮದೆ ಮಂಡಲ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಪಟ್ಟಡ ಉಲ್ಲಾಸ್ ನವರು ಆಯ್ಕೆಗೊಂಡಿರುತ್ತಾರೆ. 12ಮಂದಿ ಸದಸ್ಯರಿರುವ ಪಂಚಾಯತ್‌ನಲ್ಲಿ ಉಲ್ಲಾಸ ನವರು 7ಮತಗಳನ್ನು ಪಡೆದು ವಿಜಯಿಯಾದರೆ ಪ್ರತಿಸ್ಪರ್ಧಿ ರಘು ಮಾರ್ಲ ಅವರಿಗೆ 4ಮತಗಳು ಲಭ್ಯವಾಗಿ ಸೋಲು ಅನುಭವಿಸಿದರು. ಉಪಾಧ್ಯಕ್ಷರಾಗಿ ದೇವಕ್ಕಿಯವರು ಅವಿರೋಧವಾಗಿ ಆಯ್ಕೆಗೊಂಡರು.

-ಪಟ್ಟಡ ಶಿವಕುಮಾರ್, ಮದೆ.

ಲೋಟವಾಗಬೇಡ - ಕೆರೆಯಾಗು

ಒಂದಾನೊಂದು ಗುರುಕುಲದಲ್ಲಿ ಯುವಕ ಶಿಷ್ಯನೊಬ್ಬ ಬಾಳಿನ ಘಟನೆಗಳಿಂದ ಬೇಸರಗೊಂಡು ಚಿಂತೆಗೊಂಡಿದ್ದ. ಅನೇಕ ದಿನಗಳಿಂದ ಆತನನ್ನು ಗಮನಿಸಿದ್ದ ಗುರುಗಳು ಆತನನ್ನು ತಮ್ಮ ಬಳಿಗೆ ಕರೆಯಿಸಿಕೊಂಡರು. ಗುರುಗಳು ಆತನನ್ನುದ್ದೇಶಿಸಿ - "ಶಿಷ್ಯಾ ಒಂದು ಲೋಟ ನೀರಿಗೆ ಈ ಒಂದು ಹಿಡಿ ಉಪ್ಪನ್ನು ಹಾಕು" ಎಂದು ಆದೇಶಿಸಿದರು. ಶಿಷ್ಯ ಹಾಗೆಯೇ ಮಾಡಿದ. "ಈಗ ಅದನ್ನು ಕುಡಿ" ಎಂದರು ಗುರುಗಳು. ಶಿಷ್ಯ ಕುಡಿದು, ಉಪ್ಪು ಮುಟ್ಟಿದ್ದರಿಂದ ಮುಖ ಕಿವಿಚಿಕೊಂಡ. ಗುರುಗಳು ನಸುನಗುತ್ತಾ ಕುಟೀರದಿಂದ ಹೊರ ನಡೆದರು. ಶಿಷ್ಯ ಹಿಂಬಾಲಿಸಿದ. ಗುರು ಶಿಷ್ಯರು ಕೆರೆಯ ದಂಡೆಯ ಮೇಲೆ ನಡೆದು ಬರುತ್ತಿರಲು ಗುರುವು ಮತ್ತೊಂದು ಹಿಡಿ ಉಪ್ಪನ್ನು ಹೊರತೆಗೆದು ಕೆರೆಯ ನೀರಿಗೆ ಬಿಸಾಡಿದರು. "ಶಿಷ್ಯಾ ಈ ಕೆರೆಯಿಂದ ನೀರನ್ನು ಕುಡಿ" ಎಂದು ಹೇಳಿದರು. ಶಿಷ್ಯ ಬಾಗಿ ನಿಂತು ಬೊಗಸೆಯಲ್ಲಿ ಕೆರೆಯ ನೀರನ್ನು ಕುಡಿಯತೊಡಗಿದ.

"ಈ ನೀರಿನ ರುಚಿ ಹೇಗಿದೆ ಶಿಷ್ಯಾ" ಗುರುಗಳು ಪ್ರಶ್ನಿಸಿದರು.

"ಸಿಹಿಯಾಗಿದೆ ಗುರುವರ್ಯ" ಎಂದನು ಶಿಷ್ಯ.

"ಈ ನೀರಿನಲ್ಲಿ ಉಪ್ಪು ಮುಟ್ಟಲಿಲ್ಲವೆ ನಿನಗೆ ?"

"ಇಲ್ಲ" ಎಂದು ಉತ್ತರಿಸಿದ ಶಿಷ್ಯ.

ಗುರುಗಳು ನಿಧಾನವಾಗಿ ನಡೆದು ಸಮೀಪದ ದಂಡೆಯ ಮೇಲೆ ಕುಳಿತುಕೊಂಡರು. ಶಿಷ್ಯ ಕೈಕಟ್ಟಿ ನಿಂತ. ಗುರುಗಳು ಈ ರೀತಿ ನುಡಿದರು : "ಬಾಳಿನಲ್ಲಿ ನಮಗೆ ಬರುವ ನೋವು-ಉಪ್ಪು, ಹೆಚ್ಚೂ ಇಲ್ಲ, ಕಡಿಮೆಯೂ ಆಗುವುದಿಲ್ಲ. ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಸಂದಿಗ್ಧ ಪರಿಸ್ಥಿತಿ, ಒಂದಲ್ಲ ಒಂದು ನೋವು, ದುಃಖ ಸರಿಸಮಾನವಾಗಿ ಬಂದಿರುತ್ತದೆ. ಬಾಳಿನ ನೋವು-ಎಂಬ ಉಪ್ಪನ್ನು ಯಾವ ರೀತಿ ನಾವು ಸೇವಿಸಬಯಸುತ್ತೇವೆ ! ಅದು ಮುಖ್ಯ. ಚಿಕ್ಕ ಲೋಟದಲ್ಲೇ ಸೇವಿಸಿದರೆ ಕಹಿ ಅನುಭವ ಹೆಚ್ಚು. ನೋವನ್ನು ಬದಿಗೊತ್ತಿ ಬಾಳಿನಲ್ಲಿ ನಡೆಯುತ್ತಿರುವ 90% ಸುಖದಿಂದ ತೃಪ್ತಿ ಹೊಂದುವ ಮನೋಭಾವ ಬೆಳೆಸಿಕೊಂಡವನು ನಿಜವಾದ ಜ್ಞಾನಿಯಾಗುತ್ತಾನೆ. ಆದ್ದರಿಂದ ನೀನು ಲೋಟವಾಗದಿರು - ಕೆರೆಯಾಗು" ಎಂದರು.

-ಎಡಿಕೇರಿ ಸುದರ್ಶನ್, ಬೆಂಗಳೂರು.

ಕೊಡಗು ಸಂಗಾತಿ ಚಂದಾ ಹಣವನ್ನು ವಾಯಿದೆಗೆ
ಮೊದಲು ನೀಡಿದವರು ಸರ್ವೋತ್ತಮರು
ಕೊಡಗು ಸಂಗಾತಿ ಚಂದಾ ಹಣವನ್ನು ವಾಯಿದೆಗೆ ಸ್ವಲ್ಪ
ಹಿಂದೆ / ಮುಂದೆ ನೀಡಿದವರು ಉತ್ತಮರು
ಕೊಡಗು ಸಂಗಾತಿ ಚಂದಾ ಹಣವನ್ನು ವಾಯಿದೆ ಮೀರಿ
3 ತಿಂಗಳೊಳಗೆ ನೀಡುವವರು ಮಧ್ಯಮರು
ಕೊಡಗು ಸಂಗಾತಿ ಜ್ಞಾಪನ ಪತ್ರ ಕಳುಹಿಸಿ ಕಳುಹಿಸಿ
ನೀಡದೆ ಬಾಕಿ ಇರಿಸಿಕೊಂಡವರು ?

---

15 ನೇ ಪುಟದಿಂದ

ಕಲಾವೆಷ್ಟನಮ್	-	Outer wall
ಸೂಕ್ಷ್ಮಪತ್ರಕಮ್	-	Inner wall
ರಂಜಕಯುಕ್ತಾರಸಾಶ್ರಯಿ	-	Sap with colouring matter
ಅನ್‌ವಕ್ಷಾ	-	ಬರೀಗಣ್ಣಿಂದ ನೋಡುವಂತಾದ್ದು

ಸಸ್ಯಗಳ್‌ಲಿ ಕೆಲವು ಮಧುಕೋಶದಂತ ರಚನೆಗ ಉಟ್ಟುತಷ್ಟೇ ರಾಬರ್ಟ್ ಹುಕ್ ಹೇಳ್ಡ್. ವನಸ್ಪತಿಗ ಮಣ್‌ಂದ ದ್ರವಪದಾರ್ಥನ ಹೀರಿಕಂಡವತ್ತೇಳ್ದು ನಮ್ಮ ಪೂರ್ವಿಕರಿಗೆ ಲಾಯಿಕ ಗೊತ್ತಿತ್ತ್. ವೃಕ್ಷದ ಪರ್ಯಾಯ ಪದ "ಪಾದಪ" ತೇಳಿ. "ಪಾದ್ಯೈಃ ಪಿಬತಿ ಇತಿ ಪಾದಪಃ" ಬೇರ್‌ಂದ ನೀರ್‌ನ ಹೀರುವೆ. ಅದಕೆ ಪಾದಪತ ಹೆಸ್ರ್.

ಈ ವಿಷಯಲಿ ಮಹಾಭಾರತ ಹಿಂಗೆ ಹೇಳ್ದೆ.

"ವಕ್ತ್ರೇಣೋತ್ಪಲನಾಲೇನ ಯಥೋರ್ಧ್ವಂ ಜಲಮಾದದೇತ್ ।
ತಥಾ ಪವನ ಸಂಯುಕ್ತಃ ಪಾದ್ಯೈಃ ಪಿಬತಿ ಪಾದಪಃ ॥

ಆಧುನಿಕ ವಿಜ್ಞಾನಲಿ ಸಸ್ಯಗಳ ನೀರು ಹೀರುವಿಕೆನ Suction Forceತ ಹೇಳುವೆ. ಈ ಸಿದ್ಧಾಂತನ ಕ್ರಿ. ಶ. 1894ರ್‌ಲಿ ಅಮೇರಿಕಾದ ಡಿಕ್ಸನ್ ಹಾಗು ಜಾಲಿತ್ತೇಳುವ ವಿಜ್ಞಾನಿಗ ಕಂಡ್ ಹಿಡ್ಡೊ. ಈ ರೀತಿ ನಮ್ಮ ಪ್ರಾಚೀನರ್ ಆಧುನಿಕ ಉಪಕರಣ ಇನ್ನೂ ಹುಟ್ಟದಿದ್ದ ಕಾಲಲಿ ತಮ್ಮ ವಿಶಿಷ್ಟ ಪ್ರತಿಭೆಂದ ಹಲವಾರು ವೈಜ್ಞಾನಿಕ ಅಂಶಗಳ್ನ ಕಂಡ್‌ಹಿಡ್ದ್ ತಮ್ಮ ಗ್ರಂಥಗಳ್‌ಲಿ ನಿರೂಪಿಸ್ಯೊಳೊ.

-ಬಿಟ್ಟೀರ ಚೋಂದಮ್ಮ ಶಂಭು, (ಮುಂದುವರ್ದದೆ)

ನಗೆಹನಿ

ಶಾಂತಮ್ಮನ ಮನೆಗೆ ಯಾಗೊಳು ಬರುವಂಗೆ ಒಂದು ಹೈದ ಅಂದ್‌ಸ ಶಾಂತಮ್ಮನ ಮಗಳ್ನ ನೋಡಿಕೆ ಬಾತ್. ಶಾಂತಮ್ಮ ಕಂಬಿ ಇಲ್ಲದ ರೈಲ್ ಬಿಡ್ದು ಸ್ವಲ್ಪ ಜಾಸ್ತಿತನೇ ಹೇಳಕ್, ಸುಳ್ಳು ಹೇಳ್ದು. ಹಂಗೆ ಆ ಹೈದನೊಟ್ಟಿಗೇಸ ಅವಳ ರೈಲ್‌ನ ಬಿಡ್‌ಕೆ ಶುರು ಮಾಡ್ತ್.

ನನ್ನ ಮಗ್ಳು ನಡ್ದರೆ ಹಂಸದಂಗೆ, ಕುಣ್ದರೆ ನವಿಲ್ನಂಗೆ, ಹಾಡ್‌ರೆ ಕೋಗಿಲೆಹಂಗೆ, ಓಡ್‌ರೆ ಜಿಂಕೆಯಂಗೆ, ಹಂಗೆ, ಹಿಂಗೆತ ಹೇಳಿಕಂಡೆ ಇತ್ತ್. ಅಷ್ಟೊತ್ತಿಗೆ ಅವಳ ಮಗ್ಳುನ ನೋಡಿಕೆ ಬಂದ ಹೈದಂಗೆ ಕೇಳಿ ಕೇಳಿ ಸಾಕಾಗಿ ಇನ್ನ್ ಸುಮ್ಮನಿದ್ದರೆ ಇನ್ನ್ ಯಾವ್ಯಾವ ಪ್ರಾಣಿ ಪಕ್ಷಿನ ಇವಳ್ಗೆ ಹೋಲ್ಸಿ ಹೇಳ್‌ದೆಂತ ನಿಮ್ಮ ಮಗ್ಳಿಗೆ ಮನ್ಸಂಗೆ ಇರ್‌ಕಾದ ಗುಣ ಯಾವುದೂ ಇಲ್ಲೆ ಕಂಡದೆ. ಅವುಳ್ನ ಎಲ್ಲಾರ್ ಮಾತಾಡ್‌ಸಿರೆ ಸಿಂಹ ಗರ್ಜಿಸಿದಂಗೆ ಇರ್ದೇನೊ ಅಂತ ತಿಳ್‌ಕಂಡ್ ನಿಮ್ಮ ಮಗ್ಳು ನಂಗೆ ಬೇಡ ಎಂದ್ ಹೇಳಿ ಹೊರಟ್ ಹೋತು.

ಹೈದ ಹೇಳ್ದ ಮಾತ್‌ನ ಕೇಳಿ ಗೂಡೆನ ಅಮ್ಮ ಮಾತೇ ಬರದಂಗೆ ಕುದ್ದತ್.

-ಕೊಂಪುಳಿರ ಸಿ. ರಶ್ಮಿ, (ರವಿಕಲ) ವಿಜಯನಗರ, ಮೈಸೂರು.

ಒಕ್ಕಲಿಗ ಗೌಡರಿಗೆ ಕಾಲಭೈರವ ಹೇಗೋ ಹಾಗೇ ಗೌಡರಿಗೆ ಕೆಂಚಿರಾಯ, ಆತನನ್ನು ನೆನೆಯುತ್ತಿರು

ಅಯ್ಯಂಡ್ರ ಎ. ಸುಬ್ರಾಯ
ನಿವೃತ್ತ ಸುಭೇದಾರ್ ಮೇಜರ್



ನಿಧನ : ಕೃತಜ್ಞತೆ

ಅಯ್ಯಂಡ್ರ ಎ. ಸುಬ್ರಾಯನವರು ನಿಧನ ಹೊಂದಿದ ಸಂದರ್ಭದಲ್ಲಿ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡು ಸಹಕರಿಸಿದ ಕುಟುಂಬಸ್ಥರಿಗೂ ಗ್ರಾಮಸ್ಥರಿಗೂ ಹಾಗೂ ಬಂಧು ಮಿತ್ರರಿಗೂ ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

ಜನನ : 20-5-1937
ಮರಣ : 11-12-2002

ದುಃಖತಪ್ತ ಪತ್ನಿ : ಲೀಲಾ, ಮಕ್ಕಳು,
ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ವೈಕುಂಠವಾಸಿಯಾದವರು

ಮಡಿಕೇರಿ ತಾಲ್ಲೂಕು ಮರಂದೊಡ ಗ್ರಾಮದ ಬಾರಿಕೆ ಧನುರವರು 8-12-2002 ರಂದು ನಿಧನರಾದರು. ಮೃತರಿಗೆ 29 ವರ್ಷ ಪ್ರಾಯವಾಗಿತ್ತು. ಮೃತರು ತಾಯಿ ಹಾಗೂ ಅಪಾರ ಸಂಸಾರವನ್ನು ಆಗಲಿದ್ದಾರೆ.

ಆಲೂರು ಸಿದ್ದಾಪುರ ಗ್ರಾಮದ ನಿವಾಸಿ ಸೂದನ ಜಯಪ್ರಕಾಶ್ (48) ಅವರು 16-12-2002 ರಂದು ನಿಧನರಾದರು. ಮೃತರು ಪತ್ನಿ ಓರ್ವ ಪುತ್ರ ಹಾಗೂ ಪುತ್ರಿಯನ್ನು ಹಾಗೂ ಅಪಾರ ಬಂಧು ವರ್ಗವನ್ನು ಆಗಲಿದ್ದಾರೆ.

ಮೈಸೂರು ನಿವಾಸಿ ಉಳುವಾರನ ಅಪ್ಪಯ್ಯ (ಗಿರೀಶ್) ನವರು ದಿನಾಂಕ 17-12-2002 ರಂದು ನಿಧನರಾದರು. ಮೃತರು ತಾಯಿ, ಪತ್ನಿ ಇಬ್ಬರು ಮಕ್ಕಳು ಅಪಾರ ಬಂಧು ವರ್ಗವನ್ನು ಆಗಲಿದ್ದಾರೆ. ಇವರಿಗೆ 43 ವರ್ಷ ಪ್ರಾಯವಾಗಿತ್ತು. ಮೃತರ ಅಂತ್ಯಕ್ರಿಯೆಯು ಮೈಸೂರಿನ ಗೋಕುಲಂನಲ್ಲಿರುವ "ಚಿರಶಾಂತಿ ಧಾಮ" ದಲ್ಲಿ ನಡೆಯಿತು.

ಮದೆ ನಾಡು ನಿವಾಸಿ ಮದೆ ಮಹೇಶ್ವರ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ತೊತ್ತಿಯನ ಯು. ಮಂದಣ್ಣನವರು ದಿನಾಂಕ 25-12-2002 ರಂದು ನಿಧನರಾದರು. ದಿವಂಗತರಿಗೆ 59 ವರ್ಷ ಪ್ರಾಯವಾಗಿತ್ತು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಆಗಲಿದ್ದಾರೆ.

ಚೇರಳ ಶ್ರೀಮಂಗಲ ಗ್ರಾಮದ ಅಯ್ಯಂಡ್ರ ಎ. ಸುಬ್ರಾಯನವರು ದಿನಾಂಕ 11-12-2002 ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 65 ವರ್ಷ ಪ್ರಾಯವಾಗಿತ್ತು. ಪತ್ನಿ ಮಕ್ಕಳು ಹಾಗೂ ಅಪಾರ ಬಂಧುವರ್ಗದವರನ್ನು ಆಗಲಿದ್ದಾರೆ.

ಉಳುವಾರನ ಅಪ್ಪಯ್ಯ (ಗಿರೀಶ್)



ಹೃತ್ಪೂರ್ವಕ ಕೃತಜ್ಞತೆ

ದಿವಂಗತ ಮಾದಯ್ಯನವರ ಪ್ರಥಮ ಪುತ್ರ ಉಳುವಾರನ ಅಪ್ಪಯ್ಯ (ಗಿರೀಶ್) ಅವರು ತಾ. 17-12-2002ರಂದು ಮಂಡ್ಯ ಬಳಿ ಅಕಾಲಿಕ ಮರಣ ಹೊಂದಿದ ಸಂದರ್ಭದಲ್ಲಿ ಬಂದು ಸಹಕರಿಸಿದ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಮ್ಮ ದುಃಖದಲ್ಲಿ ಪಾಲ್ಗೊಂಡು ಸಂತೈಸಿದ ಎಲ್ಲ ಬಂಧು ಮಿತ್ರರಿಗೂ, ಹಿತೈಷಿಗಳಿಗೂ, ಕುಟುಂಬಸ್ಥರಿಗೂ ಈ ಮೂಲಕ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಜನನ : 17-9-1959
ಮರಣ : 17-12-2002

ಪತ್ನಿ ಅನುರಾಧ ಅಪ್ಪಯ್ಯ
ತಾಯಿ ಲಲಿತ ಮಾದಯ್ಯ ಹಾಗೂ ಮಕ್ಕಳು,
ಮೈಸೂರು.

Reg. No. KA/SK/MYS-88/2003 Registered : 10-01-96 TCI Kar. 09592

ಮದೆ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಪಟ್ಟಡ ಉಲ್ಲಾಸ ಆಯ್ಕೆ



ಪಟ್ಟಡ ಮುತ್ತಣ್ಣ ಉಲ್ಲಾಸನವರು ಮದೆ ಗ್ರಾಮ ಪಂಚಾಯಿತಿಯಲ್ಲಿ ಬೆಟ್ಟತ್ತೂರು - ಅವಂದೂರು ಗ್ರಾಮವನ್ನು ಪ್ರತಿನಿಧಿಸುತ್ತಿದ್ದು, ಈಗ ಮದೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಹಲವಾರು ಸಂಘ ಸಂಸ್ಥೆಗಳಲ್ಲಿ ದುಡಿಯುತ್ತಿರವ ಇವರು ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ಕಳೆದ 30 ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ತಮ್ಮ ಅಧಿಕಾರವಧಿಯಲ್ಲಿ ತಮ್ಮೂರಿನ ಸರ್ವತೋಮುಖ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿರುವ ಶ್ರೀಯುತರಿಗೆ ಪಟ್ಟಡ ಕುಟುಂಬಸ್ತರ ಹಾರ್ದಿಕ ಅಭಿನಂದನೆಗಳು ಹಾಗೂ ಶುಭಾಶಯಗಳು

ಪ್ರಕಟಣೆ : ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ
ಪಟ್ಟಡ ಕುಟುಂಬಸ್ತರ ಜೀರ್ಣೋದ್ಧಾರ ಸಂಘ, ಮತ್ತು ಕುಟುಂಬಸ್ತರು.

ಕೊಡಗು ಎಜುಕೇಷನ್ನ್ ಅಕಾಡೆಮಿ - ಬೆಂಗಳೂರು

Chapter II (ಸೀಮಿತ ವಿಷಯ) ಇಂಜೆನಿಯರ್ಸ್

10 ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂಧವರಲ್ಲಿ ಇಂಜಿನಿಯರ್ಸ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದವರು, ಹಾಲಿ ಸೇವೆ ಸಲ್ಲಿಸುತ್ತಿರುವವರು ಹಾಗೂ ಇಂಜಿನಿಯರ್ ವ್ಯಾಸಂಗ ಮಾಡುತ್ತಿರುವ ಯಾರೆ ಆದರೂ ಅವರನ್ನು ಒಂದು ಸೂರಿನಡಿಯಲ್ಲಿ ಸೇರಿಸುವ ಪ್ರಯತ್ನವಾಗಿದೆ. ಆಸಕ್ತರು ಈ ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣವಿವರದೊಂದಿಗೆ ಅರ್ಜಿ ಸಲ್ಲಿಸುವುದು.

Chapter III ವಕೀಲರು
IV ಸರ್ಕಾರಿ ಉದ್ಯೋಗಸ್ತರು.


Phone : 080/3539555
Mobile : 98441 72183

ವಿಳಾಸ : ಮೊಟ್ಟನ ರವಿಕುಮಾರ್,
Advocate, Secretary, KEA, C/o 156/1B, I Floor,
R.V. Road, Near Minerva Circle
Opp. Hero Honda Show Room, Bangalore - 4

26-1-2003 ರಂದು ಈ ಮೇಲ್ಕಂಡ ಶಾಲೆಯಲ್ಲಿ ಉಚಿತ ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ಶಾಲಾ ಮಕ್ಕಳು ಪಡೆದುಕೊಳ್ಳುವಂತೆ ಕೋರಲಾಗಿದೆ.

ಪುಣ್ಯ ಸ್ಮರಣೆ

ಬಾರಿಕೇರ ಧನು



ಜನನ : **24-4-1973**
ಮರಣ : **8-12-2002**

ಮೂಡಣದ ಚಂದ್ರನಂತೆ ನಮ್ಮೆಲ್ಲರಿಗೂ ಬೆಳಕಾಗಿ ಬಂದೆ, ಮಗುವಾಗಿ ಬೆಳೆದು ಯೌವ್ವನದ ಹೊಸ್ತಿಲಲ್ಲಿ ತಾವರೆಯಂತೆ ಎದ್ದುನಿಂತು ನಮ್ಮೆಲ್ಲರಿಗೂ ಆಸರೆಯಾಗಬೇಕಾದ ಆ ಜೀವ ಭಗವಂತನ ಆ ಕರೆಗೆ ಎದ್ದು ಹೋದೆಯಾ! ಚಿರಾಯುವಾಗಲಿ ಆ ನಿನ್ನ ಮನ, ಮರೆಯದ ಕನಸಿನ ಲೋಕದಲ್ಲಿ, ನಿನ್ನ ಸಂಸಾರಿಗರು

ಭಾವ : ವಾಟೇರಿ ನಾಣಯ್ಯ
ಅಕ್ಕ : ವೇದ
ಮಕ್ಕಳು : ಜೀವನ್, ಜೈ
ಜೈ ಜವಾನ್ ಸ್ಟಾಲ್,
ಖಾಸಗಿ ಬಸ್ ನಿಲ್ದಾಣ, ವಿರಾಜಪೇಟೆ
ಭಾವ : ಎಡಿಕೇರಿ ರಾಜ, ಅಕ್ಕ ಮೀನ
ಮಕ್ಕಳು : ಲೀತು, ಕಾವ್ಯ, ಶರಣು, ಬಲ್ಲಮಾವಟಿ
ಕೊಳಂಬೆ ವಿನು, ಅಭ್ಯತ್ ಮಂಗಲ
ಮತ್ತು ಮನೆಯವರು ಹಾಗೂ ಸ್ನೇಹಿತರು

ಅಣ್ಣ : ಬಾರಿಕೆರ ಮನು
ಇಗ್ಗುತಪ್ಪ ಕೋಲ್ಡ್ ಸ್ಟೋರೆಜ್,
ಖಾಸಗಿ ಬಸ್ ನಿಲ್ದಾಣ, ವಿರಾಜಪೇಟೆ
ಅಣ್ಣ : ಬಾರಿಕೇರ ಗಣೇಶ, ಅತ್ತಿಗೆ ಉಮಾ
ಮಕ್ಕಳು : ಟಿಂಕು, ಟೋನಿ
ಅಣ್ಣ : ಬಾರಿಕೇರ ಪಾಪಣ್ಣ, ಅತ್ತಿಗೆ ಜಯ
ಮಕ್ಕಳು : ಆಶಿ, ಮಧು
ಅಣ್ಣ : ಬಾರಿಕೇರ ನಂದಾ, ಅತ್ತಿಗೆ ಸವಿತಾ
ಮಗು : ರಿಸಿಕ

Kodagu Sangathi Kannada Fortnightly Edited, Published, Printed by **Pattada Sheelamani, 1055c, Doddanna Buildings, Hunsur Road, Hinkal Post, Mysore-570017. ☎ : 0821/404290.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.